## ಅಧ್ಯಾಯ 17

# ಬಾಬೆಲಿನ ನಾಶನ

ಮಹಾ ಬಾಬೆಲ್ ನಗರಿಯ ನಾಶನದ ಕುರಿತಾಗಿ ಪ್ರಕಟನೆ ಪುಸ್ತಕದಲ್ಲಿ ಹಂತಹಂತವಾದ ದೃಶ್ಯಾವಳಿಯು ಇರುತ್ತದೆ. ಅದು 14ನೇ ಅಧ್ಯಾಯದಲ್ಲಿ ಆರಂಭಗೊಳ್ಳುತ್ತದೆ, ಆಕಾಶದಲ್ಲಿ ಹಾರಾಡುವ ದೇವದೂತನೊಬ್ಬನು "ಬಿದ್ದಳು, ಬಿದ್ದಳು, ಬಾಬೆಲೆಂಬ ಮಹಾ ನಗರಿಯು ಬಿದ್ದಳು. ಆಕೆಯು ಸಕಲ ಜನಾಂಗಗಳಿಗೆ ತನ್ನ ಅತಿ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿಸಿದಳು" (14:8) ಎಂದು ಸಾರುತ್ತಾನೆ. ಬಾಬೆಲ್ ಯಾವದೆಂದು ಗುರುತಿಸಲ್ಪಟ್ಟಿಲ್ಲ ಅಥವಾ ಬಣ್ಣಿಸಲೂ ಪಟ್ಟಿಲ್ಲ. ಆಕೆಯ ಬೀಳುವಿಕೆಯ ಕುರಿತಾಗಿ ಮಾಡಲಾದ ಈ ಘೋಷಿಸುವಿಕೆಯನ್ನು ಹೊರತು ಪಡಿಸಿ, ಬೇರೆ ಇನ್ನಾವ ವಿವರಗಳೂ ಕೊಡಲ್ಪಟ್ಟಿರುವದಿಲ್ಲ.

16ನೇ ಅಧ್ಯಾಯದಲ್ಲಿ, ರೌದ್ರದ ಪಾತ್ರೆಗಳ ಕುರಿತಾದ ವಿಭಾಗದ ಪರಾಕಾಷ್ಠೆಯು ಬಾಬೆಲಿನ ನಾಶನವೇ ಆಗಿದೆ. "ಮಹಾ ಪಟ್ಟಣವು ಮೂರು ಭಾಗವಾಯಿತು; ಜನಾಂಗಗಳ ಪಟ್ಟಣಗಳು ಬಿದ್ದವು. ಇದಲ್ಲದೆ ದೇವರು ದೊಡ್ಡ ಬಾಬೆಲನ್ನು ಜ್ಞಾಪಿಸಿಕೊಂಡು ತನ್ನ ಉಗ್ರಕೋಪವೆಂಬ ದ್ರಾಕ್ಷಾರಸದ ಪಾತ್ರೆಯನ್ನು ಅವಳಿಗೆ ಕುಡಿಯಲು ಕೊಟ್ಟನು" (16:19). ಈ ವಿಭಾಗದಲ್ಲಿ, ಬಾಬೆಲ್ ಒಂದು ನಗರವಾಗಿ ಚಿತ್ರಿಸಲ್ಪಟ್ಟಿದೆ. ದೇವರು ಆಕೆಯೊಂದಿಗೆ ಅಸಮಾಧಾನಗೊಂಡಿದ್ದನೆಂಬುದು ಸ್ಪಷ್ಟವಾಗುತ್ತದೆ, ಆದರೆ ಅನೇಕ ಪ್ರಶ್ನೆಗಳಿಗೆ ಉತ್ತರವು ಸಿಕ್ಕದೆ ಹೋಗುತ್ತದೆ: "ಬಾಬೆಲ್ ಒಂದು ವಾಸ್ತವಿಕವಾದ ಪಟ್ಟಣವಾಗಿತ್ತೋ, ಮತ್ತು ಹಾಗಿರುವದೇ ಆದಲ್ಲಿ, ಅದು ಯಾವ ಪಟ್ಟಣ?"; "ದೇವರಿಗೆ ಕೋಪವನ್ನು ಎಬ್ಬಿಸುವ ಯಾವ ಕಾರ್ಯವನ್ನು ಬಾಬೆಲ್ ಮಾಡಿತ್ತು?"; "ಆಕೆಯು ಯಾವ ವಿಧದಲ್ಲಿ ನಾಶಗೊಳಿಸಲ್ಪಡಲಿದ್ದಳೂ?"

ಅಂತಿಮವಾಗಿ, 17ರಿಂದ 19 ಅಧ್ಯಾಯಗಳು ಬಾಬೆಲಿನ ನಾಶನದ ಕುರಿತು "ಪೂರ್ಣ ಕಥೆ"ಯನ್ನು ಒದಗಿಸುತ್ತವೆ: 17ನೇ ಅಧ್ಯಾಯದಲ್ಲಿ, ಬಾಬೆಲಿನ ಗುರುತಿನ ವಿಷಯವಾಗಿ ಒಂದು ವಿವರಣೆಯು ಕಾಣಿಸಿಕೊಳ್ಳುತ್ತದೆ. 18ನೇ ಅಧ್ಯಾಯದಲ್ಲಿ, ಆಕೆಯ ಬೀಳುವಿಕೆಯನ್ನು ಕಣ್ಣಿಗೆ ಕಟ್ಟಿದಂತೆ ಬಣ್ಣಿಸಲ್ಪಟ್ಟಿದೆ. 19ನೇ ಅಧ್ಯಾಯದಲ್ಲಿ, ಆಕೆಯ ಬೀಳುವಿಕೆಗೋಸ್ಕರ ವಿಶ್ವಾಸಿಗಳೊಳಗೆ ಒಂದು ಸಂಭ್ರಮ ಉಂಟಾಗುವದು. ಬಾಬೆಲಿನ ಬೀಳುವಿಕೆಯ ಕುರಿತಾಗಿ ವಿವರಿಸಲು ಕೊಡಲ್ಪಟ್ಟಿರುವ ಸ್ಥಳಾವಕಾಶವನ್ನು ನೋಡುವಾಗ ಅದು ಈ ಘಟನೆಯು ಎಷ್ಟೊಂದು ಮಹತ್ವಪೂರ್ಣವೆಂಬುದನ್ನು ಸೂಚಿಸುತ್ತದೆ.

ಚರ್ಚೆಯಲ್ಲಿರುವ ಅಧ್ಯಾಯದ ವಿಷಯವಾಗಿ, William Barclayನು ಹೀಗೆ ಹೇಳಿದನು, "17ನೇ ಅಧ್ಯಾಯವು *ಪ್ರಕಟನೆ* ಪುಸ್ತಕದಲ್ಲಿಯೇ ಅತ್ಯಂಥ ಕಠಿಣವಾದವುಗಳಲ್ಲೊಂದಾಗಿದೆ."[1] Homer Haileyನು 17:8-11ರ ವಾಕ್ಯಭಾಗವನ್ನು "ಬಹುಶಃ ಇಡೀ ಪುಸ್ತಕದಲ್ಲಿಯೇ ಅರ್ಥನಿರೂಪಣೆ ಮಾಡುವದಕ್ಕೆ ಅತ್ಯಂಥ ಕಠಿಣವಾದ ವಾಕ್ಯಭಾಗ"[2] ಎಂದು ಕರೆದನು. Henry Sweteನು ಈ ವಾಕ್ಯಭಾಗವು "ಒಂದು ಕೂಟೋಕ್ತಿ ಆಗಿದ್ದು, ಅದಕ್ಕೆ ಒಂದಕ್ಕಿಂತಲೂ ಅಧಿಕ ಪರಿಹಾರನ್ನು ಕಂಡುಕೊಳ್ಳಬಹುದಾಗಿದೆ"[3] ಎಂದು ಹೇಳಿದನು. Edward McDowellನು ಬರೆದದ್ದೇನೆಂದರೆ, "ನಾವು ಏಳು ಮಂದಿ ಅರಸರು" ಮತ್ತು "ಮೊದಲಿದ್ದು ಈಗ

ಇಲ್ಲದಿರುವ ಆ ಮೃಗ ಎಂಬ ಒಗಟಿನ [ಅರ್ಥವನ್ನು] ನಾವು ಕೇವಲ ಊಹೆ ಮಾತ್ರ ಮಾಡಿಕೊಳ್ಳಬಲ್ಲೆವು."[4]

ನಮ್ಮಲ್ಲಿ ಅನೇಕರಿಗೆ ಅಂತ್ಯಕಾಲಿಕ ಸಾಹಿತ್ಯದ ವಿಷಯದಲ್ಲಿ ಪರಿಚಯವಿರುವದಿಲ್ಲ ಹಾಗೂ ಮುಜುಗರ ಇರುತ್ತದೆ ಎಂಬ ವಾಸ್ತವಾಂಶದಲ್ಲಿ ಸಮಸ್ಯೆಯು ಇರಬಹುದಾಗಿದೆ. ಬಹುಶಃ ಒಬ್ಬ ದೇವದೂತನ ಮಾತುಗಳು ನಮಗಿಂತಲೂ ಅಧಿಕವಾಗಿ ಪ್ರಥಮ ಶತಮಾನದ ಕ್ರೈಸ್ತರಿಗೆ ಹೆಚ್ಚಿನ ಅರ್ಥವನ್ನು ಹೊಂದಿರಬಹುದಾಗಿದೆ. ಇನ್ನೊಂದು ಸಾಧ್ಯತೆಯು ಏನೆಂದರೆ ಅವುಗಳು ಅಧ್ಯಾಯವನ್ನು ಈಗ ಇರುವದಕ್ಕಿಂತ ಇನ್ನಷ್ಟು ಅಧಿಕ ಕ್ಲಿಷ್ಟಕರಗೊಳಿಸಬಹುದಾಗಿದೆ. ಬಹುಶಃ ವಾಕ್ಯಭಾಗದ ಉದ್ದೇಶವು ರೋಮನ್ ಚಕ್ರವರ್ತಿಗಳ ಕುರಿತು ನಮಗೆಷ್ಟು ತಿಳಿದದೆ ಎಂಬುದಾಗಿ ಪ್ರಶ್ನೆ ಕೇಳುವದು ಆಗಿರುವದಿಲ್ಲ. 10ರಿಂದ 12 ವಚನಗಳಲ್ಲಿರುವ ಪ್ರತಿಯೊಬ್ಬ ಅರಸನು ಯಾರೆಂಬುದನ್ನು ಗುರುತಿಸುವದು ಅವಶ್ಯಕವಾಗಿರಬಹುದು.

17ನೇ ಅಧ್ಯಾಯದ ಪ್ರಮುಖ ಉದ್ದೇಶವು ಬಹುಶಃ ಪ್ರಕಟನೆ ಪುಸ್ತಕವು ಬರೆಯಲ್ಪಡುವ ವೇಳೆ ಸಿಂಹಾಸನದಲ್ಲಿದ್ದ ಕೈಸರನು ಯಾರು ಎಂಬುದನ್ನು ಗುರುತಿಸುವದಾಗಲಿ, ಅಥವಾ "ನಿರೋ ಮತ್ತೇ ಜೀವ ಪಡೆದ ಕಟ್ಟುಕಥೆ"ಗೆ – ನಿರೋ ಹಿಂದಿರುಗಿ ಬರುವನು ಎಂಬ ವಿಚಾರ – ಕ್ರೈಸ್ತೀಯ ತಿರುವು ನೀಡುವದಾಗಲಿ ಆಗಿರಲಿಲ್ಲ. ಬದಲಾಗಿ ತನ್ನ ವಾಚಕರು ರೋಮ್ ನಾಶನದ ಕಡೆಗೆ ಸಾಗುತ್ತಿದೆ ಎಂಬುದನ್ನು ಅರ್ಥಮಾಡಿಕೊಳ್ಳುವಂತಾಬೇಕು ಎಂಬುದು ಯೋಹಾನನ ಉದ್ದೇಶವಾಗಿತ್ತು, ಮತ್ತು ಇಂದಿನ ವಾಚಕರಿಗಾಗಿ ಇರುವ ಸಂದೇಶವು ಏನೆಂದರೆ ಕರ್ತನಿಗೆ ವಿರುದ್ಧವಾಗಿರುವ *ಎಲ್ಲವೂ* ಅಂತಿಮವಾಗಿ ಅಡಗಿಸಲ್ಪಡುವದು ಎಂಬುದೇ.

## ಮಹಾ ಜಾರಸ್ತ್ರೀ (17:1-7)

**[1]ಏಳು ಪಾತ್ರೆಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರಲ್ಲಿ ಒಬ್ಬನು ಬಂದು ನನ್ನ ಸಂಗಡ ಮಾತಾಡಿ - ಬಾ, ಬಹಳ ನೀರುಗಳ ಮೇಲೆ ವಾಸಿಸಿರುವ ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು ನಿನಗೆ ತೋರಿಸುತ್ತೇನೆ; [2]ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು, ಮತ್ತು ಭೂನಿವಾಸಿಗಳು ಅವಳ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿದು ಮತ್ತರಾದರು ಎಂದು ಹೇಳಿದನು. [3]ಆಗ ಅವನು ದೇವರಾತ್ಮವಶನಾದ ನನ್ನನ್ನು ಎತ್ತಿಕೊಂಡು ಅಡವಿಗೆ ಹೋದನು. ಅಲ್ಲಿ ನಾನು ರಕ್ತವರ್ಣದ ಮೃಗದ ಮೇಲೆ ಕೂತಿದ್ದ ಒಬ್ಬ ಸ್ತ್ರೀಯನ್ನು ಕಂಡೆನು; ಆ ಮೃಗದ ಮೈಮೇಲೆಲ್ಲಾ ದೇವದೂಷಣೆಯ ಹೆಸರುಗಳು ತುಂಬಿದ್ದವು. [4]ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಇದ್ದವು. ಆ ಸ್ತ್ರೀಯು ಧೂಮ್ರವರ್ಣದ ವಸ್ತ್ರಗಳನ್ನೂ ರಕ್ತಾಂಬರವನ್ನೂ ಧರಿಸಿಕೊಂಡು ಚಿನ್ನ ರತ್ನ ಮುತ್ತು ಇವುಗಳಿಂದ ಅಲಂಕರಿಸಿಕೊಂಡಿದ್ದಳು; ಅವಳ ಕೈಯಲ್ಲಿ ಒಂದು ಚಿನ್ನದ ಬಟ್ಟಲು ಇತ್ತು; ಅದು ಅಸಹ್ಯವಾದವುಗಳಿಂದ ಅಂದರೆ ಅವಳ ಜಾರತ್ವ ಸಂಬಂಧವಾದ ಅಶುದ್ಧ ವಸ್ತುಗಳಿಂದ ತುಂಬಿತ್ತು. [5]ಅವಳ ಹಣೆಯ ಮೇಲೆ - ಬಾಬೆಲೆಂಬ ಮಹಾನಗರಿ, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ ಎಂದು ಗೂಢಾರ್ಥವುಳ್ಳ ಹೆಸರು ಬರೆದಿತ್ತು. [6]ಆ ಸ್ತ್ರೀಯು ದೇವಜನರ ರಕ್ತವನ್ನೂ ಯೇಸುವಿಗೋಸ್ಕರ ಸಾಕ್ಷಿ ಕೊಟ್ಟು ಹತರಾದವರ ರಕ್ತವನ್ನೂ ಕುಡಿದು ಮತ್ತಳಾಗಿರುವದನ್ನು ಕಂಡೆನು. ನಾನು ಅವಳನ್ನು ನೋಡಿ ಅತ್ಯಾಶ್ಚರ್ಯಪಟ್ಟೆನು. [7]ಆಗ ಆ ದೇವದೂತನು ನನಗೆ ಹೇಳಿದ್ದು - ನೀನೇಕೆ ಆಶ್ಚರ್ಯಪಟ್ಟೆ? ಆ ಸ್ತ್ರೀಯಿಂದಲೂ ಅವಳ ವಾಹನವಾಗಿದ್ದ ಏಳು**

**ತಲೆಗಳೂ ಹತ್ತು ಕೊಂಬುಗಳೂ ಉಳ್ಳ ಮೃಗದಿಂದಲೂ ಸೂಚಿತವಾದ ಗೂಢಾರ್ಥವನ್ನು ನಾನು ನಿನಗೆ ವಿವರಿಸುತ್ತೇನೆ.**

ಬಾಬೆಲಿಗೆ ಸೈತಾನನ ಯೋಜನೆಯೊಳಗೆ ಒಂದು ವಿಶಿಷ್ಟವಾದ ಸ್ಥಾನವಿತ್ತು: ಆಕೆಯು ಸೈತಾನನ ಮೂರನೆಯ ಮಿತ್ರಳಾಗಿದ್ದಾಳೆ. ಮೊದಲ ಮಿತ್ರ ಸಮುದ್ರದಿಂದ ಬಂದ ಮೃಗವಾಗಿತ್ತು, ಸಾಮಾನ್ಯವಾಗಿ ಅದು "ಮೃಗ" ಎಂದು ಕರೆಯಲ್ಪಡುತ್ತದೆ; ಎರಡನೆಯದ್ದು ಭೂಮಿಯಿಂದ ಬಂದ ಮೃಗ, ಅದು "ಸುಳ್ಳು ಪ್ರವಾದಿ" ಎಂದು ಕರೆಯಲ್ಪಟ್ಟಿದೆ; ಮಹಾ ಬಾಬೆಲ್ ನಗರಿಯು ಮೂರನೆಯದ್ದಾಗಿದೆ. ರೋಮನ್ ಸಾಮ್ರಾಜ್ಯದ ಸಂಕೇತವಾಗಿದ್ದ ಮೃಗವು, ಸೈತಾನನು ಬಳಸುವ ಒಂದು ದಾರಿಯನ್ನು ಪ್ರತಿನಿಧಿಸುತ್ತದೆ: *ಬೆದರಿಸುವಿಕೆ* (13:1, 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಚಕ್ರವರ್ತಿಯ ಆರಾಧನೆಯನ್ನು ಒತ್ತಾಯದಿಂದ ಜಾರಿಗೆ ತರುವ ದಳ್ಳಾಳಿ ಸಂಸ್ಥೆಗಳನ್ನು ಸಂಕೇತಿಸುವಂಥ ಸುಳ್ಳು ಪ್ರವಾದಿಯು, ಸೈತಾನನಿಂದ ಬಳಸಲ್ಪಡುವ ಎರಡನೆಯ ದಾರಿಯನ್ನು ಪ್ರತಿನಿಧಿಸುತ್ತದೆ: *ಮರುಳುಗೊಳಿಸುವಿಕೆ* (12:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮಹಾ ಬಾಬೆಲ್ ನಗರಿಯು ಮೂರನೆಯ ದಾರಿಯೊಂದನ್ನು ಪ್ರತಿನಿಧಿಸುತ್ತದೆ: *ಮೋಹಕ್ಕೊಳಪಡಿಸುವದು.*

ಒಬ್ಬ ವ್ಯಕ್ತಿಯ ಹೃದಯ ಅಥವಾ ಆಂತರ್ಯವು ಬುದ್ಧಿ, ಸಂವೇದನೆ, ಹಾಗೂ ಚಿತ್ತವನ್ನೊಳಗೊಂಡು ರಚಿಸಲ್ಪಟ್ಟಿರುತ್ತದೆ. ಸೈತಾನನು ಬೆದರಿಕೆಯನ್ನೊಡ್ಡುವ ಮೂಲಕವಾಗಿ ಒಬ್ಬನ ಚಿತ್ತವನ್ನು ಬಾಗಿಸುವದಕ್ಕೆ ಪ್ರಯತ್ನಿಸುತ್ತಾನೆ. ಅದು ಯಶಸ್ವಿಯಾಗಲಿಲ್ಲವಾದರೆ, ಆತನು ವ್ಯಕ್ತಿಯ ಬುದ್ಧಿಯ ಮೇಲೆ ಮರುಳುಗೊಳಿಸುವ ಆವರಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ. ಹೇಗೂ, ಒಬ್ಬ ವ್ಯಕ್ತಿಯು ಆತನ ಒತ್ತಡಕ್ಕೆ ಮಣಿಯದಷ್ಟು ಮೊಂಡನಾಗಿರುವದಾದರೆ ಮತ್ತು ಆತನ ಸುಳ್ಳುಗಳನ್ನು ನಂಬುದಕ್ಕಾಗದಷ್ಟು ಅತಿ ವಿವೇಚನೆಯುಳ್ಳವನಾಗಿದ್ದಲ್ಲಿ, ಸೈತಾನನು ಸೋತು ಪ್ರಯತ್ನವನ್ನು ನಿಲ್ಲಿಸುವದಿಲ್ಲ: ಆತನ ಬಳಿಯಲ್ಲಿ ಇನ್ನೂ ಮಹಾ ಬಾಬೆಲ್ ಇರುತ್ತಾಳೆ, ಆಕೆಯು ಆ ವ್ಯಕ್ತಿಯ ಭಾವಗಳ ಕರಾಳ ಬದಿಯನ್ನು ವ್ಯಾಮೋಹಕ್ಕೊಳಪಡಿಸುವಳು. ಆಕೆಯು ಮೋಹಕ್ಕೆ ಒಳಗಾಗುವಂತೆ ಮಾಡಲು ಪ್ರಯತ್ನಿಸುವಳು - ಮತ್ತು ಆಕೆಯು ಸೋಲುವದಕ್ಕಿಂತಲೂ ಯಶಸ್ವಿಗೊಳ್ಳುವದೇ ಅಧಿಕವಾಗಿರುತ್ತದೆ.

**ವಚನ 1.** ವಾಕ್ಯಭಾಗವು ಹೀಗೆ ಆರಂಭಗೊಳ್ಳುತ್ತದೆ, **ಏಳು ಪಾತ್ರೆಗಳನ್ನು ಹಿಡಿದಿದ್ದ ಏಳು ಮಂದಿ ದೇವದೂತರಲ್ಲಿ ಒಬ್ಬನು ಬಂದು ನನ್ನ ಸಂಗಡ ಮಾತಾಡಿ – ಬಾ** ಅಂದನು. ಏಳು ದೇವದೂತರಳೊಳಗೆ ಈತನು ಯಾರೆಂಬುದನ್ನು ವಾಚಕನಿಗೆ ಹೇಳಲಾಗುವದಿಲ್ಲ. ಆತನು ಬಾಬೆಲಿನ ಮೇಲೆ ಪರಿಣಾಮವನ್ನುಂಟು ಮಾಡಿದ್ದ ಏಳನೆಯ ದೇವದೂತನಾಗಿರುವದಕ್ಕೆ ಸಾಧ್ಯವಿದೆ (16:17–19) - ಆದರೆ ಅದು ಪ್ರಾಮುಖ್ಯವಾದ ವಿವರ ಆಗಿರುವದಿಲ್ಲ. ಪ್ರಾಮುಖ್ಯವಾದದ್ದು *ಏನೆಂದರೆ* 21:9ರಲ್ಲಿ ಮತ್ತೊಬ್ಬ ಸ್ತ್ರೀಯಾದ ಕ್ರಿಸ್ತನ ಮದಲಗಿತ್ತಿಯನ್ನು ಪರಿಚಯಿಸುವದಕ್ಕೆ ಹೆಚ್ಚುಕಡಿಮೆ ತದ್ರೂಪವಾದ ಪದಗಳು ಬಳಸಲ್ಪಟ್ಟಿವೆ. ವಾಚಕನು ಇಬ್ಬರು ಸ್ತ್ರೀಯರ ನಡುವೆ ಹೋಲಿಕೆಯನ್ನು ಮಾಡಬೇಕೆಂದು ನಿರೀಕ್ಷಿಸಲಾಗಿರುತ್ತದೆ.

ದೇವದೂತನು ಯೋಹಾನನಿಗೆ ಹೀಗೆ ಹೇಳಿದನು, **ಬಹಳ ನೀರುಗಳ ಮೇಲೆ ವಾಸಿಸಿರುವ ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು ನಿನಗೆ ತೋರಿಸುತ್ತೇನೆ.** ಮಹಾ ಬಾಬೆಲ್ ನಗರಿಯ ಕುರಿತು ಬಳಸಲಾಗಿರುವ ಬಹಳಷ್ಟು ಚಿತ್ರಣವು ಯೂಫ್ರೇಟಿಸ್ ದಡದಲ್ಲಿದ್ದ ಬಾಬಿಲೋನಿನ ಕುರಿತಾಗಿ ಹಳೆಯ ಒಡಂಬಡಿಕೆಯಲ್ಲಿ ಬಳಸಿರುವ ಚಿತ್ರಣವನ್ನೇ ಹೋಲುತ್ತದೆ. ಉದಾಹರಣೆಗೆ, 1ನೇ ವಚನವನ್ನು ಯೆರೆಮೀಯ 51:13ರೊಂದಿಗೆ ಹೋಲಿಸಿ ನೋಡಿರಿ, ಅದು ಹೀಗೆ ಹೇಳುತ್ತದೆ

"ಆಹಾ, ಬಹುಜಲಮಧ್ಯನಿವಾಸಿನಿಯಾದ ನಗರಿಯೇ, ಧನಭರಿತ ಪುರಿಯೇ, ನಿನ್ನ ಅಂತ್ಯವು ಬಂದಿದೆ, ನೀನು ಸೂರೆಮಾಡಿದ್ದು ಸಾಕು."

5ನೇ ವಚನದಲ್ಲಿ, ಈ **ಮಹಾ ಜಾರಸ್ತ್ರೀ**ಯು "ಬಾಬೆಲೆಂಬ ಮಹಾ ನಗರಿ" ಎಂದು ಕರೆಯಲ್ಪಟ್ಟಿದ್ದಾಳೆ. "ಜಾರಸ್ತ್ರೀ" ಎಂಬ ಪದವು ವಾಚಕನಿಗೆ ತಕ್ಷಣವೇ ಆಕೆಯ ಕೆಲಸವು ಮೋಹಕ್ಕೊಳಪಡಿಸುವದೇ ಆಗಿತ್ತದೆಂಬುದನ್ನು ತಿಳಿಸುತ್ತದೆ (ನೋಡಿರಿ ಜ್ಞಾನೋಕ್ತಿ 5; 7; 9). ದೇವದೂತನು ಬಳಿಕ **ಬಹಳ ನೀರುಗಳು** ಎಂಬುದರ ಅರ್ಥನಿರೂಪಣೆ ಮಾಡುತ್ತಾನೆ: "ಆ ಜಾರಸ್ತ್ರೀಯು ವಾಸಿಸಿರುವ ನೀರುಗಳನ್ನು ಕಂಡಿಯಲ್ಲ? ಅವು ಪ್ರಜೆ ಸಮೂಹ ಜನ ಭಾಷೆಗಳನ್ನು ಸೂಚಿಸುತ್ತವೆ" (ವ. 15). ಕೆಲವೊಂದಿಷ್ಟು ಲೇಖಕರು ಜಾರಸ್ತ್ರೀಯು ರೋಮ್ ನಗರವಾಗಿರುವದಕ್ಕೆ ಸಾಧ್ಯವಿರಲಿಲ್ಲ ಯಾಕೆಂದರೆ ರೋಮ್ ನಗರವು ಸಮೃದ್ಧವಾಗಿರುವ ನೀರುಗಳ ಬಳಿಯಲ್ಲಿದ್ದ ಸ್ಥಳವಾಗಿರಲಿಲ್ಲ ಎಂದು ಹೇಳಿರುತ್ತಾರೆ. ಹೇಗೂ, ಪವಿತ್ರಾತ್ಮನು ಅಕ್ಷರಶಃ ನೀರನ್ನು ಸೂಚಿಸಿ ಹೇಳುತ್ತಿಲ್ಲ, ಆದರೆ *ಜನರನ್ನು* ಸೂಚಿಸಿ ಹೇಳುತ್ತಿದ್ದಾನೆ ಎಂಬುದನ್ನು 15ನೇ ವಚನವು ತೋರಿಸಿ ಕೊಡುತ್ತದೆ. "ಸಕಲ ಕುಲ ಭಾಷೆ ಪ್ರಜೆ ಜನಾಂಗಗಳು" ಎಂಬ ಜನರ ನಾಲ್ಕು ವರ್ಗೀಕರಣದಲ್ಲಿ ಎಲ್ಲರೂ ಸೇರಿರುತ್ತಾರೆ (ನೋಡಿರಿ 5:9; 7:9; 10:11; 11:9; 13:7; 14:6; ಮತ್ತು 5:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). *ನಾಲ್ಕು* ಪದಗಳ ಬಳಕೆಯು ಸಕಲ ಮಾನವರು ಅದರಲ್ಲಿ ಭಾಗಿಯಾಗಿದ್ದರೆಂಬ ವಿಚಾರವನ್ನು ಬಲಪಡಿಸುತ್ತದೆ; "ನಾಲ್ಕು" ಮಾನವರ ಸಂಖ್ಯೆಯಾಗಿದೆ. **ಮೇಲೆ ಕೂತಿರುವ** ಎಂಬ ಪದಗುಚ್ಛವು ಮಹಾ ಜಾರಸ್ತ್ರೀ ಲೋಕದ ಚಡಪಡಿಸುತ್ತಿರುವ ಜನಸಮೂಹಗಳ *ಮೇಲೆ ಆಳ್ವಿಕೆಮಾಡುವಳು* ಎಂಬುದನ್ನು ಸೂಚಿಸುತ್ತದೆ.

ದರ್ಶನದಲ್ಲಿ, ಜಾರಸ್ತ್ರೀಯ ಸ್ಥಾನವು ಅಸೂಯೆ ಹುಟ್ಟಿಸುವಂತಿರುತ್ತದೆ; ಆಕೆಯು "ಸಾಧನೆ ಮಾಡಿರುವಂತೆ" ಕಾಣಿಸುತ್ತಾಳೆ - ಆದರೆ ನಾವು ದರ್ಶನದ ಉದ್ದೇಶ ಕುರಿತ ದೃಷ್ಟಿಯನ್ನು ಕಳೆದುಕೊಳ್ಳಬಾರದು. ದೇವದೂತನು "ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು [*ಅಪರಾಧನಿರ್ಣಯವನ್ನು*]" ತೋರಿಸುತ್ತಿದ್ದಾನೆ (17:1). ಒಂದು ಹಳೇ ಜ್ಞಾನೋಕ್ತಿಯು ಹೀಗಿರುತ್ತದೆ, "ಅವರು ಎಷ್ಟು ದೊಡ್ಡ ಗಾತ್ರದವರಾಗಿರುತ್ತಾರೋ ಅವರ ಬೀಳುವಿಕೆ ಸಹ ಅಷ್ಟೇ ರಭಸವಾಗಿರುತ್ತದೆ." ಆ ಜ್ಞಾನೋಕ್ತಿಯು ಗೋಲ್ಯಾತನಿಗೆ ಅನ್ವಯವಾಗಿತ್ತು. ಅದು ಪ್ರಕಟನೆ ಪುಸ್ತಕದಲ್ಲಿರುವ ಮಹಾ ಬಾಬೆಲಿಗೆ ಸಹ ಅನ್ವಯವಾಗುತ್ತದೆ.

ಜಾರಸ್ತ್ರೀಯ ಗುರುತಿನ ಬಗ್ಗೆ ಅನಂತರದಲ್ಲಿ ಚರ್ಚಿಸಲಾಗುವದು, ಆದರೆ J. W. Robertsನ ವ್ಯಾಖ್ಯೆಯು ಈ ಅಂಶಕ್ಕೆ ಸಂಬಂಧಪಟ್ಟದ್ದಾಗಿರುತ್ತದೆ: "ಯೋಹಾನನಿಗೆ ತೋರಿಸಲ್ಪಟ್ಟಂಥ ಸಭೆಯು ಹೆದರುತ್ತಿದ್ದ ಶಕ್ತಿಶಾಲಿ ಮಧ್ಯವರ್ತಿಯ - ರೋಮ್ ನಗರ ಹಾಗೂ ಸಾಮ್ರಾಜ್ಯ - ನಾಶನವನ್ನು ಮುಂತಿಳಿಸುತ್ತದೆ ಎಂಬದನ್ನು ಹೊರತು ಪಡಿಸಿ ಬೇರೆ ಇನ್ನಾವ ಮುಕ್ತಾಯಕ್ಕೂ ಬರುವ ಸಾಧ್ಯತೆಯು ಇರುವಂತೆ ಕಾಣಿಸುವದಿಲ್ಲ."[5] ಮೊದಲ ಶತಮಾನದ ಕ್ರೈಸ್ತರಿಗಾದರೋ, ದರ್ಶನವು ಹೀಗೆ ಹೇಳುವದಾಗಿತ್ತು, "ಹೊರನೋಟಗಳಲ್ಲಿ ಹಾಗಿಲ್ಲದಿದ್ದರೂ, ರೋಮಿನ ದಿನಗಳು ಲೆಕ್ಕಿಸಲ್ಪಟ್ಟಿವೆ."

**ವಚನ 2.** ಜಾರಸ್ತ್ರೀಯು ತನ್ನ ವೃತ್ತಿಯಲ್ಲಿ ಅನುಭವಿಸಿದ ಯಶಸ್ಸು 2ನೇ ವಚನದಲ್ಲಿ ಒತ್ತಿ ಹೇಳಲ್ಪಟ್ಟಿದೆ: **ಅವಳೊಂದಿಗೆ ಭೂರಾಜರು ಜಾರತ್ವ ಮಾಡಿದರು**. ಮಹಾ ಬಾಬೆಲೆಂಬ ನಗರಿಯ ಬಣ್ಣನೆಯನ್ನು ಹಳೆಯ ಒಡಂಬಡಿಕೆಯಲ್ಲಿರುವ ತುರ್ ಪಟ್ಟಣದೊಂದಿಗೆ ಹೋಲಿಸಿರಿ (ಯೆಶಾಯ 23:15-17). **ಭೂರಾಜರು** ವಿಶ್ವದಲ್ಲೆಲ್ಲಾ ಇರುವ ಪ್ರಭಾವಶಾಲಿ ದೊರೆಗಳಾಗಿದ್ದರು. ಸಾಧ್ಯವಾದ ಸ್ಥಳಗಳೆಲ್ಲೆಲ್ಲಾ ಸ್ಥಳೀಯ ನಾಯಕತ್ವವನ್ನು ಉಳಿಸಿಕೊಳ್ಳುವದು ರೋಮಿನ ಒಂದು

ರಾಜನೀತಿಯಾಗಿತ್ತು. ಸ್ಥಳಿಯ ದೊರೆಗಳು ರೋಮನ್ ಅಧಿಕಾರಿಗಳ ಅಧೀನಕ್ಕೊಳಪಟ್ಟಿರುತ್ತಿದ್ದರು ಮತ್ತು ರೋಮಿನೊಂದಿಗೆ ಸಹಕಾರವನ್ನು ತೋರದಿರುವದಾದರೆ ಅವರನ್ನು ಅಧಿಕಾರದಿಂದ ಕಿತ್ತು ಹಾಕಬಹುದಾಗಿತ್ತು. ರೋಮಿನ ನಿರ್ಧಾರಸ್ವಾತಂತ್ರ್ಯದ ಅಧೀನದಲ್ಲಿ ಆಳ್ವಿಕೆ ಮಾಡಿದ ಅರಸುಗಳಿಗೆ ಒಂದು ಉದಾಹರಣೆಯೆಂದರೆ ಹೆರೋದನ ವಂಶಸ್ಥರು.

ಸ್ಥಳೀಯ ದೊರೆಗಳು ಮಹಾ ಜಾರಸ್ತ್ರೀಯ ಸಂಗಡ **ಜಾರತ್ವ ಮಾಡಿದರು**, ಮತ್ತು ಅವರ ಪ್ರಜೆಗಳು ಅವರ ಮಾದರಿಯನ್ನು ಅನುಸರಿಸಿದರು: **ಮತ್ತು ಭೂನಿವಾಸಿಗಳು ಅವಳ ಜಾರತ್ವವೆಂಬ ದ್ರಾಕ್ಷಾರಸವನ್ನು ಕುಡಿದು ಮತ್ತರಾದರು** (ನೋಡಿರಿ ಯೆರೆಮೀಯ 51:7). ಈ ಭೂನಿವಾಸಿಗಳು ಕ್ರೈಸ್ತೇತರರಾಗಿದ್ದರು. ಒಬ್ಬ ನಿರ್ಲಜ್ಜೆಯ ಸಂಗಾತಿಯು ಪ್ರತಿರೋಧವನ್ನು ತಗ್ಗಿಸುವದಕ್ಕೋಸ್ಕರ ಮದ್ಯವನ್ನು ಬಳಸುವ ಒಂದು ಸಾದೃಶ್ಯವು ಇದಾಗಿದೆ. ಮಹಾ ಜಾರಸ್ತ್ರೀಗೆ ಸಕಲ ಕೈಚಳಕಗಳೂ ಕರಗತವಾಗಿದ್ದವು.

**ವಚನ 3.** ದೇವದೂತನು **ದೇವರಾತ್ಮವಶನಾದ** ಅಪೊಸ್ತಲನನ್ನು **ಎತ್ತಿಕೊಂಡು ಅಡವಿಗೆ ಹೋದನು.** ಮೂಲವಾಕ್ಯದಲ್ಲಿ **ದೇವರಾತ್ಮವಶನಾದ** ಎಂಬುದರ ಬದಲಾಗಿ ಕೇವಲ "ಆತ್ಮದಲ್ಲಿ" (ἐν πνεύματι, *en pneumati*) ಎಂದು ಬಳಸಲ್ಪಟ್ಟಿದೆ: ನಿರ್ದಿಷ್ಟಗುಣವಾಚಿಯು ("the") ಬಳಸಲ್ಪಟ್ಟಿಲ್ಲ, "ಆತ್ಮ" ಎಂಬ ಪದವು "S" ನಿಂದ ಆರಂಭವಾಗತಕ್ಕದ್ದೋ ಎಂಬ ವಿಷಯವಾಗಿ ಯಾವದೇ ಸೂಚನೆಯೂ ಕೊಡಲ್ಪಟ್ಟಿರುವದಿಲ್ಲ (1:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅದೇ ಪದಗುಚ್ಛವು 1:10; 4:2; 17:3; ಮತ್ತು 21:10ರಲ್ಲಿ ಸಹ ಸಿಕ್ಕುತ್ತದೆ. ಹೇಗೂ, NASBಯು ಸೂಚಿಸುವ ಪ್ರಕಾರ, ಯೋಹಾನನು ಪವಿತ್ರಾತ್ಮನ ನಿಯಂತ್ರಣದಲ್ಲಿ ಮುಂದುವರೆದನು ಎಂಬ ಅಂಶವು ಇಲ್ಲಿರುವಂತೆ ತೋರುತ್ತದೆ. ವಾಕ್ಯಭಾಗವು ಬಹುಶಃ ದೇವದೂತನು ಯೋಹಾನನನ್ನು ಶಾರೀರಿಕವಾಗಿ ಎತ್ತಿಕೊಂಡು ಹೋದನು ಎಂಬ ಅರ್ಥವನ್ನು ಕೊಡುವದಿಲ್ಲವೆಂದು ತೋರುತ್ತದೆ. ಬದಲಾಗಿ ಆತನು ವಾಕ್ಯದಲ್ಲಿ ಮುಂದೆ ಬರುವ ದೃಶ್ಯದೊಳಕ್ಕೆ ಆಲೋಚನೆಯಲ್ಲಿ "ಸಾಗಿಸಲ್ಪಟ್ಟನು."

**ಅರಣ್ಯವು** 12ನೇ ಅಧ್ಯಾಯದಲ್ಲಿನ ಸ್ತ್ರೀಯು ದೇವರಿಂದ ಕಾಪಾಡಲ್ಪಡುವದಕ್ಕೆ ಕರೆದುಕೊಂಡು ಹೋಗಲ್ಪಟ್ಟ (12:14) ಸ್ಥಳವೇ ಆಗಿತ್ತು. ಬಹುಶಃ ಯೋಹಾನನು ಮಹಾ ಜಾರಸ್ತ್ರೀಗೆ ತಪ್ಪಿಸಿಕೊಂಡು ಸುರಕ್ಷಿತನಾಗಿರುವಂತೆ ಅಲ್ಲಿಗೆ ಎತ್ತಿಕೊಂಡು ಹೋಗಲ್ಪಟ್ಟಿರಬಹುದು. ಬಹುಶಃ, ಅದು ಆತನು ಆಕೆಯನ್ನು ಸ್ಪಷ್ಟವಾಗಿ ನೋಡುವದಕ್ಕೆ ಸಾಧ್ಯವಾಗುವಂಥ ಅನುಕೂಲಕರ ಸ್ಥಳವಾಗಿರಬಹುದು. ಜಾರಸ್ತ್ರೀಯು ಅಲ್ಲಿಯೇ ಇದ್ದಳಾದ್ದರಿಂದ ಯೋಹಾನನನ್ನು ಅಲ್ಲಿಗೆ ಎತ್ತಿಕೊಂಡು ಹೋಗಲಾಯಿತೆಂದು ಅನೇಕ ಲೇಖಕರು ನಂಬುತ್ತಾರೆ. ಈ ವ್ಯಾಖ್ಯಾನದ ಸಾಧ್ಯತೆಯು ಇರುತ್ತದೆ, ಆದರೆ ಇದು "ಅರಣ್ಯ" ಎಂಬುದಕ್ಕೆ ಪುಸ್ತಕದಲ್ಲಿ ಈ ಮುಂಚೆ ಸಿಕ್ಕಂಥ ಅರ್ಥಕ್ಕಿಂತಲೂ ವ್ಯತ್ಯಾಸವಾದ ಅರ್ಥವೊಂದರ ಅವಶ್ಯಕತೆಯನ್ನು ಹುಟ್ಟಿಸುತ್ತದೆ.

ಆತನು ಅಲ್ಲಿಗೆ ತಲುಪಿದ ಬಳಿಕ, ಒಂದು ಆಶ್ಚರ್ಯವಾದ ದೃಶ್ಯವನ್ನು **ಕಂಡನು**: **ರಕ್ತವರ್ಣದ ಮೃಗದ ಮೇಲೆ ಕೂತಿದ್ದ ಒಬ್ಬ ಸ್ತ್ರೀಯನ್ನು ಕಂಡೆನು; ಆ ಮೃಗದ ಮೈಮೇಲೆಲ್ಲಾ ದೇವದೂಷಣೆಯ ಹೆಸರುಗಳು ತುಂಬಿದ್ದವು. ಅದಕ್ಕೆ ಏಳು ತಲೆಗಳು ಹತ್ತು ಕೊಂಬುಗಳೂ ಇದ್ದವು.** 1ನೇ ವಚನದಲ್ಲಿ ಸ್ತ್ರೀಯು "ಬಹಳ ನೀರುಗಳ ಮೇಲೆ ಕೂತಿರುವಳೂ," ಮತ್ತು 3ನೇ ವಚನದಲ್ಲಿ ಆಕೆಯು "ರಕ್ತವರ್ಣದ ಮೃಗದ ಮೇಲೆ ಕೂತಿದ್ದಳು" ಎಂಬುದರ ವಿಷಯವಾಗಿ ನಾವು ಚಿಂತಿಸಬೇಕಾಗಿಲ್ಲ. ಆಕೆಯು ಮಾನವರೊಂದಿಗೆ ಹೊಂದಿದ್ದ ಸಂಬಂಧ ವಿಷಯವಾಗಿ,

ಆಕೆಯು ಬಹಳ ನೀರುಗಳ ಮೇಲೆ ಕೂತಿರುವಳು; ಸಾಮ್ರಾಜ್ಯದೊಂದಿಗೆ ಹೊಂದಿರುವ ಸಂಬಂಧದ ವಿಷಯವಾಗಿ, ಆಕೆಯು ಮೃಗದ ಮೇಲೆ ಕೂತಿದ್ದಳು. ಒಂದು ದರ್ಶನದಲ್ಲಿ, ಚಿತ್ರಣವು ಬದಲಾಗಬಲ್ಲದ್ದಾಗಿದೆ; ಅದು ಮುನ್ನೆಚ್ಚರಿಕೆಯನ್ನು ನೀಡದೆಯೇ ಬೇರೆ ರೂಪವನ್ನು ತೆಗೆದುಕೊಳ್ಳಬಲ್ಲದು.

ಸ್ತ್ರೀಯು ಕೂತುಕೊಂಡಿದ್ದ **ರಕ್ತವರ್ಣದ ಮೃಗವು** 13ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾದ ಮೊದಲನೆಯ ಮೃಗವಾಗಿದೆ: "ಸಮುದ್ರದಿಂದ ಮೃಗವು ಏರಿಬರುವದನ್ನು ಕಂಡೆನು. ಅದಕ್ಕೆ ಏಳು ತಲೆಗಳೂ ಹತ್ತು ಕೊಂಬುಗಳೂ ಕೊಂಬುಗಳ ಮೇಲೆ ಹತ್ತು ಮಕುಟಗಳೂ ತಲೆಗಳ ಮೇಲೆ ದೇವದೂಷಣನಾಮಗಳೂ ಇದ್ದವು. ನಾನು ಕಂಡ ಮೃಗವು ಚಿರತೆಯಂತಿತ್ತು" (13:1). ಈ ಲಕ್ಷಣಗಳು 17ನೇ ಅಧ್ಯಾಯದೊಳಗೆ ಅನಂತರದಲ್ಲಿ ವಿಶೇಷ ಮಹತ್ವವನ್ನು ಪಡೆದುಕೊಳ್ಳುವವು. ಕೆಲವರು ಈ ರಕ್ತವರ್ಣದ ಮೃಗವು ಘಟಸರ್ಪವೆಂದು ಯೋಚಿಸುತ್ತಾರೆ, ಆತನಿಗೆ ಸಹ **ಏಳು ತಲೆಗಳು ಹತ್ತು ಕೊಂಬುಗಳೂ** ಇರುತ್ತವೆ (ನೋಡಿರಿ 12:3); ಆದರೆ ಮುಂದೆ ಬರುವಂಥ ಚರ್ಚೆಯು ತೋರಿಸಿ ಕೊಡುವ ಪ್ರಕಾರ, ಮೃಗವು (ರೋಮನ್ ಸಾಮ್ರಾಜ್ಯ) ಅದಕ್ಕೆ ಉತ್ತಮವಾಗಿ ಸರಿಹೊಂದುತ್ತದೆ.

17ನೇ ಅಧ್ಯಾಯವು 13ನೇ ಅಧ್ಯಾಯದಲ್ಲಿನ ಜೀವಿಯ ಕುರಿತು ಪೂರಕವಾದ ವಿವರಗಳನ್ನು ಸೇರ್ಪಡೆಗೊಳಿಸುತ್ತದೆ: ಆತನು ತನ್ನ ಯಜಮಾನನಾದ ಘಟಸರ್ಪನಂತೆ (ಸೈತಾನ) ಕೆಂಪು ವರ್ಣ ಹೊಂದಿದ್ದನು (12:3). 12:3ರಲ್ಲಿ "ಕೆಂಪು" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು (πυρρός, *purros*) ಮತ್ತು 17:3ರಲ್ಲಿ "ರಕ್ತವರ್ಣ" ಎಂಬುದನ್ನು ಅನುವಾದಿಸಿರುವ (κόκκινος, *kokkinos*) ಎಂಬ ಗ್ರೀಕ್ ಪದವು ಒಂದೇ ಆಗಿರುವದಿಲ್ಲ; ಆದರೆ ಈ ಸನ್ನಿವೇಶದಲ್ಲಿ, ಅವುಗಳನ್ನು ಸಮಾನಾರ್ಥವುಳ್ಳವುಗಳೆಂದು ಯೋಚಿಸಬಹುದು (12:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಈ ಮುಂಚೆ, **ದೇವದೂಷಣೆಯ ಹೆಸರುಗಳು** ಮೃಗದ ತಲೆಗಳ ಮೇಲೆ ಇದ್ದವು (13:1); ಈಗ ಈತನು ದೇವದೂಷಣೆಯಿಂದ ತುಂಬಿದ್ದನು. 13ನೇ ಅಧ್ಯಾಯವನ್ನು ಅಧ್ಯಯನ ಮಾಡಿದ ವೇಳೆ, ಈ ದೇವದೂಷಣೆಗಳು ಚಕ್ರವರ್ತಿಯು ತನಗೋಸ್ಕರ ಇಟ್ಟುಕೊಂಡಿದ್ದ ದೈವಿಕ ಬಿರುದುಗಳೆಂದು ಅಭಿಪ್ರಾಯವನ್ನು ತಿಳಿಸಲಾಗಿತ್ತು. ಮೃಗದ ಮೈಮೇಲೆಲ್ಲಾ ದೇವದೂಷಣೆಯ ಹೆಸರುಗಳು **ತುಂಬಿದ್ದವು** ಎಂಬ ವಾಸ್ತವಾಂಶವು ಈ ದೈವಿಕ ಬಿರುದುಗಳನ್ನು ಬಳಸುವ ದೂಷಣಾತ್ಮಕ ಸಂಗತಿಯು ಸಾಮ್ರಾಜ್ಯದ ತುಂಬೆಲ್ಲಾ ಹಬ್ಬಿಕೊಂಡಿತ್ತೆಂಬುದನ್ನು ಸೂಚಿಸಬಹುದಾಗಿದೆ.

**ಕೂತಿದ್ದ** ಎಂಬುದು ಆಳ್ವಿಕೆ ಹಾಗೂ ನಿಯಂತ್ರಣವನ್ನು ಸೂಚಿಸುತ್ತದೆ: ಒಬ್ಬ ಅನುಭವಶಾಲಿ ಕುದುರೆ ಸವಾರನ ರೀತಿಯಲ್ಲಿ ಈ ಸ್ತ್ರೀಗೆ ಮೃಗದ ಮೇಲೆ ನಿಯಂತ್ರಣವಿತ್ತು. ಒಂದು ಕ್ಷಣಕ್ಕೆ, ಬಾಬೆಲ್ (ರೋಮ್ ನಗರ) ನಿಯಂತ್ರಣವನ್ನು ಹೊಂದಿತ್ತು. ಅಧ್ಯಾಯದೊಳಗೆ ಅನಂತರದಲ್ಲಿ, ಮೃಗವು (ರೋಮನ್ ಸಾಮ್ರಾಜ್ಯ) ಆಕೆಯ ವಿರುದ್ಧ ತಿರುಗಿ ಬೀಳುವದು (ವ. 16).

**ವಚನ 4.** ಸ್ತ್ರೀಯ ಕುರಿತ ಬಣ್ಣನೆಯು 4ನೇ ವಚನದಲ್ಲಿ ಆರಂಭಗೊಳ್ಳುತ್ತದೆ: **ಆ ಸ್ತ್ರೀಯು ಧೂಮ್ರವರ್ಣದ ವಸ್ತ್ರಗಳನ್ನೂ ರಕ್ತಾಂಬರವನ್ನೂ ಧರಿಸಿಕೊಂಡು ಚಿನ್ನ ರತ್ನ ಮುತ್ತು ಇವುಗಳಿಂದ ಅಲಂಕರಿಸಿಕೊಂಡಿದ್ದಳು. ಧೂಮ್ರವರ್ಣ** ಮತ್ತು **ರಕ್ತಾಂಬರ** ರಾಜವಂಶಸ್ಥರು ಹಾಗೂ ಗಣ್ಯರು ಧರಿಸಿಕೊಳ್ಳುವ ಬಣ್ಣಗಳಾಗಿದ್ದವು (ನೋಡಿರಿ ಲೂಕ 16:19). ಯೇಸುವಿಗೆ ಅಪಹಾಸ್ಯ ಮಾಡುವ ವೇಳೆ ಆತನ ಮೇಲೆ ಹಾಕಲ್ಪಟ್ಟ ವಸ್ತ್ರವನ್ನು ಒಂದು ಕಥನದಲ್ಲಿ "ಕೆಂಪು" ಎಂದು ಕರೆಯಲಾಗಿದೆ

(ಮತ್ತಾಯ 27:28, 29). ಧೂಮ್ರವರ್ಣ ಹಾಗೂ ರಕ್ತಾಂಭರ ಬಟ್ಟೆಗಳು ದುಬಾರಿಯಾಗಿದ್ದವು ಯಾಕೆಂದರೆ ಅದರ ಬಣ್ಣವನ್ನು ಉತ್ಪಾದಿಸುವ ವಸ್ತುವು ದುಬಾರಿಯಾಗಿರುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 16:14). **ಚಿನ್ನ ರತ್ನ ಮುತ್ತು** ಇವುಗಳು ಶ್ರೀಮಂತರಿಂದ ಮಾತ್ರವೇ ಖರೀದಿಸುವದಕ್ಕೆ ಸಾಧ್ಯವಿರುತ್ತಿತ್ತು. ಹೀಗೆ ಬಾಬಲೆ "ರಾಣಿಯಾಗಿ" ಉಡುಪು ಧರಿಸಿತ್ತು (18:7). ಈ ಸ್ತ್ರೀಯು ಅಗ್ಗದ ಅಲಂಕಾರದಿಂದ ಕೂಡಿ ಬೀದಿಗಳಲ್ಲಿ ನಡೆದಾಡುವವಳಂತೆ ಇರಲಿಲ್ಲ; ಆಕೆಯು ಸಮಾಜದಲ್ಲಿನ ಗಣ್ಯರೊಂದಿಗೆ ಬೆರೆಯುತ್ತಿದ್ದಳು. ಇಂದು, ಆಕೆಯು ಸುಶಿಕ್ಷಿತ, ನಿರುತ್ಸಾಹ, ಭೋಗಾಸಕ್ತಿಯಿಂದ ಕೂಡಿದ ಶ್ರೀಮಂತ ವರಿಷ್ಠರಲ್ಲಿ ಭಾಗವಾಗಿರುವವಳು. ಆಕೆಯು "ಶ್ರೀಮಂತರು ಹಾಗೂ ಪ್ರಸಿದ್ಧರ ಜೀವನ ಶೈಲಿ" ಎಂಬ ಟಿವಿ ಕಾರ್ಯಕ್ರಮದಲ್ಲಿ ಕಾಣಿಸಿಕೊಳ್ಳುವವಳು.

ಹೇಗೂ, ವಚನವು ಮುಂದುವರೆದ ಹಾಗೆ, ಅದು ಬಾಬೆಲಿನ ಮುಖದಿಂದ ವೈಭೋಗದ ಮುಖವಾಡವನ್ನು ಕಿತ್ತೇಸೆಯುತ್ತದೆ ಮತ್ತು ಆಕೆಯ ನಿಜ ಬಣ್ಣವನ್ನು ಬಯಲುಗೊಳಿಸುತ್ತದೆ: ಆಕೆಯು ಕೈಯಲ್ಲಿ ಒಂದು **ಚಿನ್ನದ ಬಟ್ಟಲು ಇತ್ತು**, ಅದನ್ನು ಉತ್ತೇಜಕಗೊಳಿಸುವ ದ್ರವದಿಂದ ತುಂಬಿ ಹರಿಯುತ್ತಿದೆಯೋ ಎಂಬಂತೆ ಮುಂದಿಡುತ್ತಾಳೆ. ಹೇಗೂ, ಸೂಕ್ಷ್ಮವಾಗಿ ಪರೀಕ್ಷಿಸುವಾಗ, ಆ ಬಟ್ಟಲು **ಅಸಹ್ಯವಾದವುಗಳಿಂದ ಅಂದರೆ ಅವರ ಜಾರತ್ವಸಂಬಂಧವಾದ ಅಶುದ್ಧ ವಸ್ತುಗಳಿಂದ ತುಂಬಿತ್ತು.** ಜಾರಳು ಮೋಜು ಕೊಡುವದಾಗಿ ಹೇಳುತ್ತಾಳೆ, ಆದರೆ ಆಕೆಯು ಕೊಡುವಂಥದ್ದು ಹೊಲಸೇ.

**ವಚನ 5.** ಜಾರಳ ಬಣ್ಣನೆಯು ಮುಂದುವರೆಯುತ್ತದೆ, **ಅವಳ ಹಣೆಯ ಮೇಲೆ - ಬಾಬೆಲೆಂಬ ಮಹಾನಗರಿ, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ ಎಂದು ಗೂಢಾರ್ಥವುಳ್ಳ ಹೆಸರು ಬರೆದಿತ್ತು. ಗೂಢಾರ್ಥ** ಎಂಬ ಪದವು, ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಟ್ಟಿರುವ ಪ್ರಕಾರ, ಪ್ರಕಟನೆಯ ಮೂಲಕವೇ ಹೊರತು ತಿಳಿಯಲಾಗದಂಥ ಸಂಗತಿಯೊಂದನ್ನು ಸೂಚಿಸುತ್ತದೆ (10:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಈ ವಚನದಲ್ಲಿ "ಗೂಢಾರ್ಥ" ಎಂಬುದು ಮುಂದೆ ಬರುವ ಹೆಸರನ್ನು ಬಣ್ಣಿಸುವ ಒಂದು ಪದವಾದರೂ ಆಗಿರಬಹುದು, ಅಥವಾ ಅದು ಹೆಸರಿನ ಭಾಗವಾದರೂ ಆಗಿರಬಹುದಾಗಿದೆ. KJVಯು ಅದನ್ನು ಹೆಸರಿನ ಭಾಗವಾಗಿ ತೆಗೆದುಕೊಳ್ಳುತ್ತದೆ; NASBಯು ಇದನ್ನು ಹೆಸರನ್ನು ಬಣ್ಣಿಸುವ ಪದವಾಗಿ ತೆಗೆದುಕೊಳ್ಳುತ್ತದೆ. ಯಾವ ವಿಧದಲ್ಲಿದ್ದರೂ ಸರಿಯೇ, "ಗೂಢಾರ್ಥ" ಎಂಬ ಪದವು ಜಾರಸ್ತ್ರೀಯ ಹೆಸರನ್ನು ಸಾಂಕೇತಿಕವಾಗಿ ಅರ್ಥಮಾಡಿಕೊಳ್ಳತಕ್ಕದ್ದೇ, ಹೊರತು ಅಕ್ಷರಶಃ ಅಲ್ಲ ಎಂಬುದನ್ನು ಸೂಚಿಸುತ್ತದೆ.

ಇನ್ನು ಮುಂದಕ್ಕೆ ಹೋಗುವದಕ್ಕೆ ಮುಂಚೆ, ಮಹಾ ಜಾರಸ್ತ್ರೀಯ ಗುರುತು ಸ್ಥಾಪಿಸಲ್ಪಡುವದು ಅಗತ್ಯವಾಗಿರುತ್ತದೆ. ಆಕೆಯು ಪದೇ ಪದೇ ವಾಕ್ಯದುದ್ದಕ್ಕೂ **ಬಾಬೆಲ್** ಎಂದು ಕರೆಯಲ್ಪಟ್ಟಿದ್ದಾಳೆ (14:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಬಾಬೆಲ್ ಪ್ರಾಚೀನ ಮೆಸಪೋತಾಮ್ಯ ಪಟ್ಟಣವು ಪುರಾತನತ್ವದ ಚಿರಪರಿಚಿತ ಪಟ್ಟಣಗಳಲ್ಲೊಂದಾಗಿದೆ. "ಅಲ್ಲಿ ಮನುಷ್ಯರ ಗಮನವನ್ನು ತೊಡಗಿಸುವದಕ್ಕಾಗಿ ನಗರದ ಸುಖ, ಕಲಿಕೆ, ಮತ್ತು ವಾಣಿಜ್ಯಗಳು ಮೊದಲು ಆರಂಭಿಸಲ್ಪಟ್ಟವು."[6] ಅದು "ಒಂದು ವಿಶ್ವ ಸಾಮ್ರಾಜ್ಯದ ರಾಜಕೀಯ ಹಾಗೂ ಧಾರ್ಮಿಕ ರಾಜಧಾನಿ ಆಗಿತ್ತು, ಆ ಸಾಮ್ರಾಜ್ಯವು ತನ್ನ ... ನೈತಿಕ ಭ್ರಷ್ಟತೆಗೆ ಖ್ಯಾತಿ ಹೊಂದಿರುತ್ತದೆ."[7] ಯೆಹೂದಿ ಮನಸ್ಸಿಗಾದರೋ, ಬಾಬೆಲ್ ಭಕ್ತಿಹೀನತೆ ಮತ್ತು ದೇವರ ಜನರ ಕಡೆಗೆ ದ್ವೇಷವುಳ್ಳದ್ದೆಂಬ ಅರ್ಥವನ್ನು ಸೂಚಿಸುವದಾಗಿತ್ತು. ಬಾಬೆಲಿನವರು ಕ್ರಿ.ಪೂ. 586ರಲ್ಲಿ ಯೆರೂಸಲೇಮನ್ನು ನಾಶಗೊಳಿಸಿದ್ದರು, ಇಸ್ರಾಯೇಲ್ಯರನ್ನು ಸೆರೆ ಹಿಡಿದು ಒಂದು ಪರದೇಶಕ್ಕೆ

ಕರೆದೊಯ್ದಿದ್ದರು. **ಬಾಬೆಲೆಂಬ ಮಹಾ ನಗರಿ** ಎಂಬ ಪದವು ದಾನಿಯೇಲ 4:30ರಿಂದ ಬರುತ್ತದೆ ಮತ್ತು ಆಕೆಯ ವಾಸ್ತವಿಕವಾದ ಮೌಲ್ಯವನ್ನಲ್ಲ, ಆದರೆ ಆಕೆಯು ಊಹಿಸಿಕೊಂಡಿದ್ದ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.

ಜಾರಸ್ತ್ರೀಯ ಗುರುತಿನ ವಿಷಯದಲ್ಲಿ, ಪವಿತ್ರಾತ್ಮನು ಒಂದು ನಗರವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು (ವಚನಗಳು 18; 16:19) ಎಂಬುದರಲ್ಲಿ ಸಂಶಯವೇ ಇಲ್ಲ, ಅದು ಬಾಬೆಲಿನ ಗುಣಸ್ವಭಾವಗಳುಳ್ಳ ನಗರ. ಈಗ ಪ್ರಶ್ನೆಯಿರುವದು "ಯಾವ ನಗರ?" ಎಂಬುದೆ. ಅದಕ್ಕೆ ಉತ್ತರವನ್ನು ಕೊಡಬೇಕೆಂದರೆ, ಯೋಹಾನನ ವಾಚಕರು "ಆ ಸ್ತ್ರೀಯು ಭೂರಾಜರ ಮೇಲೆ ಅಧಿಕಾರ ಹೊಂದಿರುವ ಮಹಾನಗರಿಯೇ" (ವ. 18) ಎಂಬುದನ್ನು ಓದಿದಾಗ ಅವರ ಮನಸ್ಸುಗಳಿಗೆ ಯಾವ ನಗರವು ತೋರಿರಬಹುದು? ಎಂದು ಕೇಳಿಕೊಳ್ಳಬೇಕಾದ ಅಗತ್ಯವಿರುತ್ತದೆ. ಅದಕ್ಕೆ ಅರ್ಹವಾಗುವ ಏಕೈಕ ನಗರವೆಂದು ಅದು *ರೋಮ್* "ಅಧಿಕಾರ ಹೊಂದಿರುವ" ಎಂಬ ಪದವು ವರ್ತಮಾನಕಾಲ ರೂಪದಲ್ಲಿರುವದನ್ನು ಗಮನಿಸಿಇರ; ಪ್ರಕಟನೆ ಪುಸ್ತಕವು ಬರೆಯಲ್ಪಡುತ್ತಿರುವ ವೇಳೆಯಲ್ಲಿ "ಮಹಾನಗರಿ" ಆಳ್ವಿಕೆ ಮಾಡುತ್ತಿತ್ತು. James Efirdನು ಹೀಗೆ ಬರೆದನು, "ಸ್ಪಷ್ಟವಾಗಿ, ಈ ಸ್ತ್ರೀಯು ರೋಮ್ ನಗರವಾಗಿದ್ದಾಳೆ ... ಯೋಹಾನನು ಒಂದು ಚಿತ್ರವನ್ನು ಬರೆದು ಅದರ ಮೇಲೆ ದೊಡ್ಡ ಅಕ್ಷರಗಳಿಂದ ಹೆಸರನ್ನು ಬರೆದಿದ್ದರೆ ಇನ್ನೂ ಹೆಚ್ಚು ಸ್ಪಷ್ಟವಾಗೇನೂ ಇರುತ್ತಿರಲಿಲ್ಲ."[8]

ಆದಿ ವಾಚಕರಲ್ಲಿ ಏನಾದರೂ ಸಂದೇಹವಿದ್ದಲ್ಲಿ, ಅದು 9ನೇ ವಚನದಲ್ಲಿರುವ ಅಷ್ಟಾಗಿ ಮಾರ್ಮಿಕವಲ್ಲದ "ಸುಳಿವು" ಮೂಲಕ ನಿವಾರಿಸಲ್ಪಡುತ್ತಿತ್ತೆಂಬುದು ನಿಶ್ಚಯವಾದದ್ದು: "ಆ ಏಳು ತಲೆಗಳು ಆ ಸ್ತ್ರೀ ಕೂತುಕೊಂಡಿರುವ ಏಳು ಬೆಟ್ಟಗಳೇ." Sweteನು ಹೀಗೆ ಬರೆದನು, "ಈ ಮಾತುಗಳ ಅರ್ಥವೇನೆಂಬ ಕುರಿತು ಯಾವದೇ ತಾರ್ಕಿಕ ಸಂದೇಹಕ್ಕೂ ಅವಕಾಶವು ಕೊಡಲಾಗುವದಿಲ್ಲ. ರೋಮ್ ನಗರದ ಏಳು ಬೆಟ್ಟಗಳು ಲ್ಯಾಟಿನ್ ಕವಿಗಳ ಸರ್ವಸಾಧಾರಣವಾಗಿ ಬಳಸುತ್ತಿದ್ದದ್ದಾಗಿತ್ತು [ಅಂಕೆ] ..."[9] ಈ ಬೆಟ್ಟಗಳು ಯಾವವೆಂದರೆ Palatine, Capitoline, Quirinal, Aventine, Esquiline, Viminal, ಮತ್ತು Caelian. ರೋಮನ್ ಸಾರ್ವಜನಿಕ ಸಭಾಸ್ಥಾನವು Palatine ಮತ್ತು Capitoline ಬೆಟ್ಟಗಳ ನಡುವೆ ಇತ್ತು. Haileyನು ಇದಕ್ಕೆ ಒಮ್ಮತ ವ್ಯಕ್ತಪಡಿಸುತ್ತಾನೆ: "ರೋಮನ್ ಸಾಮ್ರಾಜ್ಯವು ಕಟ್ಟಲ್ಪಟ್ಟಿರುವ ತಿಬೇರ ನದಿಯ ದಡದಲ್ಲಿರುವ ಏಳು ಬೆಟ್ಟಗಳು ಬಹಳ ಕಾಲದಿಂದಲೂ ರೋಮನ್ ಕವಿಗಳಿಗೆ ಹಾಗೂ ಲೇಖಕರಿಗೆ ಚರ್ಚೆಯಾಂಶವಾಗಿರುತ್ತದೆ ... ರೋಮ್ ನಗರವು ಯೋಹಾನನ ವಾಚಕರಿಗೆ ತಕ್ಷಣವೇ ನೆನಪಿಗೆ ಬರುವದಾಗಿತ್ತು."[10] ಪ್ರಪಂಚದಲ್ಲಿನ ಬೇರೆ ನಗರಗಳು ಏಳು ಬೆಟ್ಟಗಳು ಅಥವಾ ಪರ್ವತಗಳ ಮೇಲೆ ಕಟ್ಟಲ್ಪಟ್ಟಿರಬಹುದಾಗಿದೆ ಎಂದು ಅಭಿಪ್ರಾಯ ಪಡಲಾಗುತ್ತದೆ. ಅದು ನಿಜವೇ ಆಗಿದ್ದಾಗ್ಯೂ, ಪ್ರಕಟನೆ 17ನೇ ಅಧ್ಯಾಯದಲ್ಲಿರುವ ಸಕಲ ವಿವರಗಳಿಗೂ "ಸರಿಹೊಂದುವಂಥ," ಏಳು ಬೆಟ್ಟಗಳ ಮೇಲೆ ಕಟ್ಟಿದ್ದಾಗಿ ತಕ್ಷಣವೇ ನೆನಪಿಗೆ ಬರುವಂತದ್ದು ರೋಮ್ ನಗರವೇ. ಉಲ್ಲೇಖಿಸಲ್ಪಟ್ಟಿರುವ ಕೆಲವು ಲೇಖಕರು ಅನೇಕರಂತೆಯೇ ವಿಶಿಷ್ಟವಾಗಿದ್ದಾರೆ.

ಬಾಬೆಲೆಂಬುದು ರೋಮ್ ನಗರವನ್ನು ಸೂಚಿಸುತ್ತದೆಂದು ನಂಬದ ಲೇಖಕರು ಸಹ ಆದಿ ಕ್ರೈಸ್ತರ ನೆನಪಿಗೆ ಮೊದಲು ಬರುವಂಥದ್ದು ಇದೇ ಆಗಿತ್ತು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಯೋಹಾನನು ವಾಚಕರು ರೋಮ್ ಬಗ್ಗೆ ಯೋಚಿಸಬೇಕೆಂಬುದು ಪವಿತ್ರಾತ್ಮನ ಉದ್ದೇಶವಾಗಿರಲಿಲ್ಲವಾದರೆ, ಆತನು "ನಾನು ಹೇಳುತ್ತಿರುವ ರೋಮ್ ಕುರಿತಲ್ಲ" ಎಂಬ ಹಕ್ಕು ನಿರಾಕರಿಸುವ ಹೇಳಿಕೆಯೊಂದನ್ನು ಸೇರಿಸಬೇಕಾದ ಅಗತ್ಯತೆಯನ್ನು ಆತನು ಯೋಹಾನನಿಗೆ

ಹೇಳಿರುತ್ತಿದ್ದನು. Bruce Metzgerನು ಅಭಿಪ್ರಾಯ ಪಡುವದೇನೆಂದರೆ, "ಇಬ್ರಿಯರಿಗೆ ಬಾಬೆಲ್ ಎಂಬುದು ಎಲ್ಲಾ ದುಷ್ಟತನವನ್ನು ಪ್ರತಿನಿಧಿಸುವಂತದ್ದು ಹಾಗೂ ಹಿಂಸೆಯನ್ನು ಸಾಂಕೇತಿಸುವದಾಗಿದ್ದ ಪ್ರಕಾರವೇ, ಯೋಹಾನನಿಗಾದರೋ ರೋಮ್ ನಗರವು ಇನ್ನೊಂದು ಬಾಬೆಲ್, ಎಲ್ಲಾ ಮೋಹಗೊಳಿಸುವಂಥ ಸುಖಭೋಗ ಹಾಗೂ ದುರ್ಗುಣ, ಭೋಗಲಾಲಸೆಯುಳ್ಳ ಭೌತಿಕತೆ ಹಾಗೂ ಸ್ವಾರ್ಥಗಳಿಗೆ ಮೂಲ ಮತ್ತು ಉಗಮಸ್ಥಾನ ಆಗಿತ್ತು."[11]

ಹೇಗೂ, Frank Packನ ಈ ಮಾತುಗಳೊಂದಿಗೆ ಬಹುಪಾಲು ಮಂದಿ ಒಮ್ಮತವನ್ನು ಸೂಚಿಸುವರು ಏನೆಂದರೆ "ಮಹಾ ಬಾಬೆಲ್ ನಗರಿಯು ದುಷ್ಟ ವಿಗ್ರಹಾರಾಧನೆ ಹಾಗೂ ಭ್ರಷ್ಟಗೊಳಿಸುವ ಚಕ್ರವರ್ತಿಯ ಆರಾಧನೆಯನ್ನೊಳಗೊಂಡಿದ್ದ ಪ್ರಾಚೀನ ರೋಮ್ ನಗರಕ್ಕಿಂತಲೂ ಅಧಿಕವಾದದ್ದನ್ನು ಸಾಂಕೇತಿಸುತ್ತದೆ. ಅಲ್ಲದೆ ಇಷ್ಟು ಯುಗಗಳಿಂದಲೂ ವಿವಿಧ ರೂಪಗಳಲ್ಲಿ ಬಂದಿರುವ ಇದು ದೇವರನ್ನು ತಿರಸ್ಕರಿಸುವ ಲೋಕದ ಎಲ್ಲಾ ಪ್ರಭಾವಗಳು ಹಾಗೂ ಅಧಿಕಾರಗಳನ್ನು ಸಂಕೇತಿಸುತ್ತದೆ."[12]

ಗತಕಾಲದ ಸಂತತಿಗಳಲ್ಲಿ, "ಮಹಾ ಬಾಬೆಲ್ ನಗರಿ"ಯ ಅತ್ಯಂಥ ಜನಪ್ರಿಯ ಅರ್ಥನಿರೂಪಣೆಯೆಂದರೆ ಆಕೆಯು ರೋಮನ್ ಕ್ಯಾಥೋಲಿಕತ್ವವನ್ನು ಪ್ರತಿನಿಧಿಸುತ್ತದೆ ಎಂಬದೆ. ಈ ಅನ್ವಯಿಕೆಯು ಅತ್ಯಂಥ "ಮೋಹಕ್ಕೊಳಪಡಿಸುವ" ದಾರಿಗಳಲ್ಲಿ *ಒಂದು* ಆಗಿದ್ದು ಅದರ ಮೂಲಕವಾಗಿ ಸೈತಾನನು ನಮ್ಮನ್ನು ದೇವರಿಂದ ದೂರವಾಗಿ ಕರೆಯುವದಕ್ಕೆ ಪ್ರಯತ್ನಿಸುತ್ತಾನೆ. ಹೇಗೂ, ಆ ಕ್ಯಾಥೋಲಿಕತ್ವವು ಸುಳ್ಳು ಪ್ರವಾದಿಯಿಂದ ಉತ್ತಮವಾಗಿ ಪ್ರತಿನಿಧಿಸಲ್ಪಡುತ್ತದೆ (13:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮಹಾ ಬಾಬೆಲ್ ನಗರಿ ಒಬ್ಬ ವೇಶ್ಯೆಯೇ, ಹೊರತು ತನ್ನ ಗಂಡನಿಗೆ (ದೇವರು) ಅಪನಂಬಿಗಸ್ತಳಾಗಿರುವ ವ್ಯಭಿಚಾರಿಣಿಯಲ್ಲ. ಆಕೆಯು 17ರಿಂದ 19 ಅಧ್ಯಾಯಗಳಲ್ಲಿ ಧಾರ್ಮಿಕ ವ್ಯಕ್ತಿಯಾಗಿ ಚಿತ್ರಿಸಲ್ಪಟ್ಟಿರುವದಿಲ್ಲ, ಆದರೆ ಒಬ್ಬ ವಾಣಿಜ್ಯ, ರಾಜಕೀಯ ಸಂಗತಿಯಾಗಿ ಚಿತ್ರಿಸಲ್ಪಟ್ಟಿದ್ದಾಳೆ. ಆಕೆಯ "ಧರ್ಮ"ವು ಅಧಾರ್ಮಿಕ: ಪ್ರಸಿದ್ಧಿ ಮತ್ತು ಸಂಪತ್ತನ್ನು ಆರಾಧಿಸುವದು.

ಮಹಾ ಜಾರಸ್ತ್ರೀಯ ಗುರುತಿನ ವಿಷಯವಾಗಿ ಆಧುನಿಕ ಕಾಲದ ಯಾವ ಅನ್ವಯಿಕೆಯನ್ನು ನಾವು ಮಾಡಬಹುದು? ಪ್ರಕಟನೆ 17ನೇ ಅಧ್ಯಾಯದಲ್ಲಿನ ಬಾಬೆಲ್ ಒಂದು ನಗರವಾಗಿತ್ತಾದ್ದರಿಂದ, ಮತ್ತು ನೆನಪಿಗೆ ಬರುವಂಥ ಮೊದಲ ಅನ್ವಯಿಕೆಯೆಂದರೆ ಒಂದು ಮಹಾನಗರ - ಪ್ರಪಂಚದ ಯಾವದೇ ಮಹಾನಗರ. ಅಂಥ ಸ್ಥಳಗಳು ಕಲೆ ಹಾಗೂ ಸಂಸ್ಕೃತಿಯ ಕೇಂದ್ರಗಳಷ್ಟೇ ಆಗಿರುವದಿಲ್ಲ, ಆದರೆ ಅನೇಕ ಸಾರಿ ದುರ್ಗುಣ ಹಾಗೂ ಭ್ರಷ್ಟತೆಗಳ ಉಗಮಸ್ಥಾನ ಸಹ ಆಗಿರುತ್ತದೆ. ಉದಾಹರಣೆಗಳು ಯುವಜನರಿಂದ, ಮತ್ತು ಕೆಲವು ಅಷ್ಟೇನೂ ಚಿಕ್ಕವರಲ್ಲದ ಜನರಿಂದ ಅಧಿಕಗೊಳ್ಳಬಹುದಾಗಿದೆ, ಅವರು "ದೊಡ್ಡ ಪಟ್ಟಣ"ದ ಸೈರನ್ ಧ್ವನಿಯನ್ನು ಕೇಳಿ ಅಲ್ಲಿಗೆ ಸ್ಥಳಾಂತರಗೊಂಡು ಶೀಘ್ರವೇ ಅಲ್ಲಿನ ಜೀವನ ಶೈಲಿಯನ್ನು ಅಳವಡಿಸಿಕೊಂಡವರು. ಹೇಗೂ, ನೀವು ಮಹಾ ಜಾರಸ್ತ್ರೀಯಿಂದ ಮೋಹಕ್ಕೊಳಪಡುವದಕ್ಕೆ ದೊಡ್ಡ ಪಟ್ಟಣದಲ್ಲಿಯೇ ಇರಬೇಕೆಂದೇನಿಲ್ಲ. ಜೀವನದ ಪ್ರಾಥಮಿಕ ಗುರಿಯು ರೋಮಾಂಚನ, ಸುಖ, ಹಾಗೂ ಲಾಭಗಳೇ ಆಗಿರುವ ಯಾವ ಸ್ಥಳದಲ್ಲಿಯೇ ಆಗಲಿ ಹಾಗೂ ಎಲ್ಲೆಡೆಯೂ ಮಹಾ ಬಾಬೆಲ್ ಅಲ್ಲಿರುತ್ತಾಳೆ. ನೀವು ಎಲ್ಲಿಯೇ ಜೀವಿಸಿದರೂ, ಜಾರಸ್ತ್ರೀಯು ಆಗಲೂ ನಿಮ್ಮ ಕಿವಿಗಳಲ್ಲಿ ಪಿಸುಗುಟ್ಟುತ್ತಾಳೆ, ನಿಮ್ಮನ್ನು "ನೇರವಾದ ಹಾಗೂ ಬಿಕ್ಕಟ್ಟಾದ ದಾರಿಯನ್ನು" ಬಿಟ್ಟು ಬರುವಂತೆ ಆಮೀಷವೊಡ್ಡುವಳು (ನೋಡಿರಿ ಮತ್ತಾಯ 7:14; KJV). Clarence Macartneyನು ಬಾಬೆಲಿನ ಆಕರ್ಷಣೆಗಳ ಕುರಿತಾಗಿ ಹೀಗೆ ಬರೆದನು:

ಓ ಲೋಕವೇ, ಓ ಲೋಕವೇ, ನೀನು ಎಂಥ ಮೋಸಗಾರ! ... ನೀನು ನನ್ನನ್ನು ಮುಖಸ್ತುತಿ ಮೋಹಕ್ಕೊಳಪಡಿಸುತ್ತೀ ಹಾಗೂ ಬಣ್ಣ ಹಚ್ಚಲ್ಪಟ್ಟ ಮುಖದಿಂದ ನಮ್ಮನ್ನು ಮೋಹಕ್ಕೊಳಪಡಿಸುವಿ, ಹೀಗೆ ನಮ್ಮ ಕುರುಡು ಕ್ಷಣಿಕ ಮತಿಗೇಡಿತನದಿಂದಾಗಿ ಮತ್ತು ನಿನಗಾಗಿ ಉರಿಯುವ ಪ್ರೀತಿಯಿಂದ, ನಿನ್ನ ನಿಜವಲ್ಲದ ಭ್ರಷ್ಟಗೊಳಿಸುವ ಸಂತೋಷಗಳಲ್ಲಿ ಇನ್ನೊಂದು ಕ್ಷಣ ಹೆಚ್ಚಾಗಿ ಕಳೆಯುವದಕ್ಕೋಸ್ಕರ, ನಾವು ಆನಂದದಿಂದ ನಮ್ಮ ಆತ್ಮಗಳನ್ನು ಮಾರಿಕೊಳ್ಳುತ್ತೇವೆ, ನಮ್ಮ ದೇವರನ್ನು ಮರೆತು ಬಿಡುತ್ತೇವೆ, ನಮ್ಮ ಕರ್ತನನ್ನು ಮತ್ತೊಮ್ಮೆ ಶಿಲುಬೆಗೇರಿಸುತ್ತೇವೆ, ಮತ್ತು ನಮ್ಮ ನಿತ್ಯವಾದ ಸಂತೋಷದ ನಿರೀಕ್ಷೆಗಳನ್ನು ಬಿಟ್ಟು ಕೊಟ್ಟು ಬಿಡುತ್ತೇವಲ್ಲಾ.[13]

ಆಡಂಬರದ ಅಲಂಕಾರಗಳ ಕೆಳಗೆ, ಬಾಬೆಲ್ "ಒಬ್ಬ ಸೂಳೆ"ಗಿಂತಲೂ (ವ. 1; KJV) ಬೇರೆ ಇನ್ನೇನೂ ಆಗಿರಲಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. *Porn-* ಎಂಬ ಪದವು NASBಯಲ್ಲಿ "ಜಾರತ್ವ" ಎಂದು ಅನುವಾದಿಸಲ್ಪಟ್ಟಿರುವ "ಹಾದರ" (πορνεία, *porneia*) ಎಂಬುದರ ಬೇರು ಮಾತ್ರವೇ ಆಗಿರುವದಿಲ್ಲ, ಆದರೆ "ಜಾರಸ್ತ್ರೀ" ಎಂಬುದರ (πόρνη, *pornē*) ಬೇರು ಸಹ ಆಗಿದೆ. ಮೂಲವಾಕ್ಯದಲ್ಲಿ, *porn-* ಎಂಬುದು 1, 2, 4, ಮತ್ತು 5. ವಚನಗಳಲ್ಲಿ ಸಿಕ್ಕುತ್ತದೆ ಕೆಲವು ಆವೃತ್ತಿಗಳು *porn* as ಎಂಬುದನ್ನು ಈ ವಚನಗಳಲ್ಲಿ "ವ್ಯಭಿಚಾರಗಳು" ಎಂದು ಅನುವಾದಿಸುತ್ತವೆ, ಆದರೆ "ವ್ಯಭಿಚಾರ" (μοιχεία, *moicheia*) ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ ಬೇರೆ ಪದವಿರುತ್ತದೆ. Michael Wilcockನು ಆಕೆಗಾಗಿ ಈ ಚಿತ್ರವನ್ನು ಒದಗಿಸುತ್ತಾನೆ:

... ಆಕೆಯ ಮೇಲೆ ಬರೆದಿರುವದು ಏನೆಂದರೆ [ಬಾಬೆಲ್] ಹಾದರ, ಹಾದರ, ಹಾದರ. ನಮಗೆ ಈ ಪದದ ಗ್ರೀಕ್ ಮೂಲಪದವಾದ *porn* ಎಂಬದು ಮಾತ್ರವೇ ಅತಿ ಪರಿಚಿತವಾಗಿರುತ್ತದೆ; ಮತ್ತು ಯೋಹಾನನು ಐದು ಸಾರಿ ಅದನ್ನು ಪುನರಾವರ್ತಿಸುತ್ತಾನೆ, ಅದನ್ನು ಸವಿಯುತ್ತಿರುವವನಂತೆ ಅಲ್ಲ, ಆದರೆ ಹೊಸಲು ರುಚಿಯನ್ನು ಹೊರಕ್ಕೆ ಉಗುಳುವದಕ್ಕೆ ನಿಷ್ಫಲವಾದ ಪ್ರಯತ್ನವನ್ನು ಮಾಡುವವನಂತೆ ಇರುತ್ತದೆ.[14]

"ಅವಳ **ಹಣೆ**ಯ ಮೇಲೆ - ಬಾಬೆಲೆಂಬ ಮಹಾನಗರಿ, ಭೂಮಿಯಲ್ಲಿರುವ ಜಾರಸ್ತ್ರೀಯರಿಗೂ ಅಸಹ್ಯವಾದ ಕಾರ್ಯಗಳಿಗೂ ತಾಯಿ ಎಂದು ಗೂಢಾರ್ಥವುಳ್ಳ **ಹೆಸರು** ಬರೆದಿತ್ತು." ತಲೆಯ ಪಟ್ಟಿಗಳು ಪ್ರಾಚೀನ ರೋಮಿನಲ್ಲಿ ಒಂದು ಶೃಂಗರಿಸಿಕೊಳ್ಳುವ ವಸ್ತುವಾಗಿತ್ತು, ಮತ್ತು ರೋಮನ್ ವೇಶ್ಯೆಯರು ತಮ್ಮ ತಲೆಯ ಪಟ್ಟಿಗಳನ್ನು ಕೆಲವು ಸಾರಿ ಜಾಹಿರಾತು ಮಾಡಿಕೊಳ್ಳುವದಕ್ಕಾಗಿ ಬಳಸುತ್ತಿದ್ದರು. ಹೇಗೂ, ಜಾರಸ್ತ್ರೀಯು ನೇರವಾಗಿ ಆಕೆಯ ಹಣೆಯ ಮೇಲೆಯೇ ಬರೆಯಲ್ಪಟ್ಟಿರುವದಾಗಿ ನಾವು ಕಲ್ಪನೆ ಮಾಡಿಕೊಳ್ಳಬೇಕೆಂಬುದರ ಸಾಧ್ಯತೆಯಿರುತ್ತದೆ. ಹೆಸರುಗಳು ಹಾಗೂ ಇತರ ಗುರುತುಗಳನ್ನು ಹಣೆಯ ಮೇಲೆ ಬರೆಯಲ್ಪಡುವದರ ಕುರಿತು ಪ್ರಕಟನೆ ಪುಸ್ತಕದಲ್ಲಿ ಹಲವಾರು ಉದಾಹರಣೆಗಳಿರುತ್ತವೆ (7:3; 9:4; 13:16; 14:1; 22:4; ನೋಡಿರಿ 3:12). **ಅಸಹ್ಯವಾದ** ಎಂಬ ಪದವು ಅನೇಕ ಸಾರಿ ಶಾಸ್ತ್ರಗಳಲ್ಲಿ ವಿಗ್ರಹಾರಾಧನೆ ಹಾಗೂ ವಿಗ್ರಹಾರಾಧನೆಗೆ ಸಂಬಂಧ ಪಟ್ಟ ಆಚಾರಗಳನ್ನು ಸೂಚಿಸುವದಕ್ಕೆ ಬಳಸಲಾಗಿರುತ್ತದೆ (ಧರ್ಮೋಪದೇಶಕಾಂಡ 32:16; 2 ಅರಸು 21:11; ಯೆರೆಮೀಯ 44:22). ವಿಗ್ರಹಾರಾಧನೆಯು ಚಕ್ರವರ್ತಿಯ ಆರಾಧಿಸುವಿಕೆಯಲ್ಲಿ ಅಂತರ್ಗತವಾದ ಭಾಗವಾಗಿತ್ತು.

ಬಾಬೆಲಿನ ಜಾರತ್ವದೊಳಗೆ ಲೈಂಗಿಕ ವ್ಯಭಿಚಾರವು ಸೇರಿತ್ತು. ರೋಮ್ ನಗರವು

ಭ್ರಷ್ಟತೆಯ ಪೀಠವಾಗಿತ್ತು - ಮತ್ತು ಅದು ಮರೆಯಾಗಿರಲಿಲ್ಲ, ಆದರೆ ಮುಕ್ತವಾಗಿ ಆಚರಿಸಲ್ಪಡುವಂಥದ್ದಾಗಿತ್ತು.[15] ರೋಮನ್ ಇತಿಹಾಸಕಾರನಾದ Tacitusನು ರೋಮ್ ನಗರವನ್ನು "ಲೋಕದ ಸಕಲ ಘೋರವಾದ ಹಾಗೂ ನಾಚಿಕೆಗೆಟ್ಟ ಸಂಗತಿಗಳು ಒಂದಾಗಿ ಕೂಡಿ ಬಂದು ಒಂದು ನಿವಾಸವನ್ನು ಕಂಡುಕೊಳ್ಳುವ"[16] ಸ್ಥಳವಾಗಿರುತ್ತದೆ ಎಂಬುದಾಗಿ ಬಣ್ಣಿಸುತ್ತಾನೆ. Robert Mounceನು "ರೋಮನ್ ಚಕ್ರವರ್ತಿನಿಯಾದ Messalinaಳು ವೇಷಮರೆಸಿಕೊಂಡು ಸಾರ್ವಜನಿಕ ವೇಶ್ಯಾಗೃಹಗಳಲ್ಲಿ ವೇಶ್ಯೆಯಾಗಿದ್ದಳು ಎಂಬದಾಗಿ ಬಾಲಾಪರಾಧಿಯೊಬ್ಬನ ಕಥನವು ಪ್ರಾಚೀನ ರಾಜಧಾನಿಯಲ್ಲಿ ಜಾರತ್ವವು ಎಷ್ಟೊಂದು ಆಳವಾಗಿತ್ತೆಂಬುದಕ್ಕೆ ಒಂದು ಸೂಚನೆಯಾಗಿರುತ್ತದೆ."[17] ತತ್ವಜ್ಞಾನಿ Senecaನು ರೋಮ್ ನಗರವನ್ನು "ಒಂದು ಹೊಲಸಾದ ಚರಂಡಿ"[18] ಎಂದು ಕರೆದನು.

ಹೇಗೂ, ಬಾಬೆಲಿನ ಜಾರತ್ವವು ಲೈಂಗಿಕ ಅನೈತಿಕತೆಗೆ ಮಾತ್ರವೇ ಸೀಮಿತವಾಗಿರಲಿಲ್ಲ. "ವ್ಯಭಿಚಾರ" ಎಂಬ ಪದವು "ಒಬ್ಬನ ಸಾಮರ್ಥ್ಯಗಳನ್ನು, ತಲಾಂತುಗಳನ್ನು, ಅಥವಾ ಹೆಸರನ್ನು ಒಂದು ಅಯೋಗ್ಯವಾದ ಕಾರ್ಯಕ್ಕಾಗಿ ಮಾರಿಕೊಳ್ಳುವದನ್ನು" ಸೂಚಿಸುವದಕ್ಕೆ ಸಾಮಾನ್ಯ ಅರ್ಥದಲ್ಲಿ ಬಳಬಹುದಾಗಿದೆ. ಮಹಾ ಜಾರಸ್ತ್ರೀಯು "ಸರಿ ಹಾಗೂ ಉದಾತ್ತವಾಗಿದ್ದ *ಎಲ್ಲವನ್ನೂ* ಅಧಿಕಾರ ಹಾಗೂ ಸುಖಭೋಗದ ಪ್ರಶ್ನಾರ್ಹವಾದ ಫಲಿತಕ್ಕಾಗಿ ವ್ಯಭಿಚಾರ ಮಾಡಿದ"[19] ಅಪರಾಧಕ್ಕೊಳಗಾಗಿದ್ದಳು. ಹಳೆಯ ಒಡಂಬಡಿಕೆಯಲ್ಲಿ, ತಮ್ಮನ್ನು ಲೋಕಕ್ಕೆ ಮಾರಿಕೊಂಡ ಯಾವನಿಗಾದರೂ ಮತ್ತು ಎಲ್ಲರಿಗೂ "ಜಾರಳು" ಎಂಬ ಪದವು ಅನ್ವಯವಾಗುತ್ತಿತ್ತು: ನಿನೆವೆಯು ಜಯಗಳ ಸೂಳೆ ಎಂದು ಕರೆಯಲ್ಪಟ್ಟಿತು (ನಹೂಮ 3:4). ತುರ್ ವಾಣಿಜ್ಯದ ಸೂಳೆಯಾಗಿತ್ತು (ಯೆಶಾಯ 23:8, 17). ಬಾಬೆಲ್ ಸುಖಭೋಗದ ಶ್ರೀಮತಿಯಾಗಿದ್ದಳು (ಯೆಶಾಯ 47:5). ಯೆರೂಸಲೇಮ್ ಧಾರ್ಮಿಕ ಸೂಳೆಗಾರಿಕೆಯ ಅಪರಾಧಕ್ಕೊಳಗಾಗಿತ್ತು (ಯೆಶಾಯ 1:21; ಯೆರೆಮೀಯ 2:20; ಯೆಹೆಜ್ಕೇಲ 16:15; 23-29; ಹೋಶೇಯ 9:1).[20] ನಾವು ಇಹಲೋಕದ ದೇವರುಗಳ ಹಿಂದೆ ಹೋಗಿ ಕರ್ತನನ್ನು ತೊರೆದು ಬಿಡುವಾಗ, ನಾವು ಆತನ ಕಟ್ಟಳೆಗಳನ್ನು ಮುರಿಯುವದು ಮಾತ್ರವೇ ಆಗಿರುವದಿಲ್ಲ, ಆದರೆ ಆತನ ಹೃದಯವನ್ನು ಸಹ ಮುರಿಯುವವರಾಗಿದ್ದೇವೆ.

17ನೇ ಅಧ್ಯಾಯದ ಸ್ತ್ರೀಯು ಒಬ್ಬ ಜಾರಸ್ತ್ರೀ ಮಾತ್ರವೇ ಆಗಿರಲಿಲ್ಲ; ಆಕೆಯು **ಜಾರಸ್ತ್ರೀಯರಿಗೆ ತಾಯಿ** ಆಗಿದ್ದಳು; ಆಕೆಯು ತನ್ನ ಪುತ್ರಿಯರಿಗೆ ತನ್ನ ಹೆಜ್ಜೆ ಜಾಡುಗಳಲ್ಲಿ ನಡೆಯುವಂತೆ ಉಪದೇಶಿಸುತ್ತಿದ್ದಳು. ರೋಮ್ ನಗರಿಯು "ಸೂಳೆಯರಿಗೆ ತಾಯಿ" (NEB) ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಆಕೆಯ ಭಕ್ತಿಹೀನತೆಯ ಪ್ರಭಾವವು ಪ್ರಪಂಚದಾದ್ಯಂಥ ಹರಿಡಿಕೊಂಡಿತ್ತು. Sweteನು ಹೀಗೆ ಬರೆಯುತ್ತಾನೆ, "ಸಲ ಕುಲ ಪ್ರಜೆಗಳವರ ಎಲ್ಲಾ *pornai* [ಸೂಳೆಯರು] ಆಕೆಯ ಮಕ್ಕಳಾಗಿದ್ದಾರೆ; ಪ್ರಾಂತ್ಯದಲ್ಲಿನ ಸಕಲ ದುರ್ಗುಣಗಳು ಹಾಗೂ ಮೂಢನಂಬಿಕೆಗಳು ಆಕೆಯ ಸ್ತನಪಾನದಿಂದ ಪೋಷಿಸಲ್ಪಡುತ್ತವೆ."[21]

**ವಚನ 6.** ಜಾರಸ್ತ್ರೀಯ ನಿಜ ಗುಣಸ್ವಭಾವದ ಕುರಿತಾಗಿ ಬಹಳ ಸ್ಪಷ್ಟಗೊಳಿಸುವ ಹೇಳಿಕೆಯು 6ನೇ ವಚನದಲ್ಲಿ ಸಿಕ್ಕುತ್ತದೆ: **ಆ ಸ್ತ್ರೀಯು ದೇವಜನರ ರಕ್ತವನ್ನೂ ಯೇಸುವಿಗೋಸ್ಕರ ಸಾಕ್ಷಿ ಕೊಟ್ಟು ಹತರಾದವರ ರಕ್ತವನ್ನೂ ಕುಡಿದು ಮತ್ತಳಾಗಿರುವದನ್ನು ಕಂಡೆನು. ನಾನು ಅವಳನ್ನು ನೋಡಿ ಅತ್ಯಾಶ್ಚರ್ಯಪಟ್ಟೆನು. ದೇವಜನರ** ಮತ್ತು **ಯೇಸುವಿಗೋಸ್ಕರ ಸಾಕ್ಷಿಕೊಟ್ಟ**ವರು ಆಕೆಯ ಮೋಹಗೊಳಿಸುವ ತಂತ್ರಗಳನ್ನು ಎದುರಿಸಿ ನಿಂತಿದ್ದರು, ಮತ್ತು ಇದರಿಂದ ಆಕೆಯು ಕುಪಿತಗೊಂಡಿದ್ದಳು. ಆಕೆಯು ಆಕೆಯ "ಮೋಹ"ಕ್ಕೆ ಪ್ರತಿರೋಧ ಹೊಂದಿದ್ದವರನ್ನು ಹಿಂಸಿಸಿ ಕೊಲ್ಲುವದರಲ್ಲಿ ಆಕೆಗೆ ಪೈಶಾಚಿಕವಾದ ಆನಂದ

ಸಿಕ್ಕುತ್ತಿತ್ತು. “ದೇವಜನರು” ಹಾಗೂ “ಯೇಸುವಿಗೋಸ್ಕರ ಸಾಕ್ಷಿಕೊಟ್ಟವರು” ನಡುವೆ ಯಾವದೇ ಭಿನ್ನತೆಯನ್ನು ಮಾಡಕೂಡದು ಯಾಕೆಂದರೆ ಎರಡೂ ಗುಂಪಿನವರು ಜಾರಸ್ತ್ರೀಯಿಂದ ಕೊಲ್ಲಲ್ಪಟ್ಟಿದ್ದರು. ಈ ಭಾಷೆಯು ರೋಮ್ ನಗರಿಯ ಕೈಯಲ್ಲಿ ರಕ್ತಸಾಕ್ಷಿಯಾಗಿ ಕೊಲ್ಲಲ್ಪಟ್ಟ *ಪ್ರತಿಯೊಬ್ಬ* ಕ್ರೈಸ್ತನನ್ನು ಸೂಚಿಸುವದಕ್ಕೆ ಬಳಸುವ ಕಾವ್ಯಾತ್ಮಕ ರೀತಿಯಾಗಿದೆ. ಮಹಾ ಜಾರಸ್ತ್ರೀಯು ಹೊರಗೆ ಸೌಂದರ್ಯವತಿಯಾಗಿ ಕಂಡಿರಬಹುದು, ಆದರೆ ಆಕೆಯ ಕೃತ್ಯಗಳು ಅವಳ ಕುರೂಪತೆಯನ್ನು ಬಯಲುಗೊಳಿಸುತ್ತವೆ.

ಯೋಹಾನನು ಸ್ತ್ರೀಯನ್ನು ಕಂಡಾಗ, ಆತನು **ಅತ್ಯಾಶ್ಚರ್ಯಪಟ್ಟನು.** ಮೂಲವಾಕ್ಯದಲ್ಲಿ ἐθαύμασα ... θαῦμα μέγα (*ethaumasa ... thauma mega*) ಎಂದಿರುತ್ತದೆ, ಅಂದರೆ “ನಾನು ಮಹಾ ಆಶ್ಚರ್ಯಕ್ಕೊಳಗಾದೆನು” ಅಥವಾ “ನಾನು ದೊಡ್ಡ ಅಚ್ಚರಿಯಿಂದ ಆಶ್ಚರ್ಯಪಟ್ಟೆನು” ಎಂದರ್ಥವಾಗಿದೆ. NIVಯಲ್ಲಿ “ನಾನು ಬಹಳವಾಗಿ ಚಕಿತಗೊಂಡೆನು” ಎಂದಿರುತ್ತದೆ. ಬಹುಶಃ ಅಪೊಸ್ತಲನು ಚಕಿತಗೊಂಡಿದ್ದಕ್ಕೆ ಕಾರಣವು ಇದಾಗಿರಬಹುದು, ಏನೆಂದರೆ 1ನೇ ವಚನದಲ್ಲಿ ದೇವದೂತನು ಮಾಡಿದ ವಾಗ್ದಾನದ ಆಧಾರದಲ್ಲಿ, ಆತನು ಬೆಂಕಿ ಹೊತ್ತಿ ಉರಿಯುತ್ತಿರುವ ನಗರವನ್ನು ಕಾಣುವೆನೆಂದು ನಿರೀಕ್ಷಿಸಿಕೊಂಡಿದ್ದಿರಬೇಕು, ಆದರೆ ಬದಲಾಗಿ ಆತನು ತನ್ನ ಅಧಿಕಾರದ ಉತ್ತುಂಗತೆಯಲ್ಲಿದ್ದ ಒಬ್ಬ ಸ್ತ್ರೀಯನ್ನು ಕಾಣುತ್ತಿದ್ದಾನೆ. ಬಹುಶಃ ಆಕೆಯು ತನ್ನ ಅಧಿಕಾರ ಹಾಗೂ ದೃಢವಿಶ್ವಾಸವನ್ನು ಯಥೇಚ್ಛವಾಗಿ ತೋರಿಸುತ್ತಿದ್ದಳು; ಆಕೆಯು ಅಪರಾಜಿತಳೆಂಬಂತೆ ಕಂಡಳು.

**ವಚನ 7.** ಯೋಹಾನನ ಪ್ರತಿಕ್ರಿಯೆಗೆ ಕಾರಣವು ಏನೇ ಆಗಿದ್ದರೂ, ಇದು ದೇವದೂತನಿಗೆ ಆ ಸ್ತ್ರೀ ಹಾಗೂ ಆಕೆಯ ಬೆಟ್ಟದ ಕುರಿತು ಚರ್ಚೆ ಮಾಡಲು ಸದವಕಾಶವನ್ನು ಒದಗಿಸಿತ್ತು: **ಆಗ ಆ ದೇವದೂತನು ನನಗೆ ಹೇಳಿದ್ದು - ನೀನೇಕೆ ಆಶ್ಚರ್ಯಪಟ್ಟೆ? ಆ ಸ್ತ್ರೀಯಿಂದಲೂ ಅವಳ ವಾಹನವಾಗಿದ್ದು ಏಳು ತಲೆಗಳೂ ಹತ್ತು ಕೊಂಬುಗಳೂ ಉಳ್ಳ ಮೃಗದಿಂದಲೂ ಸೂಚಿತವಾದ ಗೂಢಾರ್ಥವನ್ನು ನಾನು ನಿನಗೆ ವಿವರಿಸುತ್ತೇನೆ. ಗೂಢಾರ್ಥ** ಎಂಬುದು ಈ ಮುಂಚೆ ಅರ್ಥಮಾಡಿಕೊಳ್ಳಲ್ಪಟ್ಟಿರದ, ಆದರೆ ಈಗ ಪ್ರಕಟಗೊಳಿಸಲ್ಪಟ್ಟಿರುವ ಒಂದು ಸತ್ಯವನ್ನು ಸೂಚಿಸುತ್ತದೆ (10:7; 17:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೋಹಾನನ ಆಶ್ಚರ್ಯಪಡುವಿಕೆಯು ಸ್ತ್ರೀಯ ಕಡೆಗೆ ಆಗಿತ್ತು, ಆದರೆ ದೇವದೂತನು ಜಾರಸ್ತ್ರೀ *ಹಾಗೂ* ಮೃಗ ಇಬ್ಬರ ಬಗ್ಗೆಯೂ ವಿವರಿಸುತ್ತೇನೆಂದು ಹೇಳಿದನು. ಸ್ತ್ರೀಯನ್ನು ಆಕೆಯ ಕುದುರೆಯನ್ನು ಹೊರತುಪಡಿಸಿ ಅರ್ಥಮಾಡಿಕೊಳ್ಳುವದಕ್ಕೆ ಸಾಧ್ಯವಿರಲಿಲ್ಲ - ನಾಲ್ಕು ಸವಾರರನ್ನು ಸಹ ಅವರ ಕುದುರೆಗಳನ್ನು ಹೊರತುಪಡಿಸಿ ಅರ್ಥಮಾಡಿಕೊಳ್ಳಲು ಸಾಧ್ಯವಿರಲಿಲ್ಲ.

## ಏಳು ತಲೆಗಳೂ ಹತ್ತು ಕೊಂಬುಗಳೂ ಇರುವ ಮೃಗ (17:8-14)

**[8]ನೀನು ಕಂಡ ಈ ಮೃಗವು ಮೊದಲು ಇತ್ತು, ಈಗ ಇಲ್ಲ, ಮತ್ತು ಅಧೋಲೋಕದಿಂದ ಏರಿಬಂದು ನಾಶಕ್ಕೆ ಹೋಗುವದು. ಭೂನಿವಾಸಿಗಳೊಳಗೆ ಯಾರಾರ ಹೆಸರುಗಳು ಲೋಕಾದಿಯಿಂದ ಜೀವಬಾಧ್ಯರ ಪಟ್ಟಿಯಲ್ಲಿ ಬರೆದಿರುವದಿಲ್ಲವೋ ಅವರು ಈ ಮೃಗವನ್ನು ನೋಡಿ ಇದು ಮೊದಲು ಇತ್ತು, ಈಗ ಇಲ್ಲ, ಇನ್ನು ಮೇಲೆ ಬರುವದು ಎಂದು ತಿಳಿದು ಆಶ್ಚರ್ಯಪಡುವರು. [9]ಇದು ಬುದ್ಧಿವಂತನಿಗೆ ಮಾತ್ರ ಗೊತ್ತಾಗುವದು. ಆ ಏಳು ತಲೆಗಳು ಆ ಸ್ತ್ರೀ ಕೂತುಕೊಂಡಿರುವ ಏಳು ಬೆಟ್ಟಗಳೇ; [10]ಇದಲ್ಲದೆ ಅವು ಏಳು ಮಂದಿ ಅರಸುಗಳನ್ನು ಸೂಚಿಸುತ್ತವೆ; ಅವರಲ್ಲಿ ಐದು ಮಂದಿ ಬಿದ್ದುಹೋಗಿದ್ದಾರೆ, ಒಬ್ಬನು ಇದ್ದಾನೆ, ಮತ್ತೊಬ್ಬನು ಇನ್ನೂ ಬಂದಿಲ್ಲ. ಬಂದ ಮೇಲೆ ಅವನು ಸ್ವಲ್ಪಕಾಲ ಇರಬೇಕು. [11]ಮೊದಲಿದ್ದು ಈಗ ಇಲ್ಲದಿರುವ**

**ಆ ಮೃಗವು ತಾನೇ ಎಂಟನೆಯ ಅರಸು; ಅವನು ಆ ಏಳು ಮಂದಿ ಅರಸುಗಳಿಗೆ ಸೇರಿದವನು; ನಾಶಕ್ಕೆ ಹೋಗುವನು. [12]ನೀನು ಕಂಡ ಆ ಹತ್ತು ಕೊಂಬುಗಳು ಅಂದರೆ ರಾಜ್ಯವನ್ನು ಇನ್ನೂ ಹೊಂದದಿರುವ ಹತ್ತು ಮಂದಿ ಅರಸುಗಳು. ಅವರು ಒಂದು ಗಳಿಗೆಯವರೆಗೆ ರಾಜರಂತೆ ಆಳುವ ಅಧಿಕಾರವನ್ನು ಮೃಗದೊಂದಿಗೆ ಹೊಂದುತ್ತಾರೆ. [13]ಅವರು ಒಂದೇ ಅಭಿಪ್ರಾಯವುಳ್ಳವರಾಗಿದ್ದು ತಮ್ಮ ಶಕ್ತಿಯನ್ನೂ ಅಧಿಕಾರವನ್ನೂ ಮೃಗಕ್ಕೆ ಕೊಡುತ್ತಾರೆ. [14]ಅವರು ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವರು, ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವದರಿಂದ ಅವರನ್ನು ಜಯಿಸುವನು; ಮತ್ತು ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಲುಗಾರರಾಗುವರು.**

**ವಚನ 8.** ದೇವದೂತನು ಹೀಗೆ ಆರಂಭಿಸುತ್ತಾನೆ, **ನೀನು ಕಂಡ ಈ ಮೃಗವು ಮೊದಲು ಇತ್ತು, ಈಗ ಇಲ್ಲ.** ಕೆಲವರು 8 ಮತ್ತು 11 ವಚನಗಳಲ್ಲಿರುವ **ಇಲ್ಲ** ಎಂಬ ಪದಗುಚ್ಛವನ್ನು ಯೋಹಾನನು ಬರೆಯುತ್ತಿರುವ ವೇಳೆಯಲ್ಲಿ ಮೃಗವು ಅಸ್ತಿತ್ವದಲ್ಲಿರಲೇ ಇಲ್ಲ ಎಂದು ಅರ್ಥೈಸಿಕೊಳ್ಳುತ್ತಾರೆ. ಇದಕ್ಕೆ ತದ್ವಿರುದ್ಧವಾಗಿರುವ ಸಾಕ್ಷಿಗಳ ಬೆಳಕಿನಲ್ಲಿ ಈ ಅರ್ಥನಿರೂಪಣೆಯು ಅಸಂಭವನೀಯವೆಂದು ತೋರುತ್ತದೆ: 13ನೇ ಅಧ್ಯಾಯದಲ್ಲಿ ಮೃಗದ ಕುರಿತು ಚರ್ಚೆಯಿರುತ್ತದೆ, ಸ್ತ್ರೀಯು ಮೃಗದ ಮೇಲೆ ಕೂತಿದ್ದಳು ಎಂಬ ವಾಸ್ತವಾಂಶ, ಮತ್ತು ಮೃಗವು ಅಸ್ತಿತ್ವದಲ್ಲಿದ್ದ ಒಂದು ತಲೆಯನ್ನು ಹೊಂದಿತ್ತು (ವಚನಗಳು 9, 10). "ಇಲ್ಲ" ಎಂಬ ಪದಗುಚ್ಛಕ್ಕೆ ಯಾವದೇ ಮಹತ್ವವನ್ನು ಜೋಡಿಸುವದಾದಲ್ಲಿ, ಅದು ಬಹುಶಃ ಯೋಹಾನನು ಹಿಂಸೆಯಿಂದ ಸ್ವಲ್ಪ ಕಾಲ ಬಿಡುವು ಸಿಕ್ಕ ಕಾಲಾವಧಿಯಲ್ಲಿ ಬರೆದನು ಎಂದಾಗಿರಬಹುದು. ಪದಗುಚ್ಛದ ಅರ್ಥವು ಇದೇ ಆಗಿರುವದಾದರೆ, ಹಿಂಸೆಯು ಮುಗಿದು ಹೋಗಿಲ್ಲ ಮತ್ತು ಇನ್ನೂ ಘೋರವಾದದ್ದು ಬರುವದಿದೆ ಎಂಬುದನ್ನು ಕ್ರೈಸ್ತರು ತಿಳಿದುಕೊಳ್ಳಬೇಕೆಂಬುದು ಯೋಹಾನನ ಬಯಕೆಯಾಗಿರಬಹುದಾಗಿದೆ.

ಮೃಗವು ಸ್ವಲ್ಪ ಸಮಯದಲ್ಲಿಯೇ **ಅಧೋಲೋಕದಿಂದ ಏರಿಬಂದು** ಕಾಣಿಸಿಕೊಳ್ಳುವದಿತ್ತು. **ಅಧೋಲೋಕ** ಎಂಬುದು ದುರಾತ್ಮಗಳ ನೆಲೆಯನ್ನು ಸೂಚಿಸುವದಾಗಿದೆ (9:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅದು ನರಕವನ್ನು (γέεννα, *gehenna*) ಸೂಚಿಸುವದಿಲ್ಲ. ಮೃಗವು **ನಾಶಕ್ಕೆ ಹೋಗುವ**ದಕ್ಕೆ ನೇಮಿಸಲ್ಪಟ್ಟಿತ್ತು. 11ನೇ ವಚನದಲ್ಲಿ "ನಾಶನ" ("ಅಧೋಗತಿ," KJV) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ ἀπώλεια (*apōleia*) ಎಂಬುದರ ಅರ್ಥವು "ಸಂಪೂರ್ಣ ಧ್ವಂಸ, ಯೋಗಕ್ಷೇಮವನ್ನು ಕಳಕೊಳ್ಳುವದಿ"[22] ಎಂದಾಗಿದೆ. ಈ ಪದವು ಅಂತಿಮ, ನಿತ್ಯವಾದ ನಾಶನವನ್ನು ಸೂಚಿಸುವದಕ್ಕೆ ಅನೇಕ ಸಾರಿ ಹೊಸ ಒಡಂಬಡಿಕೆಯಲ್ಲಿ ಬಳಸಲ್ಪಟ್ಟಿರುತ್ತದೆ (ಮತ್ತಾಯ 7:13; ಫಿಲಿಪ್ಪಿ 1:28; 3:19; ಇಬ್ರಿಯ 10:39; 2 ಪೇತ್ರ 3:7). ನಾಶನಕ್ಕೆ ಹೋಗುತ್ತಿರುವ ಮೃಗದ ವಿವರಗಳನ್ನು 19ನೇ ಅಧ್ಯಾಯದ ಅಂತ್ಯದ ಸಮೀಪದಲ್ಲಿ ಕೊಡಲಾಗುವದು.

ದೇವದೂತನು ಮುಂದುವರೆದು ಹೀಗೆ ಹೇಳಿದನು, **ಭೂನಿವಾಸಿಗಳೊಳಗೆ ಯಾರಾರ ಹೆಸರುಗಳು ಲೋಕಾದಿಯಿಂದ ಜೀವಬಾಧ್ಯರ ಪಟ್ಟಿಯಲ್ಲಿ ಬರೆದಿರುವದಿಲ್ಲವೋ ಅವರು ಈ ಮೃಗವನ್ನು ನೋಡಿ ಇದು ಮೊದಲು ಇತ್ತು, ಈಗ ಇಲ್ಲ, ಇನ್ನು ಮೇಲೆ ಬರುವದು ಎಂದು ತಿಳಿದು ಆಶ್ಚರ್ಯಪಡುವರು. ಭೂನಿವಾಸಿಗಳೊಳಗೆ** ಎಂಬ ಪದಗುಚ್ಛವು ಅವಿಶ್ವಾಸಿಗಳನ್ನು, ಕ್ರೈಸ್ತೇತರರನ್ನು ಸೂಚಿಸುವದಾಗಿದೆ. ಅರ್ಥವು ಈ ವಾಕ್ಯಭಾಗದಲ್ಲಿ ಸ್ಪಷ್ಟವಾಗಿ ತೋರಿ ಬರುತ್ತದೆ, ಅದು ಅವರ ಹೆಸರುಗಳು **ಜೀವಬಾಧ್ಯರ ಪಟ್ಟಿಯಲ್ಲಿ** ಬರೆಯಲ್ಪಟ್ಟಿಲ್ಲ ಎಂಬುದನ್ನು

ಒತ್ತಿ ಹೇಳುತ್ತದೆ (3:5; 20:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ಲೋಕಾದಿಯಿಂದ** ಎಂಬ ಪದಗುಚ್ಛವು ದೇವರ ನಿತ್ಯವಾದ ಉದ್ದೇಶವನ್ನು ಒತ್ತಿ ಹೇಳುತ್ತದೆ; ಇದು ವ್ಯಕ್ತಿಯ ಪೂರ್ವನಿರ್ಣಯದ ಗತಿ ಅಥವಾ ನಂಬಿಕೆಭ್ರಷ್ಟಗೊಳ್ಳುವಿಕೆಯ ಅಸಾಧ್ಯತೆಯ ಕುರಿತು ಕಲಿಸುವದಿಲ್ಲ (13:8ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಕರ್ತನು ಈಗಾಗಲೇ ಒಬ್ಬ ವ್ಯಕ್ತಿಯ ಹೆಸರು ಜೀವಬಾಧ್ಯರ ಪಟ್ಟಿಯಿಂದ ಅಳಸಿ ಹಾಕುವ ಸಾಧ್ಯತೆಯನ್ನು ಪರೋಕ್ಷವಾಗಿ ಸೂಚಿಸಿದ್ದನು (3:5). G. B. Cairdನು ಅಭಿಪ್ರಾಯ ಪಟ್ಟದ್ದೇನೆಂದರೆ, "ಯೋಹಾನನು ಪೂರ್ವದಲ್ಲೇ ನೇಮಿಸಲ್ಪಟ್ಟ ವಿಧಿ ಹಾಗೂ ಸ್ವೇಚ್ಛಾ-ಚಿತ್ತ ಇವುಗಳ ನಡುವೆ ಹೇಗೆ ಪರಸ್ಪರ ಸಂಬಂಧವಿದೆ ಎಂಬುದನ್ನು ತೋರಿಸುವಂಥ ಜಾಗರೂಕತೆಯಿಂದ ಅರ್ಹಗೊಳಿಸಲ್ಪಟ್ಟ ಹೇಳಿಕೆಯನ್ನು ನೀಡುವದರಲ್ಲಿ ಆಸಕ್ತಿಯನ್ನು ಹೊಂದಿರಲಿಲ್ಲ; [ಆತನು] ಕೇವಲ ಎರಡು ನಂಬಿಕೆಗಳನ್ನು ಯಾವದೇ ಅರ್ಹಗೊಳಿಸುವಿಕೆಯಿಲ್ಲದೆ ಒಂದರ ಪಕ್ಕದಲ್ಲಿ ಒಂದನ್ನು ಇಡುತ್ತಾನೆ ಮತ್ತು ಒಂದು ಮತ್ತೊಂದನ್ನು ಅರ್ಹಗೊಳಿಸುವದಕ್ಕೆ ಅವಕಾಶ ನೀಡುತ್ತಾನೆ."[23]

ಮೃಗವು **ಮೊದಲು ಇತ್ತು, ಈಗ ಇಲ್ಲ.** ಈ ಪದಗುಚ್ಛಕ್ಕೆ ಹಲವಾರು ಅರ್ಥಗಳಿರಬಹುದಾಗಿದೆ. ನಾವು 13ನೇ ಅಧ್ಯಾಯವನ್ನು ಅಧ್ಯಯನ ಮಾಡಿದ ವೇಳೆ, ಸಮುದ್ರದಿಂದ ಬಂದ ಮೃಗವು ಕ್ರಿಸ್ತ-ವಿರೋಧಿ ಸರ್ಕಾರದ ವ್ಯಕ್ತೀಕರಣವಾಗಿರುತ್ತದೆಂದು ಅಭಿಪ್ರಾಯವನ್ನು ತಿಳಿಸಲಾಯಿತು. ಮೃಗವು ದಾನಿಯೇಲ 7ನೇ ಅಧ್ಯಾಯದಲ್ಲಿರುವ ಬಾಬೆಲ್, ಮೇದ್ಯೆಯ-ಪಾರಸಿ, ಗ್ರೀಕ್, ಹಾಗೂ ರೋಮನ್ ಸಾಮ್ರಾಜ್ಯಗಳನ್ನು ಪ್ರತಿನಿಧಿಸುವಂಥ ನಾಲ್ಕು ಮೃಗಗಳ ಒಂದುಗೂಡಿರುವಿಕೆಯಾಗಿದೆ ಎಂದು ತಿಳಿದುಕೊಂಡೆವು (13:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಒಂದು ಅರ್ಥದಲ್ಲಿ, ಮೃಗವು "ಇಲ್ಲ"ದಾಗಿತ್ತು ಯಾಕೆಂದರೆ ನಾಲ್ಕರೊಳಗೆ ಮೂರು ಸಾಮ್ರಾಜ್ಯಗಳು ಗತಿಸಿ ಹೋಗಿದ್ದವು. ಹೇಗೂ, ಇನ್ನೊಂದು ಅರ್ಥದಲ್ಲಿ, ಆತನು ಇರುವಿಕೆಯನ್ನು ಮುಂದುವರೆಸಿದದ್ದನು - ಮತ್ತು ಯಾವಾಗಲೂ ಇರುವನು ಯಾಕೆಂದರೆ ಎಲ್ಲಾ ಕಾಲದಲ್ಲೂ ರೆಕ್ಕೆಗಳನ್ನು ತೆರೆದುಕೊಂಡು ಕಾಯುತ್ತಿರುವ ಕ್ರಿಸ್ತ-ವಿರೋಧಿ ಸರ್ಕಾರವೊಂದರ "ಹೊಸ ಹಾಗೂ ಸುಧಾರಿತ" ಆವೃತ್ತಿಯು ಇದ್ದೇ ಇರುತ್ತದೆ. ಈ ಮುಂಚೆ, ಮೃಗವು "ಅಧೋಲೋಕದಿಂದ ಬರುವ ಮೃಗವು" (11:7) ಎಂದು ಬಣ್ಣಿಸಲ್ಪಟ್ಟಿತ್ತು. ಮೂಲ ವಾಕ್ಯದಲ್ಲಿ, "ಬರುವದು" ಎಂಬುದು ವರ್ತಮಾನಕಾಲ ರೂಪದಲ್ಲಿರುತ್ತದೆ, ಅದು ಮೃಗವು *ನಿರಂತರವಾಗಿ* ಅಧೋಲೋಕದಿಂದ ಬರುತ್ತಲಿರುತ್ತದೆ ಎಂದು ಸೂಚಿಸಬಹುದಾಗಿದೆ (11:7ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೋಹಾನನ ದಿನದಲ್ಲಿ, ಮೃಗವು ರೋಮನ್ ಸಾಮ್ರಾಜ್ಯವಾಗಿತ್ತು, ಆದರೆ ರೋಮನ್ ಸಾಮ್ರಾಜ್ಯದ ನಾಶನವು ಮೃಗದ ಅವಸಾನವನ್ನು ಸೂಚಿಸಲಿಲ್ಲ. ಸೈತಾನನು ಈ ದಿನದ ತನಕವೂ ತನ್ನ ರಾಜಕೀಯ ಮೈತ್ರಿಗಳನ್ನು ಹೊಂದಿರುತ್ತಲೇ ಇದ್ದಾನೆ.

8ನೇ ವಚನದಲ್ಲಿ ಇರಬಹುದಾದ ಇನ್ನೊಂದು ಅರ್ಥವು **ಆಶ್ಚರ್ಯಪಡುವರು** ಎಂಬ ಮಾತುಗಳಿಂದ ಸೂಚಿಸಲ್ಪಟ್ಟಿರುತ್ತದೆ. "ಭೂನಿವಾಸಿಗಳು ... ಆಶ್ಚರ್ಯಪಡುವರು." 13ನೇ ಅಧ್ಯಾಯದಲ್ಲಿ, ಯೋಹಾನನು ಸಮುದ್ರದಿಂದ ಬಂದ ಮೃಗವನ್ನು ಬಣ್ಣಿಸಿದ ವೇಳೆ, ಆತನು ಹೀಗೆ ಹೇಳಿದನು, "ಅದರ ತಲೆಗಳಲ್ಲಿ ಒಂದು ತಲೆ ಗಾಯಹೊಂದಿ ಸಾಯುವ ಹಾಗಿರುವದನ್ನು ಕಂಡೆನು. ಆ ಮರಣಕರವಾದ ಗಾಯವು ವಾಸಿಯಾಯಿತು; ಭೂಲೋಕದವರೆಲ್ಲರು ಆ ಮೃಗವನ್ನು ನೋಡುತ್ತಾ ಆಶ್ಚರ್ಯಪಟ್ಟರು" (13:3). 13:3ರಲ್ಲಿನ "ಆಶ್ಚರ್ಯಪಟ್ಟರು" ಮತ್ತು 17:8ರಲ್ಲಿ "ಆಶ್ಚರ್ಯಪಡುವರು" ಎಂದು ಅನುವಾದಿಸಲ್ಪಟ್ಟಿರುವ ಪದಗಳೆರಡೂ θαυμάζω

(*thaumazō*) ಎಂಬುದರ ರೂಪಗಳಾಗಿವೆ. ನಾವು 13ನೇ ಅಧ್ಯಾಯದಲ್ಲಿ ಮೃಗದ ಗಾಯವು ಗುಣವಾಗುವದರ ಕುರಿತು ಅಧ್ಯಯನ ಮಾಡಿದ ವೇಳೆ, ಕೆಲವರು ಈ ಚಿತ್ರಣವು "ನಿರೋ ಮತ್ತೇ ಜೀವ ಪಡೆಯುವನು ಕಟ್ಟುಕಥೆ"ಗೆ - ನಿರೋ ಒಂದು ದಿನ ರೋಮ್ ನಗರ ಮೇಲೆ ಸೇಡು ತೀರಿಸಿಕೊಳ್ಳಲು ಸೈನ್ಯವನ್ನು ಕಟ್ಟಿಕೊಂಡು ಹಿಂದಿರುಗಿ ಬರುವನು ಎಂಬ ನಂಬಿಕೆ - ಸಂಬಂಧಪಟ್ಟಿರುತ್ತದೆ ಎಂದು ಮನವರಿಕೆಗೊಂಡಿದ್ದಾರೆ ಎಂಬುದನ್ನು ಗಮನಿಸಲಾಯಿತು. ಈ ಅಭಿಪ್ರಾಯದ ಪ್ರಕಾರವಾಗಿ, ನಿರೋ ಚಕ್ರವರ್ತಿಯು ಕ್ರೈಸ್ತತ್ವದ ವಿರೋಧಿಯ ಮೂರ್ತೀಕರಣ ಆಗಿರುತ್ತಾನೆ: ಆತನು "ಮೊದಲು ಇತ್ತು" (ಆತನು ಜೀವಿಸಿದ್ದನು) ಮತ್ತು "ಈಗ ಇಲ್ಲ" (ಆತನು ಮರಣಿಸಿದನು), ಆದರೆ ಆತನು "ಇನ್ನು ಮೇಲೆ ಬರುವನು" (Domitianನೆಂಬ ವ್ಯಕ್ತಿಯಲ್ಲಿ, ಆತನು ನಿರೋನಿಂದ ಆರಂಭವಿಸಲ್ಪಟ್ಟ ಹಿಂಸೆಯನ್ನು ಮುಂದುವರೆಸಿದನು ಹಾಗೂ ಇನ್ನಷ್ಟು ತೀಕ್ಷ್ಣಗೊಳಿಸಿದನು). ಪುನಃ ಇಲ್ಲಿ ಒತ್ತಿ ಹೇಳುವದು ಪ್ರಾಮುಖ್ಯವಾಗಿರುವದೇನೆಂದರೆ, ಯೋಹಾನನು ಈ ದಂತಕಥೆಯನ್ನು ಬಳಸಿದಾಗ್ಯೂ, ಆತನು ಹಾಗೆ ಬಳಸಿದ್ದರಿಂದ ಆತನಿಗೆ ಅದರಲ್ಲಿ ನಂಬಿಕೆಯಿತ್ತೆಂಬುದನ್ನು ಯಾವ ವಿಧದಲ್ಲಿಯೂ ಸೂಚಿಸುವದಿಲ್ಲ.

13:3ರ ಮೇಲಿನ ವ್ಯಾಖ್ಯೆಗಳಲ್ಲಿ, "ನಿರೋ ಮತ್ತೇ ಜೀವ ಪಡೆಯುವನು ಕಟ್ಟುಕಥೆ" ಕುರಿತು ವಿವರಿಸಿದ ಬಳಿಕ, ಈ ವಾಕ್ಯಭಾಗವು ರೋಮನ್ ಸಾಮ್ರಾಜ್ಯಕ್ಕೆ ಇರುವ ಆಶ್ಚರ್ಯಕರವಾದ ಚೇತರಿಸಿಕೊಳ್ಳುವ ಶಕ್ತಿಯನ್ನು ಸೂಚಿಸುತ್ತಿರಬಹುದಷ್ಟೆ ಎಂದು ಪ್ರಸ್ತಾಪ ಮಾಡಲಾಯಿತು. ನಿರೋ ಚಕ್ರವರ್ತಿಯ ಮರಣದ ವೇಳೆ, ಸಾಮ್ರಾಜ್ಯವು ಒಂದೇ ವರ್ಷದಲ್ಲಿ ನಾಲ್ವರು "ಚಕ್ರವರ್ತಿಗಳು" ಬರುವ ಮೂಲಕ ಅವ್ಯವಸ್ಥೆಗೊಳಪಟ್ಟಿತ್ತು; ಆದರೆ Vespasianನು ಸಿಂಹಾಸನವನ್ನೇರಿದನು, ಸಾಮ್ರಾಜ್ಯವು ಚೇತರಿಸಿಕೊಂಡು ಇನ್ನು ಅಧಿಕವಾದ ಮಹಿಮೆಯ ಕಡೆಗೆ ಸಾಗಿತ್ತು. ಬಹುಶಃ "ಮೊದಲು ಇತ್ತು, ಈಗ ಇಲ್ಲ, ಇನ್ನು ಮೇಲೆ ಬರುವದು" ಎಂಬ ಪದಗುಚ್ಛವನ್ನು ಒಟ್ಟಾರೆಯಾಗಿ ಅರ್ಥೈಸಿಕೊಳ್ಳಬೇಕಾಗಿರುತ್ತದೆ, ಮತ್ತು ಪವಿತ್ರಾತ್ಮನು ರೋಮನ್ ಸಾಮ್ರಾಜ್ಯದ ಛಾಯೆಯಾಗಿರುವ ಮೃಗವನ್ನು ನಾಶಗೊಳಿಸುವದು ಕಷ್ಟಕರವಾಗಿರುತ್ತದೆಂಬುದನ್ನಷ್ಟೆ ಸೂಚ್ಯಾರ್ಥವಾಗಿ ತಿಳಿಸುವ ಉದ್ದೇಶ ಹೊಂದಿದ್ದಿರಬಹುದಾಗಿದೆ. ಈ ಅವಿನಾಶತೆಯಂತೆ ಕಾಣಿಸುವಿಕೆಯು ಯಶಸ್ಸನ್ನು ಆರಾಧನೆ ಮಾಡಿರುವವರಿಗೆ ಯಾವಾಗಲೂ ಆಶ್ಚರ್ಯವನ್ನುಂಟು ಮಾಡಿರುತ್ತದೆ.

ಮೃಗವು ಏಕೆ "ಮೊದಲು ಇತ್ತು, ಈಗ ಇಲ್ಲ, ಇನ್ನು ಮೇಲೆ ಬರುವದು" ಎಂದು ಬಣ್ಣಿಸಲ್ಪಟ್ಟಿತೆಂಬುದರ ವಿಷಯದಲ್ಲಿ ಇನ್ನೊಂದು ಸಾಧ್ಯತೆಯು ಇರಬಹುದಾಗಿದೆ: ಪ್ರಕಟನೆ ಪುಸ್ತಕದಲ್ಲಿ ಕರ್ತನು "ಇದ್ದವನು, ಇರುವವನು ಮತ್ತು ಬರುವವನು" (1:4; ನೋಡಿರಿ 1:8; 4:8). Efirdನು 8ನೇ ವಚನದ ಮಾತುಗಳು ಪ್ರಾಥಮಿಕವಾಗಿ "ದೇವರ ಕುರಿತು ಯೋಹಾನನು ಮಾಡುವ ನೆಚ್ಚಿನ ಬಣ್ಣನೆಯ ವಿರೋಧನ್ಯಾಸ"[24] ಎಂಬದಾಗಿ ಉದ್ದೇಶದಿಂದ ಹೇಳಲ್ಪಟ್ಟಿವೆ ಎಂದು ಅಭಿಪ್ರಾಯ ಪಡುತ್ತಾನೆ. ಅದು ಹೀಗೆಯೇ ಇರುವದಾದಲ್ಲಿ, ಮೃಗದ ವಿಷಯದಲ್ಲಿ ಬಳಸಲಾಗಿರುವ ಹಾಗೂ ಕರ್ತನನ್ನು ಬಣ್ಣಿಸುವದಕ್ಕೆ ಬಳಸಿರುವ ಪರಿಭಾಷೆಯಲ್ಲಿನ ಮಹತ್ವಪೂರ್ಣವಾದ ವ್ಯತ್ಯಾಸವನ್ನು ಗಮನಿಸಿರಿ: 8ನೇ ವಚನವು ಮೃಗ ನಾಶನಕ್ಕೆ *ಹೋಗುವದು* ಎಂದು ಬಯಲುಗೊಳಿಸುತ್ತದೆ - ಆದರೆ ಕರ್ತನು ಅಂತಿಮವಾಗಿ ಜಯದಲ್ಲಿ *ಬರುವನು*.

**ವಚನ 9.** 8ನೇ ವಚನದಲ್ಲಿ ಸಿಕ್ಕುವ ಬಣ್ಣನೆಯಲ್ಲಿ ದೇವದೂತನು ಬೇರೆ ಇನ್ನೇನು ಮಾಡಬೇಕೆಂದು ಉದ್ದೇಶಿಸಿದ್ದರೂ ಸರಿಯೇ, ಆತನು ಪರಿಣಾಮಕಾರಿಯಾಗಿ 17ನೇ ಅಧ್ಯಾಯದ ಮೃಗವನ್ನು 13ನೇ ಅಧ್ಯಾಯದಲ್ಲಿರುವ ಸಮುದ್ರದಿಂದ ಬಂದ ಮೃಗದೊಂದಿಗೆ

ಸಂಬಂಧಗೊಳಿಸುತ್ತಾನೆ (ನೋಡಿರಿ 13:3, 12, 14). ಬಳಿಕ ಆತನು ತನ್ನ ಸವಿಸ್ತಾರವಾದ ವಿವರಣೆಯನ್ನು ಮುಂದುವರೆಸುವದಕ್ಕೆ ಸಿದ್ಧನಾಗಿದ್ದನು. ಆತನು ವಿವರಣೆಗೆ ಮುನ್ನುಡಿಯಾಗಿ ಈ ಮಾತುಗಳನ್ನು ಹೇಳಿದನು **ಇದು ಬುದ್ಧಿವಂತನಿಗೆ ಮಾತ್ರ ಗೊತ್ತಾಗುವದು**. NIVಯಲ್ಲಿ "ಇದರಲ್ಲಿ ಜ್ಞಾನವುಳ್ಳ ಮನಸ್ಸು ಇರುವದು" ಎಂದಿದೆ. 13:18ರಲ್ಲಿ ಇದೇ ರೀತಿಯಾದ ಮಾತು ಇತ್ತು. ಮುಂದೆ ಪ್ರಾಮುಖ್ಯವಾದ ಸುಳಿವುಗಳು ತಿಳಿಸಲ್ಪಡಲಿದ್ದಾವೆ, ಅವುಗಳು ಬುದ್ಧಿವಂತರಿಂದ ಮಾತ್ರವೇ ಗ್ರಹಿಸಲ್ಪಡಬಹುದಾದ ಸುಳಿವುಗಳು ಎಂಬುದನ್ನು ಈ ವಾಕ್ಯವು ವಾಚಕನಿಗೆ ತಿಳಿಸುತ್ತದೆ. "ಮನಸ್ಸು ಗ್ರಹಿಕೆ ಹಾಗೂ ಅರ್ಥಮಾಡಿಕೊಳ್ಳುವ ಇಂದ್ರಿಯಗಳನ್ನು ಒಳಗೊಂಡಿರುತ್ತದೆ, ಅದು ಜ್ಞಾನವನ್ನು (ಸಂಗತಿಗಳಲ್ಲಿ ಅಡಗಿರುವ ಅರ್ಥಗಳನ್ನು ಕಂಡು ಹಿಡಿಯುವ ಸಾಮರ್ಥ್ಯ) ಕೂಡಿಸಿಕೊಳ್ಳುವಾಗ, ಯೋಹಾನನ ಪ್ರಕಟನೆಯೊಳಗೆ ಅಂತರ್ದೃಷ್ಟಿಗಳನ್ನು ಒದಗಿಸುತ್ತದೆ."[25]

ದೇವದೂತನ ವಿವರಣೆಯ ಮೊದಲ ಭಾಗವನ್ನು ಅರ್ಥಮಾಡಕೊಳ್ಳುವದಕ್ಕೆ ದೊಡ್ಡ ಜ್ಞಾನದ ಅಗತ್ಯವಿರುವದಿಲ್ಲ: [ಮೃಗದ] **ಆ ಏಳು ತಲೆಗಳು ಆ ಸ್ತ್ರೀ ಕೂತುಕೊಂಡಿರುವ ಏಳು ಬೆಟ್ಟಗಳೇ.** 13ನೇ ಅಧ್ಯಾಯದಲ್ಲಿ, ಮೃಗದ ಏಳು ತಲೆಗಳು ಒಂದು ಸಾಮಾನ್ಯ ವಿಧದಲ್ಲಿ ಆತನಿಗಿರುವ ವಿಫುಲವಾದ ಕುಟಿಲತೆ ಹಾಗೂ ಕುತಂತ್ರಗಾರಿಕೆಗಳನ್ನು ಸೂಚಿಸುವದಾಗಿತ್ತು. ಈ ಅಧ್ಯಾಯದಲ್ಲಿ, ದೇವದೂತನು ತಲೆಗಳಿಗೆ ಒಂದು ವಿಶೇಷವಾದ ಅರ್ಥವನ್ನು ಕೊಡುತ್ತಾನೆ "ಏಳು ತಲೆಗಳು ಆ ಏಳು ಬೆಟ್ಟಗಳೇ." 5ನೇ ವಚನದಲ್ಲಿ, ಯೋಹಾನನ ದಿನಗಳಲ್ಲಿದ್ದ ಸ್ತ್ರೀಯು ರೋಮ್ ನಗರಿಯೇ ಆಗಿದ್ದಳೆಂದು ತೀರ್ಮಾನಿಸಲಾಗಿತ್ತು, ಅದು "ಏಳು ಬೆಟ್ಟಗಳ ಮೇಲೆ ಕಟ್ಟಿದ ನಗರ" ಎಂದು ವಿಶ್ವ-ವಿಖ್ಯಾತಿ ಹೊಂದಿತ್ತು (5ನೇ ವಚನದ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನಗಳು 10, 11.** ದೇವದೂತನು ಅಷ್ಟಕ್ಕೇ ನಿಲ್ಲಿಸಿ ಬಿಟ್ಟಿದ್ದರೆ, ಬಾಬೆಲೆಂಬ ಮಹಾ ನಗರಿಯು ರೋಮ್ ನಗರವೇ ಆಗಿತ್ತು ಮತ್ತು ಅದು ನಿಶ್ಚಯವಾಗಿಯೂ ನಾಶನಕ್ಕೆ ಸಾಗಿತ್ತು ಎಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟಕರವಾಗುತ್ತಿತ್ತು. "ಆದರೆ," Mounceನು ಹೇಳಿದ ಪ್ರಕಾರ, "ಕಥೆಯು ಈಗ ಜಟಿಲಗೊಳ್ಳುತ್ತದೆ."[26] ಅಷ್ಟಕ್ಕೆ ನಿಲ್ಲಿಸುವದರ ಬದಲಾಗಿ, ದೇವದೂತನು ಏಳು ಬೆಟ್ಟಗಳ ವಿಷಯದಲ್ಲಿ ಇನ್ನಷ್ಟು ಹೆಚ್ಚಿನ ವಿವರಣೆಯನ್ನು ಕೊಡುತ್ತಾನೆ:

> **ಇದಲ್ಲದೆ ಅವು ಏಳು ಮಂದಿ ಅರಸುಗಳನ್ನು ಸೂಚಿಸುತ್ತವೆ; ಅವರಲ್ಲಿ ಐದು ಮಂದಿ ಬಿದ್ದುಹೋಗಿದ್ದಾರೆ, ಒಬ್ಬನು ಇದ್ದಾನೆ, ಮತ್ತೊಬ್ಬನು ಇನ್ನೂ ಬಂದಿಲ್ಲ. ಬಂದ ಮೇಲೆ ಅವನು ಸ್ವಲ್ಪಕಾಲ ಇರಬೇಕು. ಮೊದಲಿದ್ದು ಈಗ ಇಲ್ಲದಿರುವ ಆ ಮೃಗವು ತಾನೇ ಎಂಟನೆಯ ಅರಸು; ಅವನು ಆ ಏಳು ಮಂದಿ ಅರಸುಗಳಿಗೆ ಸೇರಿದವನು; ನಾಶಕ್ಕೆ ಹೋಗುವನು.**

ತಲೆಗಳಿಗೆ ಒಂದಕ್ಕಿಂತ ಅಧಿಕ ಅರ್ಥವು ಕೊಡಲ್ಪಟ್ಟಿದೆ ಎಂಬ ವಾಸ್ತವಾಂಶವು ನಮ್ಮನ್ನು ಗೊಂದಲ್ಲಕೀಡು ಮಾಡುವಂಥದ್ದಲ್ಲ. ಸಾಂಕೇತಿಕ ಭಾಷೆಯು ಒಂದು ದೃಷ್ಟಿಭ್ರಮೆಯಂತಿರಬಲ್ಲದು, ಅದು ಮೊದಲು ಒಂದು ರೀತಿಯಲ್ಲಿ ಕಾಣಿಸುತ್ತದೆ ಮತ್ತು ಬಳಿಕ, ಬೇರೊಂದು ಕೋನದಿಂದ ನೋಡುವಾಗ ಅದು ಬೇರೆ ಇನ್ನೊಂದು ರೀತಿಯಲ್ಲಿ ಕಾಣಿಸುವದಾಗಿದೆ. Henry Alfordನು ಹೇಳಿದ್ದೇನೆಂದರೆ ಸ್ತ್ರೀಯನ್ನು (ರೋಮ್ ನಗರ) ಸೂಚಿಸಿ ಹೇಳುವದಾದರೆ, ತಲೆಗಳು ಆಕೆಯು ಕೂತಿರುವ ಬೆಟ್ಟಗಳಾಗಿದ್ದವು; ಆದರೆ ಮೃಗಕ್ಕೆ (ರೋಮನ್ ಸಾಮ್ರಾಜ್ಯ) ಸಂಬಂಧಪಟ್ಟಂತೆ, ಅವುಗಳು ಅರಸುಗಳಾಗಿದ್ದವು.[27]

10ನೇ ವಚನವನ್ನು "ಪ್ರಕಟನೆ ಪುಸ್ತಕದಲ್ಲಿಯೇ ಅತ್ಯಂಥ ವಾಗ್ವಾದದ

ವಚನಗಳಲ್ಲೊಂದಾಗಿಸುವಂಥದ್ದು"[28] ಯಾವದು? ಮೊದಲನೆಯದಾಗಿ ಹೇಳುವದಾದರೆ, ಬಹಳಷ್ಟು ಜನರು 11ನೇ ವಚನದಲ್ಲಿರುವ ಮೃಗವು **ತಾನೇ ಎಂಟನೆಯ ಅರಸುಗಳಿಗೆ ಸೇರಿದವನು** ಎಂಬ ವಿವರಣೆಯಿಂದ ತಬ್ಬಿಬ್ಬುಗೊಳಿಸಲ್ಪಡುತ್ತಾರೆ. ಮೃಗಕ್ಕೆ ಏಳು ತಲೆಗಳನ್ನು ಹೊಂದಿ*ರುವದು*, ಮತ್ತು ಅದೇ ವೇಳೆಯಲ್ಲಿ ಒಂದು ತಲೆಯೂ *ಆಗಿರುವದು* ಹೇಗೆ ಸಾಧ್ಯ? "ಏಳು ಮಂದಿ ಅರಸುಗಳಿಗೆ ಸೇರಿದವನು" ಎಂಬ ಮಾತುಗಳ ವಿಷಯವಾಗಿ, Robertsನು ಬರೆದದ್ದೇನೆಂದರೆ ಪದಗುಚ್ಛವು "ಗ್ರೀಕ್ ಭಾಷೆಯಲ್ಲಿ ಜಟಿಲವಾಗಿರುತ್ತದೆ ಮತ್ತು 'ಏಳು ಮಂದಿಯಲ್ಲೊಬ್ಬನಿಗೆ ಸಮಾನವಾದನು' ಎಂದರ್ಥವನ್ನು ಹೊಂದಿರಬಹುದು."[29] Wilcockನು ಉಪವಾಕ್ಯದ ಅರ್ಥವು "ಅದೇ ವಿಧದ ಮತ್ತೊಬ್ಬನು"[30] ಎಂದರ್ಥವನ್ನು ಹೊಂದಿರಬಹುದೆಂದು ಯೋಚಿಸುತ್ತಾನೆ. ಈ ವೇದ ಪಂಡಿತರು ಹೇಳಿದ್ದು ಸರಿಯಾಗಿಯೇ ಇದ್ದರೂ, ಇದು ಜಟಿಲತೆಗಳನ್ನು ನೀಗಿಸುವದಿಲ್ಲ. "ಎಂಟನೆಯ" ತಲೆಯು ಯಾರು ಅಥವಾ ಏನು ಎಂಬುದು ಈಗಲೂ ಮುಂದೆ ಬರುವಂಥ ಮಾತುಗಳ ಅರ್ಥನಿರೂಪಣೆಯ ಮೇಲೆ ಅವಲಂಭಿತವಾಗಿರುತ್ತದೆ.

ವಚನದ ಕುರಿತಾದ ಪ್ರಮುಖ ವಾಗ್ವಾದವು ಏಳು (ಅಥವಾ ಎಂಟು) ಅರಸರನ್ನು ಗುರುತಿನ ವಿಷಯದಲ್ಲಿಯೇ ಆಗಿದೆ. ವಿವರವಾದ ಪರಿಭಾಷೆಯು - ಐದು ಅರಸರು ಬಿದ್ದು ಹೋಗಿದ್ದಾರೆ, ಒಬ್ಬನು ಇದ್ದಾನೆ, ಮತ್ತೊಬ್ಬನು ಇನ್ನೂ ಬಂದಿಲ್ಲ, ಜೊತೆಗೆ ಇನ್ನೂ ಒಬ್ಬನು ಇದ್ದಾನೆ - ಬಹುಪಾಲು ವ್ಯಾಖ್ಯಾನಕಾರರಿಗೆ ಬಿದ್ದಿರುವವರು ಯಾರು, ಯಾರು ಬರಲಿದ್ದಾನೆ, ಮತ್ತು ಇತ್ಯಾದಿಗಳನ್ನು *ಗುರುತಿಸುವದು* ಅವಶ್ಯಕವಾಗಿರುತ್ತದೆಂಬ ಮನವರಿಕೆಯನ್ನು ಹೊಂದಿದ್ದಾರೆ.

ಸ್ವತಃ ಮೃಗವೇ ವಿಶ್ವ ಸಾಮ್ರಾಜ್ಯಗಳ ಸಮ್ಮಿಶ್ರಣ ಆಗಿದ್ದನಾದ್ದರಿಂದ (13:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಕೆಲವರಿಗೆ ಮನವರಿಕೆಯಾಗಿರುವದೇನೆಂದರೆ ವಿಶ್ವವ್ಯಾಪಿ ಸಾಮ್ರಾಜ್ಯಗಳ ಪಟ್ಟಿಯನ್ನು ಮಾಡುವದು ಅಗತ್ಯವಿದೆ ಎಂಬುದೆ. ಪಟ್ಟಿಗಳು ವ್ಯತ್ಯಾಸವಾಗಿರಬಲ್ಲವು, ಆದರೆ ಈ ಅರ್ಥೈಸುವ ದಾರಿಯಲ್ಲಿ ಈ ಕೆಳಗಿನ ಪಟ್ಟಿಯು ವೈಶಿಷ್ಟ್ಯತೆಯನ್ನು ಹೊಂದಿದೆ:

*ಐದು ಮಂದಿ ಬಿದ್ದು ಹೋಗಿದ್ದರೆ:*

1. ಐಗುಪ್ತ (ಅಥವಾ ಹಳೇ ಬಾಬೆಲ್)
2. ಅಶ್ಶೂರ್ಯ
3. ಬಾಬೆಲ್
4. ಮೇದ್ಯೆಯ-ಪಾರಸಿ
5. ಗ್ರೀಸ್

*ಒಬ್ಬನು ಇದ್ದಾನೆ:*

6. ರೋಮ್ ನಗರ

*ಮತ್ತೊಬ್ಬನು ಇನ್ನೂ ಬಂದಿಲ್ಲ:*

7. ರೋಮನ್ ಸಾಮ್ರಾಜ್ಯವು Constantine ಚಕ್ರವರ್ತಿಯ ಮೂಲಕ "ಕ್ರೈಸ್ತ" ವಾಗಿ ಮಾರ್ಪಡಿಸಲ್ಪಟ್ಟಿತು (?)

*ಎಂಟನೆಯವನು:*

8. ಭವಿಷ್ಯದಲ್ಲಿ ಬರಲಿರುವ ಒಂದು ಕ್ರೈಸ್ತ-ವಿರೋಧಿ ಸರ್ಕಾರ (?)

ಈ ಅರ್ಥೈಸುವ ದಾರಿಯಲ್ಲಿರುವ ದುರ್ಬಲತೆಯು ಏನೆಂದರೆ ನಾವು "ಬರಲಿರುವ" ಸಾಮ್ರಾಜ್ಯದ ಮತ್ತು "ಏಳು ಮಂದಿ ಅರಸುಗಳಿಗೆ ಸೇರಿದವನಾದ" ಎಂಟನೆಯವನು ಯಾರು ಎಂಬ ಗುರುತನ್ನು ಕಂಡು ಹಿಡಿಯಲು ಊಹೆಗಳನ್ನು ಮಾಡಬೇಕಾಗುತ್ತದೆ. ಬರಲಿರುವವನ (7ನೇ ವ್ಯಕ್ತಿ) ವಿಷಯದಲ್ಲಿ, ಸಹಸ್ರವರ್ಷಪೂರ್ವಾಡಳಿತ ವಾದಿಗಳು ಅನೇಕ ಸಾರಿ ಮುಂದೆ ಭವಿಷ್ಯದ ಕಾಲವೊಂದರಲ್ಲಿ ಇರಲಿರುವ "ಪುನರುಜ್ಜೀವನಗೊಂಡ ರೋಮನ್ ಸಾಮ್ರಾಜ್ಯ" (ಅಥವಾ ಅದೇ ರೀತಿಯಲ್ಲಿರುವ ಪದವೊಂದನ್ನು) ಎಂಬ ಪದವನ್ನು ಬಳಕೆ ಮಾಡುತ್ತಾರೆ - ಇದು ಬೈಬಲಿನಲ್ಲಿ ಕಲಿಸಲ್ಪಡದಿರುವ ಭಾವನೆಯೊಂದಾಗಿದೆ.

ಹೆಚ್ಚು ಜನಪ್ರಿಯ ಅರ್ಥೈಸುವ ದಾರಿಯು ತಲೆಗಳು ರೋಮನ್ ಸಾಮ್ರಾಜ್ಯವನ್ನು ಪ್ರತಿನಿಧಿಸುವಂತೆ ಮಾಡುವದಾಗಿದೆ. "ಅರಸುಗಳು" (ವ. 10) ಎಂಬ ಪದವು ರೋಮನ್ ಚಕ್ರವರ್ತಿಗಳಿಗೆ ಸಾಮಾನ್ಯವಾಗಿ ಬಳಸಲಾಗುತ್ತಿದ್ದ ಬಿರುದು ಆಗಿತ್ತಿ (ನೋಡಿರಿ 1 ಪೇತ್ರ 2:17). ವಿಷಾದಕರವಾಗಿ, ಪ್ರಕಟನೆ ಪುಸ್ತಕವು ಬರೆಯಲ್ಪಡುವ ಸಮಯದಲ್ಲಿ, ಅಷ್ಟೊತ್ತಿಗಾಗಲೇ ಏಳು ಮಂದಿಗಿಂತಲೂ ಅಧಿಕ ಚಕ್ರವರ್ತಿಗಳು ಬಂದು ಹೋಗಿದ್ದರು (ನೋಡಿರಿ *ಪರಿಚಯ, ಸೂಚನೆಗಳು ಹಾಗೂ ಸಂಕೇತಗಳು, ಐತಿಹಾಸಿನ ಹಿನ್ನಲೆ*). ನಾವು ಯಾವ ಚಕ್ರವರ್ತಿಯಿಂದ ಆರಂಭಿಸಬೇಕು? ಯಾವ ಚಕ್ರವರ್ತಿಯು ಪಟ್ಟಿಯೊಳಗೆ ಮೊದಲನೆಯ ಸ್ಥಾನದಲ್ಲಿರಬೇಕು, ಮತ್ತು ಯಾರು ಕೊನೆಯಲ್ಲಿರಬೇಕು? ಈ ಅರ್ಥೈಸುವ ದಾರಿಯು ಅನೇಕ ಭಿನ್ನತೆಗಳನ್ನು ಹೊಂದಿದೆ, ಆದರೆ ಈ ಕೆಳಗಿನ ಪಟ್ಟಿಯು ವಿಶಿಷ್ಟವಾಗಿರುತ್ತದೆ:

*ಅವರಲ್ಲಿ ಐದು ಮಂದಿ ಬಿದ್ದು ಹೋಗಿದ್ದಾರೆ:*

1. Augustus (Octavius) (ಕ್ರಿ.ಪೂ. 27-ಕ್ರಿ.ಶ. 14)
2. Tiberius (ಕ್ರಿ.ಶ. 14-37)
3. Gaius Caligula (ಕ್ರಿ.ಶ. 37-41)
4. Claudius (ಕ್ರಿ.ಶ. 41-54)
5. Nero (ಕ್ರಿ.ಶ. 54-68)

*ಒಬ್ಬನು ಇದ್ದಾನೆ:*

6. Vespasian (ಕ್ರಿ.ಶ. 69-79)

*ಮತ್ತೊಬ್ಬನು ಇನ್ನೂ ಬಂದಿಲ್ಲ:*

7. Titus (ಕ್ರಿ.ಶ. 79-81)

*ಎಂಟನೆಯನು:*

8. Domitian (ಕ್ರಿ.ಶ. 81-96)

ಇದು ಹಲವಾರು ಬಲವಾದ ಅಂಶಗಳನ್ನು ಒಳಗೊಂಡಿದೆ. ವಾಕ್ಯಭಾಗದ ಪ್ರಕಾರವಾಗಿ, ಏಳನೆಯವನು ಕೇವಲ **ಸ್ವಲ್ಪ ಕಾಲ ಇರಬೇಕು**, ಮತ್ತು Titusನು ಕ್ಲುಪ್ತ ಕಾಲದ ವರೆಗೆ ಮಾತ್ರವೇ ಆಳ್ವಿಕೆಯನ್ನು ಮಾಡಿದನು. ಬೇರೊಂದು ಕಡೆಯಲ್ಲಿ ಮೃಗವು ಸಾಮ್ರಾಜ್ಯವನ್ನು ಮಾತ್ರವೆ ಪ್ರತಿನಿಧಿಸುವದಕ್ಕೆ ಸಾಧ್ಯವಿರಲಿಲ್ಲ, ಆದರೆ ಚಕ್ರವರ್ತಿಯನ್ನು ಸಹ ಪ್ರತಿನಿಧಿಸಬಹುದಾಗಿದೆ ಎಂಬುದನ್ನು ಒತ್ತಿ ಹೇಳಲಾಗಿತ್ತಾದ್ದರಿಂದ, ಮೃಗವು "ಏಳು ಅರಸುಗಳಿಗೆ ಸೇರಿದವನಾಗಿ" ಇದ್ದಾಗಲೂ ಎಂಟನೆಯ ಅರಸನು ಆಗಿರುವ ಸಾಧ್ಯತೆಯಿದೆ

ಎಂದು ಹೇಳಬಹುದು. ಸರಳವಾಗಿ ಹೇಳುವದಾದರೆ, ಮೃಗವು Domitianನನ್ನು ಪ್ರತಿನಿಧಿಸುತ್ತದೆ, ಆತನು ಆತನು ಮುಂಚಿನ ಏಳು ಚಕ್ರವರ್ತಿಗಳಂತೆಯೇ ಇರುವ ಚಕ್ರವರ್ತಿಯಾಗಿದ್ದನು.

ಈ ನಿರ್ದಿಷ್ಟವಾದ ಪಟ್ಟಿಯು ಬಲಹೀನತೆಗಳನ್ನು ಸಹ ಒಳಗೊಂಡಿರುತ್ತದೆ. ಮೊಟ್ಟಮೊದಲನೆಯದಾಗಿ, ಅದು ಸ್ವೇಚ್ಛಾನುಸಾರವಾಗಿ ಚಕ್ರವರ್ತಿಯಾದ Augustusನಿಂದ ಆರಂಭಿಸುತ್ತದೆ. ವೇದ ಪಂಡಿತರು Julius Caesarನು ನಿಜವಾಗಿಯೂ ಒಬ್ಬ ಚಕ್ರವರ್ತಿಯಾಗಿದ್ದನೋ ಅಥವಾ ಇಲ್ಲವೋ ಎಂಬ ವಿಚಾರದಲ್ಲಿ ವಾಗ್ವಾದವನ್ನು ಮಾಡುತ್ತಾರೆ. ಕೆಲವರು Julius Caesarನು ನಿಜವಾಗಿಯೂ ಮೊದಲ ಚಕ್ರವರ್ತಿಯಾಗಿದ್ದನು ಮತ್ತು ಪಟ್ಟಿಯು ಆತನಿಂದ ಆರಂಭವಾಗತಕ್ಕದ್ದು ಎಂದು ವಾದಿಸುತ್ತಾರೆ. ಈ ಪಟ್ಟಿಯು ignores Galba, Otho, ಮತ್ತು Vitellius ಎಂಬವರನ್ನು ಸಹ ನಿರ್ಲಕ್ಷ್ಯಿಸುತ್ತದೆ, ಅವರು ಕ್ರಿ.ಶ. 68-69ರ ನಡುವೆ ಒಬ್ಬರಾದ ಮೇಲೊಬ್ಬರಂತೆ ಬೇಗ ಬೇಗನೆ ಸಿಂಹಾಸನವನ್ನು ಏರಿದ್ದರು. ಕೆಲವು ಪ್ರಾಚೀನ ಲೇಖಕರು ಅವರನ್ನು ನಿಜವಾದ ಚಕ್ರವರ್ತಿಗಳೆಂದು ಪಟ್ಟಿ ಮಾಡಿದ್ದರು; ಇನ್ನು ಕೆಲವರು ಅವರನ್ನು ಅಧಿಕಾರವನ್ನು ಅನ್ಯಾಯವಾಗಿ ಸಿಂಹಾಸನವನ್ನು ಆಕ್ರಮಿಸಿಕೊಂಡವರು ಮತ್ತು ನಾಟಕವಾಡಿದವರು ಎಂಬಂತೆ ಪರಿಗಣಿಸಿದ್ದರು. ಅತ್ಯಂಥ ಮಹತ್ವಪೂರ್ಣವಾದ ಸಮಸ್ಯೆಯು ಏನೆಂದರೆ ಪಟ್ಟಿಯು ಪ್ರಕಟನೆ ಪುಸ್ತಕವು Vespasianನ ದಿನಗಳಲ್ಲಿ ಬರೆಯಲ್ಪಟ್ಟಿದ್ದಾಗಿ ಮುಂದಿಡುವಂತೆ ಕಾಣಿಸುತ್ತದೆ, ಹಾಗಿದ್ದರೂ ಪುಸ್ತಕವು ಆ ಆತನ ದಿನದಲ್ಲಿ ಬರೆಯಲ್ಪಟ್ಟಿತೆಂಬುದಕ್ಕೆ ಯಾವದೇ ಪುರಾವೆ ಇಲ್ಲ ಹಾಗೂ ಕೆಲವೊಂದು ಪುರಾವೆಗಳು ಸೂಚಿಸುವ ಪ್ರಕಾರ ಪುಸ್ತಕವು Domitianನ ಕಾಲದಲ್ಲಿ ಬರೆಯಲ್ಪಟ್ಟಿರುತ್ತದೆ (ನೋಡಿರಿ *ಪರಿಚಯ, ಹಿನ್ನಲೆಯ ಸಮಸ್ಯೆಗಳು, ದಿನಾಂಕ*). ಯೋಹಾನನನ್ನು ಪತ್ಮೋಸ್ ದ್ವೀಪದಲ್ಲೆ ಸೆರೆಯಾಳಾಗಿ ಗಡಿಪಾರು ಮಾಡಿದಂಥ ಹಾಗೂ ಅಂತಿಪನನ್ನು ರಕ್ತಸಾಕ್ಷಿಯಾಗಿ ಕೊಲ್ಲುವ ವಿಧದ ಹಿಂಸೆಯು Vespasianನ ಕಾಲದಲ್ಲಿ ಇತ್ತೆಂದು ನಂಬುವದಕ್ಕೆ ಯಾವದೇ ಕಾರಣವೂ ಇರುವದಿಲ್ಲ (1:9; 2:13).

ಕೆಲವು ಲೇಖಕರು ಪ್ರಕಟನೆ ಈ ಭಾಗವು Vespasianನ ದಿನಗಳಲ್ಲಿ ಬರೆಯಲ್ಪಟ್ಟಿತು ಹಾಗೂ ನಂತರ Domitianನ ದಿನಗಳಲ್ಲಿ ಪುಸ್ತಕದೊಳಗೆ ಸೇರ್ಪಡೆಗೊಳಿಸಲ್ಪಟ್ಟಿತೆಂದು ಹೇಳುವ ಮೂಲಕ ಈ ಸಮಸ್ಯೆಯಿಂದ ಕೈ ತೊಳೆದುಕೊಳ್ಳಲು ನೋಡುತ್ತಾರೆ, ಆದರೆ ಈ ಊಹಾಪೋಹಕ್ಕೆ ಯಾವದೇ ಪುರಾವೆಯೂ ಇರುವದಿಲ್ಲ. ಇನ್ನು ಕೆಲವರು Vespasianನು 6ನೇ ಸ್ಥಾನದಲ್ಲಿ ಬರದಂತಿರುವದಕ್ಕಾಗಿ ಪಟ್ಟಿಯನ್ನು ಬೇರೊಂದು ಕಡೆಯಿಂದ ಆರಂಭಿಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುತ್ತಾರೆ, ಆದರೆ ಇದು ಸಮಸ್ಯೆಯನ್ನು ಬಗೆಹರಿಸುವದಕ್ಕಿಂತ ಸಮಸ್ಯೆಯನ್ನು ಮತ್ತಷ್ಟು ಉಲ್ಬಣಗೊಳಿಸುತ್ತದೆ. Mounceನು ಗಮನಕ್ಕೆ ತರುವದೇನೆಂದರೆ, "ಒಬ್ಬನು ಏಳು ಅರಸುಗಳನ್ನು ರೋಮನ್ ಚಕ್ರವರ್ತಿಗಳೆಂದು ಲೆಕ್ಕಾಚಾರ ಮಾಡುವದಕ್ಕೆ ಯಾವ ವಿಧದಲ್ಲಿ ಪ್ರಯತ್ನಿಸಿದರೂ ಸರಿಯೇ, ಆತನು ಸಮಸ್ಯೆಗಳನ್ನು ಎದುರುಗೊಳ್ಳುವವನಾಗಿದ್ದು ಅದು ಇಡೀ ಅರ್ಥೈಸುವ ದಾರಿಯ ಮೇಲೆಯೇ ಸಂದೇಶವನ್ನುಂಟು ಮಾಡುತ್ತದೆ."[31]

ಏಳು/ಎಂಟು ತಲೆಗಳನ್ನು ಗುರುತಿಸುವದಕ್ಕೆ ಇನ್ನು ಕೆಲವರು ದಾರಿಗಳನ್ನು ಮುಂದಿಡಲಾಗಿರುತ್ತದೆ. ಒಂದು ದಾರಿಯೆಂದರೆ ತಲೆಗಳನ್ನು ಸರ್ಕಾರದ ವಿವಿಧ ರೂಪಗಳೆಂದು ಹೆಸರಿಡುವಿಕೆಯಾಗಿದೆ. ಏಳು ತಲೆಗಳಿಗೆ ನಿರ್ದಿಷ್ಟವಾದ ಗುರುತುಗಳನ್ನು ನೀಡುವದಕ್ಕೆ ಮಾಡಲಾಗುವ ಪ್ರತಿ ಪ್ರಯತ್ನವು ಅಂತರ್ಗತವಾದ ಸಮಸ್ಯೆಗಳನ್ನೊಳಗೊಂಡಿದೆ. ಈ

ಗೊಂದಲಕ್ಕೆ ಒಂದು ಸಾಧ್ಯವಿರುವ ಪರಿಹಾರವನ್ನು ಹತ್ತು ಕೊಂಬುಗಳ ಬಗ್ಗೆ ಕ್ಲುಪ್ತವಾಗಿ ಚರ್ಚೆಯನ್ನು ಮಾಡಿದ ಬಳಿಕ ಸೂಚಿಸಲಾಗುವದು.

**ವಚನಗಳು 12, 13.** ಮೃಗದ ತಲೆಯ ಕುರಿತು ಒಂದು ವಿಶೇಷವಾದ ಅರ್ಥನಿರೂಪಣೆಯನ್ನು ನೀಡಿದ ಬಳಿಕ, ದೇವದೂತನು ಆ ಜೀವಿಯ ಹತ್ತು ಕೊಂಬುಗಳ ಕಡೆಗೆ ಗಮನವನ್ನು ಹರಿಸುತ್ತಾನೆ. ಕೊಂಬುಗಳು ಸಾಮಾನ್ಯವಾಗಿ ಬಲವನ್ನು ಸೂಚಿಸುತ್ತವೆ, ಆದ್ದರಿಂದ ಹತ್ತು ಕೊಂಬುಗಳು ಮೃಗಕ್ಕೆ ದೊಡ್ಡ ಬಲವಿತ್ತೆಂಬುದನ್ನು ಸೂಚಿಸುತ್ತವೆ. ಈಗ ದೇವದೂತನು ಮೃಗದ ದೇಹರಚನೆಯಲ್ಲಿದ್ದ ಈ ಲಕ್ಷಣದ ಕುರಿತು ಒಂದು ಹೆಚ್ಚುವರಿ ಮಹತ್ವಪೂರ್ಣ ಅರ್ಥವನ್ನು ಕೊಡುತ್ತಾನೆ:

> **ನೀನು ಕಂಡ ಆ ಹತ್ತು ಕೊಂಬುಗಳು ಅಂದರೆ ರಾಜ್ಯವನ್ನು ಇನ್ನೂ ಹೊಂದದಿರುವ ಹತ್ತು ಮಂದಿ ಅರಸುಗಳು. ಅವರು ಒಂದು ಗಳಿಗೆಯವರೆಗೆ ರಾಜರಂತೆ ಆಳುವ ಅಧಿಕಾರವನ್ನು ಮೃಗದೊಂದಿಗೆ ಹೊಂದುತ್ತಾರೆ. ಅವರು ಒಂದೇ ಅಭಿಪ್ರಾಯವುಳ್ಳವರಾಗಿದ್ದು ತಮ್ಮ ಶಕ್ತಿಯನ್ನೂ ಅಧಿಕಾರವನ್ನೂ ಮೃಗಕ್ಕೆ ಕೊಡುತ್ತಾರೆ.**

12ನೇ ವಚನವನ್ನು ದಾನಿಯೇಲ 7:7, 20, 24 ವಚನಗಳೊಂದಿಗೆ ಹೋಲಿಸಿ ನೋಡಿರಿ. **ಒಂದು ಗಳಿಗೆ** ಎಂಬುದು ಬೇಗನೆ ಗತಿಸಿ ಹೋಗುವಂಥ ಕ್ಲುಪ್ತ ಕಾಲವನ್ನೇ ಸೂಚಿಸುತ್ತದೆ. ಈ ಪದಗುಚ್ಛವು 18ನೇ ಅಧ್ಯಾಯದಲ್ಲಿ ಮೂರು ಸಾರಿ ಕಾಣಿಸಿಕೊಳ್ಳುತ್ತದೆ. ಈ ಹತ್ತು **ಅರಸುಗಳು** ಬಹುಶಃ 2ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿರುವ "ಭೂರಾಜರು" ಆಗಿರಬಹುದು, ಇವರು ಮಹಾ ಜಾರಸ್ತ್ರೀಯಿಂದ ಮೋಹಕ್ಕೊಳಪಡಿಸಲ್ಪಟ್ಟಿದ್ದರು - ಇವರು ತಮ್ಮದೇ ಅಧಿಕಾರವನ್ನು ಹೊಂದಿರುವಂಥ ಆದರೆ ಆಳ್ವಿಕೆ ಮಾಡುವ ಅವರ ಹಕ್ಕನ್ನು ರೋಮನ್ ಸಾಮ್ರಾಜ್ಯದಿಂದ ಪಡೆದುಕೊಂಡಿದ್ದ ಉಪ-ಆಳ್ವಿಕೆಗಾರರು. ಈ ಅರ್ಥನಿರೂಪಣೆಯು ಸರಿಯಾಗಿರುವದಾದಲ್ಲಿ, ಇವರು ರೋಮನ್ ಸಾಮ್ರಾಜ್ಯಗಳಲ್ಲಿದ್ದ ದೇಶಾಧಿಪತಿಗಳು ಹಾಗೂ ಅರಸುಗಳು ಆಗಿರುವರೆಂದಾಗುತ್ತದೆ (ವ. 2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅವರು ರೋಮಿನ ಹಿಂದೆ ಬೆಂಬಲವಾಗಿ ನಿಂತರು ಯಾಕೆಂದರೆ ಅದು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಅವರಿಗೆ ಲಾಭವನ್ನುಂಟು ಮಾಡುವದಾಗಿತ್ತು (ನೋಡಿರಿ ವ. 17). Robertsನು "ಕ್ರೈಸ್ತರ ಹಿಂಸೆಯಲ್ಲಿ ಸ್ಥಳೀಯ ರಾಜರು ಹಾಗೂ ಅಧಿಕಾರಿಗಳು ನಿರ್ವಹಿಸಿದ ಪಾತ್ರದ"[32] ಬಗ್ಗೆ ಉಲ್ಲೇಖಿಸುತ್ತಾನೆ.

ವ್ಯಾಖ್ಯಾನಕಾರರು ಹತ್ತು ಅರಸರ ಕುರಿತಾದ ತಮ್ಮ ಅರ್ಥನಿರೂಪಣೆಗಳಲ್ಲಿ ಭಿನ್ನವಾಗಿರುತ್ತಾರೆ. ಕೆಲವರು ಇವರನ್ನು "ನಿರೋ ಮತ್ತೇ ಮರಳುವನು ಕಟ್ಟುಕಥೆ" ಯೊಂದಿಗೆ ಸಂಬಂಧಗೊಳಿಸುತ್ತಾರೆ ಹಾಗೂ ಹತ್ತು ಮಂದಿ ಅರಸನ್ನು ಪಾರ್ಥಿಯನ್ನರ ಪಾಳೆಗಾರರು (ಪ್ರಭುಗಳು) ಎಂದು ಗುರುತಿಸುತ್ತಾರೆ. ವಾಕ್ಯಭಾಗವು ಅವರು **ರಾಜ್ಯವನ್ನು ಇನ್ನೂ ಹೊಂದದಿರುವ**ವರು ಎಂದು ಹೇಳುತ್ತದಾದ್ದರಿಂದ, ಈ ಅರಸುಗಳು ಭವಿಷ್ಯವನ್ನು ಪ್ರತಿನಿಧಿಸುತ್ತಾರೆ, ಕ್ರೈಸ್ತತ್ವವನ್ನು ಹಗೆ ಮಾಡುವವರಾಗಿ ತಮ್ಮ ಶಕ್ತಿ ಹಾಗೂ ಅಧಿಕಾರವನ್ನು ಈ ಮೃಗಕ್ಕೆ ಕೊಡುವರು ಎಂದು ಕೆಲವರು ನಂಬುತ್ತಾರೆ. ಹೇಗೂ, ಈ ವಚನವನ್ನು ಯೋಹಾನನ ದಿನದ ಸನ್ನಿವೇಶಕ್ಕನುಗುಣವಾಗಿ ಅರ್ಥನಿರೂಪಣೆ ಮಾಡಿದರೆ ಉತ್ತಮವಾಗಿರುತ್ತದೆ. ಇನ್ನು ಕೆಲವರು **ಹತ್ತು** ಅಂಕೆಯು ಈ ಮುಂಚೆ ಪಟ್ಟಿ ಮಾಡಲಾಗಿರುವ ಏಳು ಮಂದಿ ಜೊತೆಗೆ ಇನ್ನೂ ಮೂವರು ಸೇರಿ ಆ ಸಂಖ್ಯೆಯಾಗಿರುತ್ತದೆಂದು ಸೂಚಿಸುತ್ತದೆ ಎಂಬುದಾಗಿ ಯೋಚಿಸುತ್ತಾರೆ, ಆ ಮೂವರು ಬಹುಶಃ ಕ್ರಿ.ಶ. 68-69ರ ಮಧ್ಯದಲ್ಲಿ

ಅಧಿಕಾರವನ್ನು ಅನ್ಯಾಯದಿಂದ “ಆಕ್ರಮಿಸಿಕೊಂಡವರು” ಆಗಿರಬಹುದು. ಈ ವಾಕ್ಯಭಾಗವು ಹತ್ತು ಮಂದಿ ಅರಸುಗಳಿಗೆ ಸ್ವಂತ ರಾಜ್ಯಗಳಿರಲಿಲ್ಲ ಎಂದು ಹೇಳಿದರೂ ಅವರು ಈ ಯೋಚನೆಯನ್ನು ಮುಂದಿಡುತ್ತಾರೆ. ಸಹಸ್ರವರ್ಷಪೂರ್ವಾಡಳಿತ ವಾದಿಗಳು ಈ ವಾಕ್ಯಭಾಗವನ್ನು ಅಕ್ಷರಶಃ ಅರ್ಥೈಸಿಕೊಳ್ಳುತ್ತಾರೆ ಮತ್ತು ಭವಿಷ್ಯದಲ್ಲಿ ಬರಲಿರುವ “ಹತ್ತು ರಾಜ್ಯಗಳ ಒಕ್ಕೂಟ” ಎಂಬುದಾಗಿ ಮಾತಾಡುತ್ತಾರೆ, ಕೆಲವು ಸಾರಿ ಯೂರೋಪಿಯನ್ ಕಾಮನ್ ಮಾರ್ಕೆಟ್ ಸೂಚಿಸಿ ಹೇಳುತ್ತಾರೆ. ಈ ಅರ್ಥನಿರೂಪಣೆಯು ಮೊದಲ ಶತಮಾನದ ವಾಚಕರಿಗೆ ಗ್ರಹಿಸುವದಕ್ಕಾಗದ್ದನ್ನಾಗಿ ಮಾಡುತ್ತದೆ ಹಾಗೂ ಅವರಿಗೆ ಯಾವದೇ ಆದರಣೆಯಿಲ್ಲದ್ದಾಗಿಸಿರುತ್ತಿತ್ತು.

ಹೇಗೂ, ಬಹಳಷ್ಟು ವ್ಯಾಖ್ಯಾನಕಾರರು “ಹತ್ತು” ಸಂಖ್ಯೆಯನ್ನು ಅಕ್ಷರಶಃವಾಗಿ ಅಲ್ಲ, ಆದರೆ ಸಾಂಕೇತಿಕವಾಗಿ ಅರ್ಥಮಾಡಿಕೊಳ್ಳಬೇಕು ಎಂದು ನಂಬುತ್ತಾರೆ. ಉದಾಹರಣೆಗೆ, Mounceನು ಹೀಗೆ ಬರೆಯುತ್ತಾನೆ, “ಹತ್ತು ಸಂಖ್ಯೆಯು ಸಾಂಕೇತಿಕವಾದದ್ದು ಮತ್ತು ಸಂಪೂರ್ಣತೆಯನ್ನು ಸೂಚಿಸುತ್ತದೆ. ಅದು ಹತ್ತು ನಿರ್ದಿಷ್ಟವಾದ ಅರಸುಗಳು ಅಥವಾ ಪುನರುಜ್ಜೀವನಗೊಳಿಸಲ್ಪಟ್ಟ ರೋಮನ್ ಸಾಮ್ರಾಜ್ಯದ ಹತ್ತು ಯೂರೋಪಿಯನ್ ರಾಜ್ಯಗಳನ್ನು ಸೂಚಿಸುವದಿಲ್ಲ.”[33]

ವಿಷಯವು ಹೀಗಿರುವದಾದರೆ, ನಾವು ಬೇರೆ ದಾರಿಯಿಲ್ಲದೆ ಈ ರೀತಿಯಾಗಿ ಯೋಚಿಸಬೇಕಾಗುತ್ತದೆ, “ಹಾಗಾದರೆ, ಅದೇ ವಾಕ್ಯಭಾಗದಲ್ಲಿರುವ ‘ಏಳು’ ಅಂಕೆಯನ್ನು ಅಕ್ಷರಶಃ ಭಾವಿಸಿಕೊಳ್ಳುವದು ಅವಶ್ಯವೆಂದು ಏಕೆ ಯೋಚಿಸುತ್ತೇವೆ?” ಅಂತೂ, ಪ್ರಕಟನೆ ಪುಸ್ತಕದಲ್ಲಿ ಹೆಚ್ಚುಕಡಿಮೆ ಒಂದಿಲ್ಲಾ ಒಂದು ರೀತಿಯಲ್ಲಿ ಎಲ್ಲವೂ “ಏಳು” ಸಂಖ್ಯೆಯೊಂದಿಗೆ ಜೋಡಿಸಲ್ಪಟ್ಟಿರುತ್ತದೆ. ಬಹುಶಃ ನಾವು ನಿರ್ದಿಷ್ಟವಾದ ಚಕ್ರವರ್ತಿಗಳನ್ನು ಅಥವಾ ಸಾಮ್ರಾಜ್ಯಗಳನ್ನು ಗುರುತಿಸ*ಬಾರದಾಗಿರುತ್ತದೆ*. ಬಹುಶಃ ಸಂದೇಶವು ೮ನೇ ವಚನದಲ್ಲಿರುವ ಸಂದೇಶದಂತೆಯೇ ಇರಬಹುದಾಗಿದೆ: ಅವುಗಳಲ್ಲಿ ಅನೇಕ ತಲೆಗಳು (ಒಂದರಿಂದ ಐದು ತಲೆಗಳ ವರೆಗೆ) ಮೊದಲು ಇದ್ದವು ಆದರೆ ಈಗ ಇಲ್ಲ ಎಂದಾಗಿರಬಹುದು. ಹೇಗೂ, ಹೇಳಿಕೆಯ ಅರ್ಥವು ಮೃಗವು (ಕ್ರೈಸ್ತ-ವಿರೋಧಿ ಸರ್ಕಾರವು) ಇನ್ನು ಅಸ್ತಿತ್ವದಲ್ಲಿಲ್ಲ ಎಂದಾಗಿರಲಿಲ್ಲ. ಅದು ಈಗಲೂ ಇತ್ತು (ಆರನೆಯ ತಲೆ) ಮತ್ತು ಕಟ್ಟಕಡೆಗೆ ಅದು ನಿತ್ಯವಾದ ನಾಶನಕ್ಕೆ ಹೋಗುವ ವರೆಗೂ ಮುಂದೆ ಸಹ ಇರುವದು (ಏಳು ಹಾಗೂ ಎಂಟನೆಯ ತಲೆಗಳು).

ಯೋಹಾನನು ನಿರ್ದಿಷ್ಟವಾದ ಚಕ್ರವರ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದಿರುವದಾದಲ್ಲಿ, ಅವರು ಯಾರು ಅಥವಾ ಏನು ಎಂಬುದರ ವಿಷಯದಲ್ಲಿ ನಾವು ಹೀಗೆಯೇ ಎಂದು ಮೊಂಡುವಾದವನ್ನು ಮಾಡುವದಕ್ಕಾಗುವದಿಲ್ಲ. ಸಾಮ್ರಾಜ್ಯಗಳ ವಿಷಯವಾಗಿ Morrisನು ಹೀಗೆ ಬರೆದನು, “ಎರಡು ಅಭಿಪ್ರಾಯಗಳಲ್ಲಿ ಯಾವದಾದರೂ ಸಾಧ್ಯವಿರುತ್ತದೆ, ಆದರೆ ನಾವು ಸಂಖ್ಯೆಗಳನ್ನು ಸಾಂಕೇತಿಕವಾಗಿ ಅರ್ಥೈಸಿಕೊಳ್ಳಬೇಕೆಂಬ ಅಭಿಪ್ರಾಯವೇ ಉತ್ತಮವಾಗಿರುತ್ತದೆ.”[34] Mounceನು ಇದರೊಂದಿಗೆ ಒಮ್ಮತವನ್ನು ವ್ಯಕ್ತಪಡಿಸುತ್ತಾನೆ: “ಬಹುಶಃ ಏಳು ಅರಸುಗಳ ಕುರಿತಾದ ಅತ್ಯಂಥ ತೃಪ್ತಿದಾಯಕ ವಿವರಣೆಯೆಂದರೆ ಏಳು ಅಂಕೆಯು ಪ್ರಾಥಮಿಕವಾಗಿ ಸಾಂಕೇತಿಕವಾಗಿದ್ದು ಐತಿಹಾಸಿಕ ಸಮಗ್ರವಾಗಿ ರೋಮನ್ ಸಾಮ್ರಾಜ್ಯದ ಶಕ್ತಿಯನ್ನು ಪ್ರತಿನಿಧಿಸುತ್ತದೆ.”[35] Morrisನು ಇದಕ್ಕೆ ಕೂಡಿಸಿ ಹೇಳಿದ್ದೇನೆಂದರೆ, ದೇವದೂತನು “[ಮೃಗದ ತಲೆಗಳ ಕುರಿತು] ನಾವು ಒಂದು ದೃಢವಾದ ಗುರುತು ಹಿಡಿಯುವದಕ್ಕೆ ಸಾಕಾಗುವಷ್ಟು ಮಾಹಿತಿಯನ್ನು ತಿಳಿಸುವದಿಲ್ಲ. ಆತನ ಆಸಕ್ತಿಯು ಮೃಗವು ಏನು ಮಾಡುತ್ತಾನೆಂಬುದರಲ್ಲಿ ಆಗಲಿ ಅಥವಾ ಆತನಿಗಿರುವ ಶಕ್ತಿಯಲ್ಲಾಗಲಿ ಆಗಿರಲಿಲ್ಲ,

ಆತನ ಆಸಕ್ತಿಯು ಈ ಮೃಗವೆಂಬಾತನು *ನಾಶಕ್ಕೆ ಹೋಗುವನು* ಎಂಬುದರಲ್ಲಿಯೇ ಆಗಿತ್ತು. ಹೀಗೆ ಅಂತಿಮವಾಗಿ ಸಕಲ ದುಷ್ಟತ್ವವು ನಾಶಗೊಳ್ಳುವದು."[36]

**ವಚನ 14.** ಪ್ರಕಟನೆ ಪುಸ್ತಕದ ಪ್ರಮುಖ ಚರ್ಚೆಯಾಂಶವು *ಜಯ* ಆಗಿರುತ್ತದೆ: ನಾವು ದೇವರೊಂದಿಗೆ ಉಳಿದುಕೊಳ್ಳುವದಾದರೆ, ನಮಗೆ ಜಯವಾಗುವದು. ಈ ಚರ್ಚೆಯಾಂಶವನ್ನು ಉತ್ತಮವಾಗಿ ವಿವರಿಸುವ ವಚನವು 17:14 ಎಂಬುದಾಗಿ ಕೆಲವರು ನಂಬುತ್ತಾರೆ: **ಅವರು** [ಅರಸುಗಳು] **ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವರು, ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವದರಿಂದ ಅವರನ್ನು ಜಯಿಸುವನು; ಮತ್ತು ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವ ಆತನ ಕಡೆಯವರು ಆ ಜಯದಲ್ಲಿ ಪಾಲುಗಾರರಾಗುವರು. ಜಯಿಸುವನು** ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದವು "ವಿಜಯ" ಎಂಬುದಕ್ಕಿರುವ ಪದವಾದ νίκη (*nikē*) ಎಂಬುದರ ಕ್ರಿಯಾಪದರೂಪವಾಗಿದೆ.

ವಿಜಯವು ಒಂದು ಚಿಕ್ಕ ಜಯವಲ್ಲ. ಕ್ರೈಸ್ತತ್ವದ ವೈರಿಗಳು ಅತ್ಯಂಥ ಸ್ಪಷ್ಟವಾಗಿ, ನರಪೀಡಕ ರೀತಿಯಲ್ಲಿ ವಿವರವಾಗಿ ಚಿತ್ರಿಸಲ್ಪಟ್ಟಿರುತ್ತಾರೆ. 12ನೇ ಅಧ್ಯಾಯವು ಘಟಸರ್ಪವನ್ನು ಪರಿಚಯಿಸಿದರೆ, 13ನೇ ಅಧ್ಯಾಯವು ಆತನ ಇಬ್ಬರು ಮಿತ್ರರಾದ ಎರಡು ಮೃಗಗಳ ಕುರಿತು ತಿಳಿಸುತ್ತದೆ. ಘಟಸರ್ಪನ ಮೂರನೆಯ ಮಿತ್ರನು 17ನೇ ಅಧ್ಯಾಯದಲ್ಲಿ ಪ್ರಕಾಶಮಾನವಾದ ಬಣ್ಣಗಳಲ್ಲಿ ಚಿತ್ರಿಸಲ್ಪಟ್ಟಿರುತ್ತದೆ: ಅದು ಮಹಾ ಜಾರಸ್ತ್ರೀಯಾದ ಬಾಬೆಲ್ - ಆ ದಿನದಲ್ಲಿ, ಅದು ರೋಮ್ ನಗರಿಯಾಗಿತ್ತು.

ಇಲ್ಲಿ ಪ್ರಸ್ತಾಪಿಸಲಾಗಿರುವ ಯುದ್ಧವು ಈ ಮುಂಚೆ ಚರ್ಚಿಸಿದ "ಯುದ್ಧ" ಆಗಿರಬಹುದಾಗಿದೆ (ನೋಡಿರಿ 16:16), ಆದರೆ 17:14ರ ಮೂಲ ವಾಕ್ಯದಲ್ಲಿರುವ ಪರಿಭಾಷೆಯು ಅಧಿಕವಾಗಿ 12:17ರಲ್ಲಿರುವಂತೆಯೇ ಇರುತ್ತದೆ. 14ನೇ ವಚನದಲ್ಲಿನ ಕದನವು ಬಹುಶಃ 12:17ರಲ್ಲಿ ಪ್ರಸ್ತಾಪಿಸಲ್ಪಟ್ಟ ಅದೇ ಕದನವೇ ಆಗಿರಬಹುದಾಗಿದೆ, ಆಗ ಹತಾಶೆಗೊಂಡ ಘಟಸರ್ಪನು "ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವವರ ಮೇಲೆ ಯುದ್ಧ ಮಾಡುವದಕ್ಕೆ ಹೊರಟನು." ಸರಳವಾಗಿ ಹೇಳುವದಾದರೆ, ಇದು ಒಳ್ಳೇದು ಹಾಗೂ ಕೆಟ್ಟದ್ದರ ನಡುವೆ ಮುಂದುವರೆಯುತ್ತಿರುವ ಯುದ್ಧವಾಗಿದೆ, ಇದು ನಮ್ಮಲ್ಲಿ ಒಬ್ಬೊಬ್ಬರೂ ತೊಡಗಿಸಿಕೊಂಡಿರುವಂಥ ಯುದ್ಧವಾಗಿದೆ. ಯಾವನಾದರೂ 17:14ನೇ ವಚನವು ಅವರು ಕುರಿಯಾದಾತನ ಮೇಲೆ ಯುದ್ಧ ಮಾಡುವರೇ ಹೊರತು ಆತನ ಹಿಂಬಾಲಕರ ವಿರುದ್ಧವಲ್ಲೆಂದು ಹೇಳುತ್ತದೆಂದು ಆಕ್ಷೇಪಣೆಯನ್ನು ಎತ್ತುವದಾದರೆ, ಸೈತಾನನು ಯಾವಾಗಲೂ ಕರ್ತನ ಶಿಷ್ಯರ ಮೇಲೆ ದಾಳಿ ಮಾಡುವ ಮೂಲಕವೇ ಕರ್ತನ ಮೇಲೆ ಆಕ್ರಮಣ ಮಾಡಿರುತ್ತಾನೆಂಬುದನ್ನು ನೆನಪಿಟ್ಟುಕೊಳ್ಳಬೇಕು (ಅಪೊಸ್ತಲರ ಕೃತ್ಯಗಳು 8:1; 9:5).

ವಾಕ್ಯಭಾಗವು **ಕುರಿಯಾದಾತನು ಅವರನ್ನು ಜಯಿಸುವನು** ಎಂದು ಹೇಳುವಾಗ, ನಮಗೆ 5ನೇ ವಚನದಲ್ಲಿ ಕುರಿಯಾದಾತನು ಪರಿಚಯಿಸಲ್ಪಟ್ಟಿದ್ದು ನೆನಪಾಗುತ್ತದೆ: "ಸಿಂಹಾಸನವೂ ... ಹಿರಿಯರು ಇದ್ದ ಸ್ಥಳಕ್ಕೂ ಮಧ್ಯದಲ್ಲಿ ಒಂದು ಕುರಿ *ಕೊಯ್ಯಲ್ಪಟ್ಟದ್ದಾಗಿ* ನಿಂತಿರುವದನ್ನು ಕಂಡೆನು" (5:6; ಒತ್ತಿ ಹೇಳಿದ್ದು ನನ್ನದು). ಪ್ರತಿಯಾಗಿ ಅದು ನಮಗೆ, 12ನೇ ಅಧ್ಯಾಯದಲ್ಲಿ ಸೈತಾನನೆಂಬ ಮಹಾ ಘಟಸರ್ಪನು ಸೋಲಿಸಲ್ಪಡುವದನ್ನು ಜ್ಞಾಪಕಪಡಿಸುತ್ತದೆ: "ಆಗ ಪರಲೋಕದಲ್ಲಿ ಮಹಾ ಶಬ್ದವನ್ನು ಕೇಳಿದೆನು, ಅದು - ... ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು ದೊಬ್ಬಲ್ಪಟ್ಟಿದ್ದಾನೆ. ಅವರು

ಪ್ರಾಣದ ಮೇಲಣ ಪ್ರೀತಿಯನ್ನು ತೊರೆದು ಮರಣಕ್ಕೆ ಹಿಂತೆಗೆಯದೆ *ಯಜ್ಞದ ಕುರಿಯಾದಾತನ ರಕ್ತದ* ಬಲದಿಂದಲೂ ತಮ್ಮ ವಾಕ್ಯದ ಬಲದಿಂದಲೂ ಅವನನ್ನು *ಜಯಿಸಿದರು*" (12:10, 11; ಒತ್ತಿ ಹೇಳಿದ್ದು ನನ್ನದು). ಹೆಚ್ಚುವರಿ ಕಾರಣಾಂಶಗಳು ಏನೇ ಭಾಗಿಯಾಗಿದ್ದರೂ ಸರಿಯೇ, ಅಂತಿಮವಾಗಿ ಜಯವು "ಯಜ್ಞದ ಕುರಿಯಾದಾತನ ರಕ್ತದಿಂದ"ಲೇ ಗಳಿಸಿಕೊಳ್ಳಲ್ಪಡುತ್ತದೆಂಬ ವಾಸ್ತವಾಂಶದ ಮೇಲಿನಿಂದ ನಮ್ಮ ದೃಷ್ಟಿಯನ್ನು ಎಂದಿಗೂ ಕಳೆದುಕೊಳ್ಳಬಾರದು." F. W. Farrarನು ಹೀಗೆ ಬರೆದನು:

> ... ಎಲ್ಲರಿಂದಲೂ ವಿರೋಧಿಸಲ್ಪಟ್ಟದ್ದಾಗಿ, ಕ್ರೈಸ್ತತ್ವವು ಜಯಿಸಿತು ... ಗ್ರೀಸರ ದೇವಾಲಯಗಳ ಮೇಲೆ ಸಮಾಧಿಗೂಡುಗಳು ಜಯಿಸಿದವು; ಅವಮಾನದ ಶಿಲುಬೆಯು ದ್ರಾಕ್ಷಾಪಾತ್ರೆ ಮತ್ತು ... ಔತಣದ ಮೇಲೆ ಜಯ ಹೊಂದಿತು ... ಲೋಕದ ಮೋಹಗೊಳಿಸುವ ಆದರ್ಶಗಳು ಮತ್ತು ಅಮಲೇರುವಂತೆ ಮಾಡುವ ಸಂತೋಷಗಳು, ಲೋಕದ ಮಂತ್ರಮುಗ್ಧಗೊಳಿಸುವ ಪುರಾಣಗಳು ಹಾಗೂ ನೀತಿಗೆಟ್ಟ ಧರ್ಮಗಳು ... ಎಲ್ಲವೂ ಮರದ ಶಿಲುಬೆಯ ಮುಂದೆ ನಿಲ್ಲದೆ ಓಡಿ ಹೋದವು! ಹೌದು, ನನ್ನ ಸಹೋದರರೇ, ಆ ಶಿಲುಬೆಯು ಲೋಕದ ನಿಜವಾದ ಅರಸನ ರಕ್ತ ಸುರಿಯುವ ಕೈಗಳಿಂದ ಹಿಡಿಯಲ್ಪಟ್ಟಿದ್ದೇ ಅದಕ್ಕೆ ಕಾರಣ, ಆತನು ತನ್ನ ಹಿಂಬಾಲಕರನ್ನು ಅವರ ದುರ್ಬಲತೆಯಲ್ಲಿ ಪರಿಪೂರ್ಣಗೊಳಿಸಿದವನು; ಮತ್ತು ಮೇಲಕ್ಕೆ ಎತ್ತಲ್ಪಟ್ಟವನಾಗಿ ಎಲ್ಲಾ ಮನುಷ್ಯರನ್ನು ತನ್ನ ಕಡೆಗೆ ಎಳೆದುಕೊಂಡನು.[37]

ಹೇಳಲ್ಪಟ್ಟಿರುವದೆಲ್ಲವೂ 14ನೇ ವಚನದಲ್ಲಿರುವ ಮುಖ್ಯ ಯೋಚನೆಗೆ ಸಂಬಂಧಿಸಿರುತ್ತದೆ: ಕುರಿಯಾದಾತನು **ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವದರಿಂದ** ಜಯಿಸುವನು. 19ನೇ ಅಧ್ಯಾಯದಲ್ಲಿ, ಯೇಸು ಕ್ರಿಸ್ತನು ಜಯಿಸುವದಕ್ಕೆ ಸವಾರಿ ಮಾಡುವಾಗ, ಈ ಹೆಸರು ಆತನ ನಿಲುವಂಗಿಯ ಮೇಲೆ ಮುದ್ರಿಸಲ್ಪಟ್ಟಿರುವದು: "ರಾಜಾಧಿರಾಜನೂ ಕರ್ತರ ಕರ್ತನೂ" (19:16). ಬೈಬಲಿನೊಳಗೆ ಬೇರೊಂದು ಕಡೆಯಲ್ಲಿ, ಈ ಪರಿಭಾಷೆಯು ದೇವರಿಗೆ ಅನ್ವಯಿಸಲ್ಪಟ್ಟಿರುತ್ತದೆ (ಧರ್ಮೋಪದೇಶಕಾಂಡ 10:17; ದಾನಿಯೇಲ 2:47; 1 ತಿಮೊಥೆ 6:15). ಪ್ರಕಟನೆ ಪುಸ್ತಕದಲ್ಲಿ ಇದು ಯೇಸುವಿಗೆ ಅನ್ವಯಿಸಲ್ಪಟ್ಟಿರುವದು ಆತನ ದೇವತ್ವವನ್ನು ದೃಢೀಕರಿಸುತ್ತದೆ.

ಕರ್ತನು ತನ್ನ ಜಯದಲ್ಲಿ ಒಬ್ಬನೇ ಇರುವದಿಲ್ಲ. **ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವ ಆತನ ಕಡೆಯವರು ಇರುವರು.** ಜಯದಲ್ಲಿ ನಾವು ಪಾಲ್ಗೊಳ್ಳುವದರ ಕುರಿತಾಗಿ ಈ ಮುಂಚೆ 12:11ರಲ್ಲಿ ಒತ್ತಿ ಹೇಳಲ್ಪಟ್ಟಿರುತ್ತದೆ. Morrisನು ಗಮನಕ್ಕೆ ತಂದದ್ದೇನೆಂದರೆ *"ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ"* ಆಗಿರುವವರು ಕರ್ತನ "ಪರಿಚರರು ಆಗಿದ್ದರೇ ಹೊರತು ಆತನ ಸಂಪನ್ಮೂಲಗಳಾಗಿರಲಿಲ್ಲ. ಅವರು ಯಾವದೇ ಸ್ವತಂತ್ರ ಸಹಾಯದ ಮೂಲವನ್ನು ಪ್ರತಿನಿಧಿಸುವದಿಲ್ಲ ಯಾಕೆಂದರೆ ಆತನಿಗೆ ಯಾವದೂ ಅಗತ್ಯವಿರುವದಿಲ್ಲ. ಖಂಡಿತವಾಗಿಯೂ, ಹೆಸರಿಸಲ್ಪಟ್ಟಿರುವ ಗುಣಗಳೇ ಅವರು ಆತನ ಮೇಲೆ ಅವಲಂಭಿತರಾದವರೆಂಬುದನ್ನು ತೋರಿಸುತ್ತದೆ. ಆದರೆ ಅವರು ಆತನ ಜಯದಲ್ಲಿ ಪಾಲುಗಾರರಾಗಿರುತ್ತಾರೆ."[38]

ಜಯದಲ್ಲಿ ಪಾಲುಗಾರರಾಗುವವರರನ್ನು ಬಣ್ಣಿಸುವದಕ್ಕೆ ಬಳಸಲಾಗಿರುವ ಪದಗಳು ಕರ್ತನು ನಮಗಾಗಿ ಏನು ಮಾಡಿದ್ದಾನೆ ಹಾಗೂ ನಾವು ಆತನಿಗೆ ಹೇಗೆ ಪ್ರತಿಕ್ರಿಯಿಸುತ್ತೇವೆ ಎಂಬ ಎರಡನ್ನೂ ಒತ್ತಿ ಹೇಳುತ್ತವೆ. ಮೊದಲನೆಯದಾಗಿ ನಾವು ದೇವರಿಂದ **ಕರೆದವರು**. ಭೂಮಿಯ ಮೇಲಿರುವ ವೇಳೆ, ಯೇಸುವು ತನ್ನ ಶಿಷ್ಯರನ್ನು "ನನ್ನ ಹಿಂದೆ ಬನ್ನಿರಿ" ಎಂಬ ಮಾತುಗಳಿಂದ ಕರೆದನು (ಮತ್ತಾಯ 4:19; 8:22; 9:9; 19:21). ಇಂದು, ನಾವು ಸುವಾರ್ತೆಯ

ಮೂಲಕವಾಗಿ ಕರೆಯಲ್ಪಡುತ್ತೇವೆ (2 ಥೆಸಲೋನಿಕ 2:14), ಆದರೆ ಸವಾಲು ಮಾತ್ರ ಅದೇ ರೀತಿಯೇ ಇರುತ್ತದೆ: "ಮತ್ತು ಯೇಸು ... ಹೇಳಿದ್ದೇನಂದರೆ - ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ" (ಮತ್ತಾಯ 16:24). ಕ್ರೈಸ್ತರನ್ನು ಪತ್ರಿಕೆಗಳಲ್ಲಿ "ಕರೆಯಲ್ಪಟ್ಟವರು" (ರೋಮಾ 1:6; 1 ಕೊರಿಂಥ 1:24; ಯೂದನು 1) ಎಂದು ಸೂಚಿಸುವಾಗ, ಆ ಪದವು ದೇವರ ಕರೆಗೆ ಅವರು *ಓಗೊಟ್ಟವರಾಗಿರುತ್ತಾರೆ* ಎಂಬ ಸೂಚ್ಯಾರ್ಥವನ್ನು ಹೊಂದಿರುತ್ತದೆ.

ನಾವು **ದೇವರಾದುಕೊಂಡವರು** (2 ಥೆಸಲೋನಿಕ 2:13; 2 ತಿಮೊಥೆ 2:10; ತೀತನಿಗೆ 1:1; 1 ಪೇತ್ರ 1:1). ಈ ವರ್ಣನಾತ್ಮಕ ಪದವು "ಕರೆಯಲ್ಪಟ್ಟವರು" ಎಂಬ ಪದಕ್ಕೆ ಸಂಬಂಧಪಟ್ಟಿರುತ್ತದೆ, ಆದರೆ ಅದು ಯೋಚನೆಯನ್ನು ಇನ್ನಷ್ಟು ಮುಂದಕ್ಕೆ ಕೊಂಡೊಯ್ಯುತ್ತದೆ. ದೇವರ ಆಮಂತ್ರಣವನ್ನು ತಿರಸ್ಕರಿಸುವವರ ಕುರಿತಾಗಿ ಮಾತಾಡುವ ವೇಳೆ, ಯೇಸುವು ಹೀಗೆ ಹೇಳಿದನು, "ಕರೆಯಲ್ಪಟ್ಟವರು ಬಹು ಜನ, ಆಯಲ್ಪಟ್ಟವರು ಸ್ವಲ್ಪ ಜನ" (ಮತ್ತಾಯ 22:14). "ಆಯಲ್ಪಟ್ಟವರು" ಎಂಬುದು ಸಹ ದೇವರ ಆಮಂತ್ರಣಕ್ಕೆ ಸಕಾರಾತ್ಮಕವಾದ ಪ್ರತಿಕ್ರಿಯೆ ತೋರುವದನ್ನು ಸೂಚಿಸುತ್ತದೆ, ಆದರೆ ಈ ಪದವು ನಾವು ದೇವರಿಂದ "ಆರಿಸಿಕೊಳ್ಳಲ್ಪಟ್ಟಿದ್ದೇವೆ" ಎಂಬ ಇನ್ನಷ್ಟು ಸೂಚ್ಯಾರ್ಥವನ್ನು ನೀಡುತ್ತದೆ - ನಾವು ಯಾರು ಅಥವಾ ಏನಾಗಿದ್ದೇವೆಂಬುದರ ಆಧಾರದಲ್ಲಿ ಅಲ್ಲ (1 ಕೊರಿಂಥ 1:27), ಆದರೆ ಆತನ ಸಹಾಯದಿಂದ ನಾವು *ಏನಾಗಿರಬಲ್ಲೆವು* ಎಂಬುದರ ಆಧಾರದಲ್ಲಿಯೇ (ಕೊಲೊಸ್ಸೆ 3:12-17).

ಕೊನೆಯ ಪದವು **ನಂಬಿಗಸ್ತರು.** ಮೊದಲ ಎರಡು ಪದಗಳು ದೇವರ ಮೇಲೆ ನೆಲೆ ಬೆಳಕನ್ನು ಇಡುತ್ತವೆ; ಇದು ನಮ್ಮ ಮೇಲೆ ನೆಲೆ ಬೆಳಕನ್ನು ಇಡುತ್ತದೆ. ಕರ್ತನು ನಮ್ಮನ್ನು ಕರೆಯುವ ಮೂಲಕ ಹಾಗೂ ನಮ್ಮನ್ನು ಆದುಕೊಳ್ಳುವ ಮೂಲಕ ನಮ್ಮಲ್ಲಿ ಭರವಸವನ್ನು ವ್ಯಕ್ತಪಡಿಸಿರುತ್ತಾನೆ; ಈಗ ನಾವು ಆತನಿಗೆ ಹಾಗೂ ಆತನ ಧ್ಯೇಯಕ್ಕೆ ನಂಬಿಗಸ್ತರಾಗಿ ಉಳಿಯುವ ಮೂಲಕ ಆತನ ವಿಶ್ವಾಸಕ್ಕೆ ಯೋಗ್ಯರಾಗಿರುತ್ತೇವೆಂಬುದನ್ನು ತೋರಿಸತಕ್ಕದ್ದು. "ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ" (1 ಕೊರಿಂಥ 4:2; KJV; ನೋಡಿರಿ ಮತ್ತಾಯ 25:21, 23). ಪ್ರತಿಯೊಬ್ಬ ಕ್ರೈಸ್ತನು ಪ್ರಕಟನೆ 2:10ನ್ನು ಕಂಠಪಾಠ ಮಾಡಿಕೊಳ್ಳಲು ಅರ್ಪಿಸಿಕೊಳ್ಳಬೇಕು: "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು."

## ದೇವರ ಉದ್ದೇಶ (17:15-18)

**15ಇನ್ನೂ ಆ ದೇವದೂತನು ನನಗೆ ಹೇಳಿದ್ದು - ಆ ಜಾರಸ್ತ್ರೀಯು ವಾಸಿಸಿರುವ ನೀರುಗಳನ್ನು
ಕಂಡಿಯಲ್ಲ? ಅವು ಪ್ರಜೆ ಸಮೂಹ ಜನ ಭಾಷೆಗಳನ್ನು ಸೂಚಿಸುತ್ತವೆ. 16ಇದಲ್ಲದೆ ಹತ್ತು
ಕೊಂಬುಗಳನ್ನೂ ಮೃಗವನ್ನೂ ಕಂಡಿಯಲ್ಲ? ಇವುಗಳಿಂದ ಸೂಚಿತರಾದವರು ಆ
ಜಾರಸ್ತ್ರೀಯನ್ನು ದ್ವೇಷಿಸಿ ಅವಳನ್ನು ಗತಿಗೆಟ್ಟವಳನ್ನಾಗಿಯೂ ಬಟ್ಟೆಯಿಲ್ಲದವಳನ್ನಾಗಿಯೂ
ಮಾಡಿ ಅವಳ ಮಾಂಸವನ್ನು ತಿಂದು ಅವಳನ್ನು ಬೆಂಕಿಯಿಂದ ಸುಟ್ಟುಬಿಡುವರು. 17ಯಾಕಂದರೆ
ಅವರು ದೇವರ ಅಭಿಪ್ರಾಯವನ್ನು ನೆರವೇರಿಸುವದಕ್ಕೂ ಒಂದೇ ಅಭಿಪ್ರಾಯವುಳ್ಳವರಾಗಿದ್ದು
ತಮ್ಮ ರಾಜ್ಯವನ್ನು ಮೃಗಕ್ಕೆ ಕೊಡುವದಕ್ಕೂ ದೇವರು ತನ್ನ ವಚನವು ನೆರವೇರುವ ತನಕ
ಅವರ ಹೃದಯಗಳನ್ನು ಪ್ರೇರಿಸಿದನು. 18ನೀನು ಕಂಡ ಆ ಸ್ತ್ರೀಯು ಭೂರಾಜರ ಮೇಲೆ ಅಧಿಕಾರ
ಹೊಂದಿರುವ ಮಹಾನಗರಿಯೇ.**

**ವಚನ 15.** ಈಗಾಗಲೇ ಗಮನಿಸಿರುವ ಹಾಗೆ, ಬಾಬೆಲಿನ ಪ್ರಭಾವವು ಬಹಳ ವ್ಯಾಪಕವಾಗಿತ್ತು. ದೇವದೂತನು ಹೀಗೆ ಹೇಳಿದನು, **ಆ ಜಾರಸ್ತ್ರೀಯು ವಾಸಿಸಿರುವ ನೀರುಗಳನ್ನು ಕಂಡಿಯಲ್ಲ? ಅವು ಪ್ರಜೆ ಸಮೂಹ ಜನ ಭಾಷೆಗಳನ್ನು ಸೂಚಿಸುತ್ತವೆ.** ಈ ಭಾಷೆಯು ಲೋಕದಲ್ಲಿರುವ ಸಕಲ ಜನರನ್ನು ಸೂಚಿಸುತ್ತದೆ.

> ಪ್ರಕಟನೆ ಪುಸ್ತಕವು ಬರೆಯಲ್ಪಡುವ ... ಕಾಲದ ವೇಳೆ, ರೋಮ್ ನಗರಿಯು ತನ್ನ ಶ್ರೇಷ್ಠತೆಯ ಉತ್ತುಂಗತೆಯಲ್ಲಿತ್ತು. ಆಕೆಯ ಎಲ್ಲೆಗಳು ಬ್ರಿಟಿಷ್ ದ್ವೀಪಗಳಿಂದ ಮೊದಲ್ಗೊಂಡು ಆಫ್ರಿಕಾದ ಮರುಭೂಮಿಗಳ ವರೆಗೆ, ಮತ್ತು ಅಟ್ಲಾಂಟಿಕ್ ಸಮುದ್ರದಿಂದ ಯೂಫ್ರೇಟೀಸ್ ಸಮುದ್ರದ ವರೆಗೂ ವಿಸ್ತರಿಸಿದ್ದವು ... ಆ ದಿನದ ಜನರಿಗಾದರೋ ರೋಮನ್ ಸಾಮ್ರಾಜ್ಯವೇ ಇಡೀ ಜಗತ್ತು ಎಂಬಂತೆ ಕಂಡಿತ್ತು.[39]

**ವಚನ 16.** ಹಾಗಿದ್ದರೂ, ಬಾಬೆಲ್ ಬಿದ್ದು ಹೋಗುವದು. ಆಕೆಯ ಬೀಳುವಿಕೆಗೆ ಕಾರಣವೊಂದನ್ನು ಈ ಮಾತುಗಳಲ್ಲಿ ಚಿತ್ರಿಸಲಾಗಿರುತ್ತದೆ: **ಇದಲ್ಲದೆ ಹತ್ತು ಕೊಂಬುಗಳನ್ನೂ ಮೃಗವನ್ನೂ ಕಂಡಿಯಲ್ಲ? ಇವುಗಳಿಂದ ಸೂಚಿತರಾದವರು ಆ ಜಾರಸ್ತ್ರೀಯನ್ನು ದ್ವೇಷಿಸಿ ಅವಳನ್ನು ಗತಿಗೆಟ್ಟವಳನ್ನಾಗಿಯೂ ಬಟ್ಟೆಯಿಲ್ಲದವಳನ್ನಾಗಿಯೂ ಮಾಡಿ ಅವಳ ಮಾಂಸವನ್ನು ತಿಂದು ಅವಳನ್ನು ಬೆಂಕಿಯಿಂದ ಸುಟ್ಟುಬಿಡುವರು.**

**ಹತ್ತು ಕೊಂಬುಗಳು** ಬಹುಶಃ ಜಾರಸ್ತ್ರೀಯಿಂದ ಮೋಹಕ್ಕೊಳಪಡಿಸಲ್ಪಟ್ಟಿದ್ದ ರಾಜರು ಆಗಿರಬಹುದು (17:2) ಮತ್ತು ಅವರು ತಮ್ಮ ನಿಷ್ಠೆಯನ್ನು ಮೃಗಕ್ಕೆ ತೋರಿಸಿದವರಾಗಿದ್ದರು (17:12, 13). ಕೆಲವರು ಈ ರಾಜರು 2ನೇ ವಚನದಲ್ಲಿರುವ ಅದೇ ರಾಜರೇ ಆಗಿರುವದಿಲ್ಲ, ಯಾಕೆಂದರೆ ಆ ರಾಜರು ರೋಮ್ ನಗರಿಯು ಬೀಳುವಾಗ ಅಳುವರು ಎಂಬುದಾಗಿ ಹೇಳಲಾಗಿರುತ್ತದೆ ಎಂದು ನಂಬುತ್ತಾರೆ (18:9, 10). ಹೇಗೂ, ಮನುಷ್ಯರು ಒಂದು ಕೃತ್ಯವನ್ನು ಮಾಡುವದು ಮತ್ತು ನಂತರ 2 ಕೊರಿಂಥ 7:10ನೇ ವಚನವು ಹೇಳುವಂತೆ "ಲೋಕದವರಿಗಿರುವಂಥ ದುಃಖ"ವನ್ನು ಅನುಭವಿಸುವದು ಅಸಹಜವಾದದ್ದೇನೂ ಆಗಿರುವದಿಲ್ಲ. ರಾಜರು ತಮಗೆ ಅರಿವಿಲ್ಲದೆಯೇ ಹಾಗೂ ತಿಳಿಯದೆಯೇ ತಮ್ಮ ಚಿತ್ತದ ಬದಲಾಗಿ ದೇವರ ಚಿತ್ತವನ್ನೇ ನೆರವೇರಿಸುತ್ತಿದ್ದಾರೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಬಾಬೆಲನ್ನು ಮೃಗದ ಮೇಲೆ ಕೂತಿರುವದಾಗಿ ಚಿತ್ರಿಸಲಾಗಿರುತ್ತದೆ (17:3), ಅರಸರು ಮೃಗ ಹಾಗೂ ಜಾರಸ್ತ್ರೀ ಇಬ್ಬರ ಮೇಲೆಯೂ ಅವಲಂಭಿತರಾಗಿದ್ದಾರೆ ಎಂಬುದನ್ನು ಒತ್ತಿ ಹೇಳುತ್ತದೆ.

16ನೇ ವಚನವು ಸಾಮಂತ ರಾಜರು ಹಾಗೂ ಮೃಗವು ಅಂತಿಮವಾಗಿ ಸ್ತ್ರೀಯ ವಿರುದ್ಧ ತಿರಿಗಿ ಬೀಳುವರೆಂಬ ಆಘಾತಕಾರಿ ಹೇಳಿಕೆಯನ್ನು ನೀಡುತ್ತದೆ: "ಅವರು ಮುಂಚೆ [ತೋರಿಸಿದ್ದ] ನಿಷ್ಠೆಯಂತೆಯೇ ಸೈತಾನೀಯವಾಗಿದ್ದ ಅಷ್ಟೇ ದ್ವೇಷದಿಂದ, ಅವರು ತಮ್ಮನ್ನು ಒಮ್ಮೆ ತನ್ನ ಮೋಹಕತೆಯಿಂದ ಆಕರ್ಷಿಸಿದ್ದ ಜಾರಸ್ತ್ರೀಯ ವಿರುದ್ಧ ತಿರಿಗಿ ಬೀಳುವರು [ಬಿದ್ದರು] ..."[40] ಅವರು **ಆ ಜಾರಸ್ತ್ರೀಯನ್ನು ದ್ವೇಷಿಸಿ ಅವಳನ್ನು ಗತಿಗೆಟ್ಟವಳನ್ನಾಗಿಯೂ ಬಟ್ಟೆಯಿಲ್ಲದವಳನ್ನಾಗಿಯೂ ಮಾಡಿ ಅವಳ ಮಾಂಸವನ್ನು ತಿಂದು ಅವಳನ್ನು ಬೆಂಕಿಯಿಂದ ಸುಟ್ಟುಬಿಡುವರು. ಬಟ್ಟೆಯಿಲ್ಲದವಳನ್ನಾಗಿ** ಮಾಡುವದು ಅವಮಾನಕರವಾದದ್ದು (ನೋಡಿರಿ ನಹೂಮ 3:5). ಹಳೆಯ ಒಡಂಬಡಿಕೆಯಲ್ಲಿ, **ಮಾಂಸವನ್ನು** ತಿನ್ನುವದು ಒಬ್ಬ ದುಷ್ಟ ವೈರಿಯ ಕೃತ್ಯವಾಗಿತ್ತು (ಕೀರ್ತನೆ 27:2; ಮೀಕ 3:3). ಅಲ್ಲದೆ ಹಳೆಯ ಒಡಂಬಡಿಕೆಯಲ್ಲಿ, ಒಬ್ಬ ವ್ಯಕ್ತಿಯನ್ನು **ಬೆಂಕಿಯಿಂದ ಸುಟ್ಟು** ಬಿಡುವದು ಅತ್ಯಂಥ ಹೇಯಕರವಾದ ಪಾಪಗಳಲ್ಲೊಂದಕ್ಕಾಗಿ ನೀಡುವ ದಂಡನೆಯಾಗಿರುತ್ತಿತ್ತು (ಯಾಜಕಕಾಂಡ 20:14; 21:9). ಈ ವಚನವನ್ನು ಯೆಹೆಜ್ಕೇಲ

23:1–35ರಲ್ಲಿ ಯೆಹೆಜ್ಕೇಲನು ನೀಡುವ ಕಣ್ಣಿಗೆಕಟ್ಟಿದಂಥ ಸಾಂಕೇತಿಕ ನಿರೂಪಣೆಯೊಂದಿಗೆ ಹೋಲಿಸಿ ನೋಡಿರಿ. ನಮ್ಮ ಮುಂದಿರುವ ಈ ಪ್ರಸ್ತುತ ವಾಕ್ಯವನ್ನು ಸೈತಾನನು "ತನಗೆ ವಿರೋಧವಾಗಿ ಎದ್ದು ತನ್ನಲ್ಲಿ ಭೇದ ಹುಟ್ಟಿಸಿಕೊಂಡ"ದ್ದಕ್ಕೆ (ನೋಡಿರಿ ಮಾರ್ಕ 3:23–26) ಉದಾಹರಣೆಯಾಗಿ ಯೋಚಿಸಬಹುದು.

16ನೇ ವಚನದಿಂದ ದ್ವೇಷದ ಉರಿಯು ಭಗ್ಗನೆ ಹೊತ್ತಿಕೊಳ್ಳುತ್ತದೆ. ರಾಜರು ಹಾಗೂ ಮೃಗಕ್ಕೆ ತಮ್ಮ ಮಾಜಿ ಪ್ರೇಯಸಿಯನ್ನು ಕೇವಲ ಕೊಲ್ಲುವದರಲ್ಲಿ ತೃಪ್ತಿಯಿರಲಿಲ್ಲ. ಅವರ ಬಯಕೆಯು ಅವಳನ್ನು ಹೊಲೆಗೆಡಿಸುವದಾಗಿತ್ತು. ಅವರಿಗೆ ಸಂಪೂರ್ಣ ನಾಶನ ಮಾಡುವದರಿಂದಲೇ ಹೊರತು ಬೇರೆ ಯಾವದರಿಂದಲೂ ತೃಪ್ತರಾಗುತ್ತಿರಲಿಲ್ಲ. ಇದು ಮನಃಸೆಳೆಯುವಂಥ ರಕ್ತಪಾತದ ದೃಶ್ಯವಾಗಿರುತ್ತದೆ. ಇದು ಒಂದು ನಗರದ ನಾಶನವನ್ನು ಬಣ್ಣಿಸುತ್ತದಾದರೂ, ಬಳಸಲ್ಪಟ್ಟಿರುವ ಮಾತುಗಳು ಒಬ್ಬ ಮಾನವ ಜೀವಿಯ ನಾಶನವನ್ನು ಚಿತ್ರಿಸುತ್ತವೆ: ಆಕೆಯ ಮಾದಕ ಉಡುಪುಗಳ ಬಿಚ್ಚಲ್ಪಡುತ್ತವೆ; ಆಕೆಯ ದೇಹವು ನರಭಕ್ಷ್ಯಕ್ಕೊಳಗಾಗುತ್ತದೆ; ಆಕೆಯು ಜ್ವಾಲೆಗಳಲ್ಲಿ ಧಹಿಸಲ್ಪಡುತ್ತಾಳೆ. ಇದೊಂದು ಭಯಾನಕ ದೃಶ್ಯವಾಗಿರುತ್ತದೆ. ಈ ಘೋರವಾದ ಮಾತುಗಳ ಬಳಕೆಗೆ ಇರುವ ಕಾರಣಗಳಲ್ಲೊಂದೆಂದರೆ ನಮ್ಮ ಗತಿಯು ಶೋಧನೆ ಮಾಡುವ ವ್ಯಕ್ತಿಗಾದ ಗತಿಯಂತೆಯೇ ಇರದ ಹಾಗೆ, ನಾವು ಮೋಹದ ಶೋಧನೆಗಳಿಗೆ ಒಳಗಾಗಬಾರದೆಂದು ನಮ್ಮನ್ನು ಎಚ್ಚರಿಸುವದಕ್ಕಾಗಿಯೇ ಆಗಿದೆ.

16ನೇ ವಚನವು ರೋಮ್ ನಗರಿಯಿಂದ ಪ್ರತಿಯೊಂದು ಸಂಪನ್ಮೂಲಗಳು ಕಸಿದುಕೊಳ್ಳಲ್ಪಡುವವು, ಆಗ ಆಕೆಯು ಧಹಿಸಲ್ಪಡುವಳು, ಮತ್ತು ಅಂತಿಮವಾಗಿ ಆಕೆಯು ನಾಶಗೊಳಿಸಲ್ಪಡುವಳು. ಕಣ್ಣಿಗೆ ಕಟ್ಟಿದಂತೆ ವಿವರಿಸುವ ಪದಗಳು ನಗರದ ನಾಶನವನ್ನು ಬಣ್ಣಿಸುವ 18ನೇ ಅಧ್ಯಾಯಕ್ಕೆ ಮುನ್ನೋಟವಾಗಿರುತ್ತವೆ.

17ನೇ ಅಧ್ಯಾಯದ 1ನೇ ವಚನದಲ್ಲಿ ದೇವದೂತನು ಯೋಹಾನನಿಗೆ "ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು" ತೋರಿಸುವನೆಂದು ಹೇಳಿದ್ದನು. ಅದು *ಹೇಗೆ* ಸಂಭವಿಸುವದೆಂಬುದಕ್ಕೆ 16ನೇ ವಚನವು ಅಪೊಸ್ತಲನಿಗೆ ಒಂದು ಮುನ್ನೋಟವನ್ನು ನೀಡುತ್ತದೆ: ಅಂತಿಮವಾಗಿ, ಆಕೆಯ ಮಿತ್ರರು ಆಕೆಯ ವಿರುದ್ಧವಾಗಿ ತಿರಿಗಿ ಬೀಳುವರು.

> ರೋಮಿನ ಪ್ರಮುಖ ದುರ್ಬಲತೆಯು ಏನಾಗಿತ್ತದೆಂದರೆ ವೈವಿಧ್ಯತೆಯುಳ್ಳ ಜನರನ್ನು ಒಂದಾಗಿ ಕೂಡಿಸುವದಕ್ಕಿದ್ದ ಅಸಮರ್ಥತೆಯೇ. ರೋಮನ್ ಸಾಮ್ರಾಜ್ಯವು ಶಕ್ತಿಯಿಂದ ಗೆದ್ದು ನಿಯಂತ್ರಣ ಮಾಡುವದಕ್ಕೆ ಶಕ್ತವಾಗಿತ್ತು, ಆದರೆ ಗೆದ್ದುಕೊಂಡವರನ್ನು ಒಂದು ಸಮಾನಜಾತೀಯ ಸಾಮ್ರಾಜ್ಯವನ್ನಾಗಿ ಗಟ್ಟಿಯಾಗಿ ಒಗ್ಗೂಡಿಸುವ ಶಕ್ತಿಯು ಅದಕ್ಕೆ ಇರಲಿಲ್ಲ. ಈ ದುರ್ಬಲತೆಯು ನೆಬೂಕದ್ನೆಚ್ಚರನ ಕನಸಿನಲ್ಲಿ ತೋರ್ಪಡಿಸಲ್ಪಟ್ಟಿತ್ತು, ಆತನು ಬರಲಿದ್ದ ನಾಲ್ಕನೆಯ ದೊಡ್ಡ ಸಾಮ್ರಾಜ್ಯವಾದ ರೋಮನ್ ಸಾಮ್ರಾಜ್ಯವನ್ನು ಕಂಡಾಗ, ಅದು ಈ ರೀತಿಯಾಗಿತ್ತು, "ಕಾಲ್ಬೆರಳುಗಳ ಒಂದಂಶವು ಕಬ್ಬಿಣ ಒಂದಂಶವು ಮಣ್ಣು ಆಗಿದ್ದ ಹಾಗೆ ಆ ರಾಜ್ಯದ ಒಂದಂಶವು ಗಟ್ಟಿ ಒಂದಂಶವು ಬೆಂಡು ... ಕಬ್ಬಿಣವು ಮಣ್ಣಿನೊಂದಿಗೆ ಹೇಗೆ ಕಲೆಯುವದಿಲ್ಲವೋ ಹಾಗೆ ಅವು ಒಂದಕ್ಕೊಂದು ಅಂಟಿಕೊಳ್ಳುವದಿಲ್ಲ" [ದಾನಿಯೇಲ 2:42, 43; ASV].[41]

ರಾಜರು ಮೃಗಕ್ಕೆ ಮತ್ತು ಜಾರಸ್ತ್ರೀಗೆ ತೋರಿದ್ದ ನಿಷ್ಠೆಯು ನಿಜವಾದ ಮಮತೆಯಿಂದಾಗಿ ಆಗಿರಲಿಲ್ಲ, ಆದರೆ ಸ್ವಾರ್ಥ-ಹಿತಾಸಕ್ತಿಗಳಿಂದ ಪ್ರೇರಣೆಗೊಂಡದ್ದಾಗಿತ್ತು ಎಂಬುದನ್ನು ಈ ಮುಂಚೆ ಒತ್ತಿ ಹೇಳಲಾಗಿರುತ್ತದೆ. ಆ ರೀತಿಯಾದ ರಾಜಕೀಯ ನೆಂಟಸ್ತಿಕೆಗಳು ಬಹಳ ಸರ್ವಸಾಧಾರಣವಾಗಿರುತ್ತವೆ. ಅಂಥ ಸಂಬಂಧಗಳು ಆರಂಭದಿಂದಲೇ ಚಂಚಲವಾಗಿರುತ್ತವೆ,

ಮತ್ತು ಮೈತ್ರಿಗಳೆಂದು ಹೇಳಿಕೊಳ್ಳುವಂಥವರು ಸಾಮಾನ್ಯವಾಗಿ ಒಬ್ಬರೊಬ್ಬರು ನಾಶಮಾಡಿಕೊಳ್ಳುವವರಾಗಿ ಮಾರ್ಪಡುತ್ತಾರೆ.

16ನೇ ವಚನದ ಚಿತ್ರಣದ ವಿಷಯವಾಗಿ, ಅನೇಕ ಲೇಖಕರು ಇದನ್ನು ಅಕ್ಷರಶಃ ಅರ್ಥನಿರೂಪಣೆ ಮಾಡುತ್ತಾರೆ. ಕೆಲವರು ರೋಮ್ ನಗರ ಬಹಳಷ್ಟು ಭಾಗವನ್ನು ಸುಟ್ಟವನೆಂದು ಆರೋಪಿಸಲ್ಪಡುವ ನಿರೋ ಚಕ್ರವರ್ತಿಯನ್ನು ಉಲ್ಲೇಖಿಸುತ್ತಾರೆ. ಇನ್ನು ಕೆಲವರು 400ರ ದಶಕಗಳಲ್ಲಿ ನಗರದ ಮೇಲೆ ದಾಳಿ ಮಾಡಿದ ಬರ್ಬರರ ದಂಡುಗಳನ್ನು ಉಲ್ಲೇಖಿಸುತ್ತಾರೆ. Sweteನು ಹೀಗೆ ಬರೆದನು, "[*ರೋಮನ್ ಸಾಮ್ರಾಜ್ಯದ*] *ಅವನತಿ ಹಾಗೂ ಬೀಳುವಿಕೆ*ಯು ಕುರಿತು ಓದುವ ಯಾವನಿಗೂ ಸಂತ. ಯೋಹಾನನ ಪ್ರವಾದನೆಯನ್ನು ದೃಷ್ಟಾಂತಪಡಿಸುವ ಹಾಗೂ ಸಮರ್ಥಿಸುವ ಸಾಮಾನ್ಯ ವಿಷಯದ ಕುರಿತ ಸಾಮಗ್ರಿಗೆ ಕೊರತೆಯೇನೂ ಇರುವದಿಲ್ಲ."[42] ವಚನವನ್ನು ಅಕ್ಷರಶಃ ಅರ್ಥೈಸಿಕೊಂಡರೂ ಸರಿಯೇ ಅಥವಾ ಅರ್ಥೈಸಿಕೊಳ್ಳದಿದ್ದರೂ ಸರಿಯೇ, ರೋಮಿನ ಪಾಪಗಳಿಗಾಗಿ ಶೀಘ್ರವೇ ಆಕೆಗೆ ದಂಡನೆಯಾಗುವದು ಖಚಿತವಾಗಿತ್ತು. ಅನಾಗರಿಕ ದಂಡುಗಳು ಬಾಹ್ಯದಿಂದ ದಾಳಿ ಮಾಡುವದಕ್ಕೆ ಬಹಳ ಕಾಲದ ಮುಂಚೆಯೇ ರೋಮನ್ ಸಾಮ್ರಾಜ್ಯವು ಆಂತರೀಕವಾಗಿ ಕುಸಿದು ಹೋಗಿತ್ತು. ಆಕೆಯು ಮಿತ್ರರೆಂದು ಭರವಸವಿಟ್ಟಿದ್ದವರ ಮೇಲೆ ಅವಲಂಭಿತಳಾಗುವದಕ್ಕೆ ಶಕ್ತಳಾಗುವದಿಲ್ಲ.

ಪ್ರತಿಯೊಂದು ಪಾಪವು ತನ್ನ ಸ್ವನಾಶನದ ಬೀಜವನ್ನು ತನ್ನೊಳಗೆ ಹೊಂದಿರುತ್ತದೆ. ಈ ತತ್ವವು 16ನೇ ವಚನದಿಂದ ದೃಷ್ಟಾಂತಪಡಿಸಲ್ಪಟ್ಟಿರುತ್ತದೆ. ಅಂಥ್ಯದಲ್ಲಿ, ದುಷ್ಟತನವು ತನ್ನಿಂದ ತಾನೇ ನಾಶಗೊಳ್ಳುತ್ತದೆ. ದಾವೀದನು ಹೀಗೆ ಬರೆದನು, "ಕೆಟ್ಟ ನಡತೆಯುಳ್ಳವರನ್ನು ನೋಡಿ ಉರಿಗೊಳ್ಳಬೇಡ ... ಅವರು ಹುಲ್ಲಿನಂತೆ ಬೇಗ ಒಣಗಿ ಹೋಗುವರು" (ಕೀರ್ತನೆ 37:1, 2). ನಮಗೆ ಈ ದೃಷ್ಟಿಕೋನವು ಕೊಡಲ್ಪಡುವಾಗ, ಕೆಟ್ಟತನವು ಇನ್ನು ಪ್ರಬಲವಾದದ್ದಾಗಿ ಕಂಡು ಬರುವದಿಲ್ಲ.

**ವಚನ 17.** ಇದು ಪ್ರಕಟನೆ ಪುಸ್ತಕದಲ್ಲಿಯೇ ಅತ್ಯಂಥ ವಿಚಾರ ಪ್ರಚೋದಕ ವಚನಗಳಲ್ಲೊಂದಾಗಿದೆ. ದೇವದೂತನು ಹೀಗೆ ಹೇಳಿದನು, **ಯಾಕಂದರೆ ಅವರು ದೇವರ ಅಭಿಪ್ರಾಯವನ್ನು ನೆರವೇರಿಸುವದಕ್ಕೂ ಒಂದೇ ಅಭಿಪ್ರಾಯವುಳ್ಳವರಾಗಿದ್ದು ತಮ್ಮ ರಾಜ್ಯವನ್ನು ಮೃಗಕ್ಕೆ ಕೊಡುವದಕ್ಕೂ ದೇವರು ತನ್ನ ವಚನವು ನೆರವೇರುವ ತನಕ ಅವರ ಹೃದಯಗಳನ್ನು ಪ್ರೇರಿಸಿದನು. ದೇವರ ವಚನ** ಎಂಬ ಪದಗುಚ್ಛವು ವಾಕ್ಯದಲ್ಲಿರುವ ಯಾವದೇ ವಾಗ್ದಾನ ಅಥವಾ ಮುಂತಿಳಿಸುವಿಕೆಗೆ ಅನ್ವಯಿಸಲ್ಪಡಬಹುದಾಗಿದೆ, ಆದರೆ ಇದು ಪ್ರಕಟನೆ ಪುಸ್ತಕದಲ್ಲಿ "ದೇವರ ವಚನ"ಕ್ಕೆ ಒಂದು ವಿಶೇಷವಾದ ಅನ್ವಯಿಕೆಯನ್ನು ಹೊಂದಿದೆ. ಈ ಮುಂಚೆ, ಹತ್ತು ರಾಜರು "ಒಂದೇ ಅಭಿಪ್ರಾಯವುಳ್ಳವರಾಗಿ" ಇದ್ದರು ಹಾಗೂ "ತಮ್ಮ ಶಕ್ತಿಯನ್ನೂ ಅಧಿಕಾರವನ್ನೂ ಮೃಗಕ್ಕೆ ಕೊಟ್ಟರು" ಎಂದು ಹೇಳಲಾಗಿರುತ್ತದೆ (17:13). ಈಗ, 17ನೇ ವಚನವು *ತನ್ನ* ಉದ್ದೇಶವು ಕಾರ್ಯರೂಪಕ್ಕೆ ಬರುವಂತೆಯೂ *ತನ್ನ* ವಚನವು ನೆರವೇರುವಂತಾಗುವ ಹಾಗೆಯೂ ದೇವರು **ಅವರ ಹೃದಯಗಳನ್ನು ಪ್ರೇರಿಸಿದನು** ಎಂದು ನಮಗೆ ಹೇಳುತ್ತದೆ. ದೇವರ ವೈರಿಗಳು "ಮನಸ್ಸಿಲ್ಲದೆಯೂ ತಮಗೆ ತಿಳಿಯದೆಯೂ,"[43] ಮಾಡಿದ ಎಲ್ಲವೂ ಅಂತಿಮವಾಗಿ ಆತನ ಧ್ಯೇಯವನ್ನು ಬೆಂಬಲಿಸುವದಾಗಿತ್ತು.

ಈ ಭಾವನೆಯು ಆಶ್ಚರ್ಯಕರವಾಗಿದೆ. ರಾಜರು ಮೃಗದೊಂದಿಗೆ ಹೊಂದಿದ್ದ ನೆಂಟಸ್ತಿಕೆಯು ಕ್ರೈಸ್ತತ್ವಕ್ಕೆ ಹಾನಿಕರವಾಗಿ ತೋರುವದು, ಆದರೆ ಈ ನೆಂಟಸ್ತಿಕೆಯು ರಾಜರು ಹಾಗೂ ಮೃಗವು ಬಾಬೆಲಿಗೆ ಹಿಂದಿರುಗಿ ಬಂದು ಆಕೆಯನ್ನು ನಾಶಗೊಳಿಸುವದಕ್ಕೆ ದಾರಿಯನ್ನು

ಮಾಡಿಕೊಟ್ಟಿತೆಂದು 17ನೇ ವಚನವು ಹೇಳುತ್ತದೆ. ದೇವರು ಹೇಗೆ ಇದನ್ನು ರಾಜರ ಹೃದಯಗಳನ್ನು ಪ್ರೇರಿಸಿದನೆಂಬುದನ್ನು, ಅಥವಾ ದೇವರು ಹೇಗೆ ಅವರನ್ನು ನಿಯಂತ್ರಣದಲ್ಲಿಟ್ಟುಕೊಂಡನು ಎಂಬುದನ್ನು ನಮಗೆ ವಿವರಿಸುವದಕ್ಕೆ ಸಾಧ್ಯವಿಲ್ಲ. ಹೇಗೂ, ಆತನು ಹಾಗೆ ಮಾಡಿದನೆಂಬುದನ್ನು ನಾವು ನಂಬಿಕೆಯಿಂದ ಅಂಗೀಕರಿಸಿಕೊಳ್ಳಬಹುದಾಗಿದೆ. ಬೈಬಲಿನಲ್ಲಿ ತನ್ನ ವಿರುದ್ಧ ತಮ್ಮ ಸಂಪನ್ಮೂಲಗಳನ್ನೆಲ್ಲಾ ನಿಲ್ಲಿಸಿದ್ದ ದೇಶಗಳನ್ನು ಸಹ ದೇವರು ನಿಯಂತ್ರಿಸಿದ್ದನೆಂಬುದನ್ನು ತೋರಿಸುವ ದೃಷ್ಟಾಂತಗಳು ಹೇರಳವಾಗಿ ತುಂಬಿರುತ್ತವೆ (ನೋಡಿರಿ ಯೆಶಾಯ 10:5-7). Haileyನು ಹೀಗೆ ಹೇಳಿದನು,

> ದೇವರು "ತನ್ನ ಮನಸ್ಸಿನಲ್ಲಿರುವದನ್ನು ಮಾಡುವಂತೆ ಅವರ ಹೃದಯಗಳನ್ನು ಪ್ರೇರಿಸಿದ್ದು" ಹೇಗೆಂಬುದನ್ನು ಕೇಳುವದು ನಿರರ್ಥಕವಾದದ್ದೇ; ಅದು ಆತನಿಗೆ ಮಾತ್ರವೇ ಗೊತ್ತಿರುತ್ತದೆ. ಇತಿಹಾಸದುದ್ದಕ್ಕೂ ದೇವರು ತನ್ನ ಉದ್ದೇಶಗಳನ್ನು ನೆರವೇರಿಸುವಂತೆ ವ್ಯಕ್ತಿಗಳನ್ನು ಹಾಗೂ ದೇಶಗಳನ್ನೂ ಬಳಸಿಕೊಂಡನು ಎಂಬುದನ್ನು ಶಾಸ್ತ್ರವು ಸ್ಪಷ್ಟವಾಗಿ ತೋರ್ಪಡಿಸುತ್ತದೆ. ಆತನು ಒಂದು ದೇಶವನ್ನು ತನ್ನೊಳಗೆ ಕಾದಾಟ ನಡಿಸುವಂತೆ ಮಾರ್ಪಡಿಸುವನು, ಅದನ್ನು ಗಿದ್ಯೋನನ ದಿನಗಳಲ್ಲಿ ಮಿದ್ಯಾನ್ಯರೊಳಗೆ (ನ್ಯಾಯಸ್ಥಾಪಕರು 7:22), ಮತ್ತು ಸೌಲನ ದಿನಗಲ್ಲಿ ಫಿಲಿಷ್ಟಿಯರೊಳಗೆ (1 ಸಮುವೇಲ 14:20) ಸಂಭವಿಸಿದ್ದನ್ನು ಕಾಣುತ್ತೇವೆ. ಸೇಯೀರ್ ಪರ್ವತದ ಎದುರಿನಲ್ಲಿ ನಡೆದ ಯುದ್ಧದಲ್ಲಿ, ದೇವರು ಯೆಹೂದದಸೈನ್ಯವು ಒಂದು ಕತ್ತಿಯನ್ನು ಸಹ ಎತ್ತುವ ಅವಶ್ಯಕತೆಯು ಉಂಟಾಗದಂತೆ ಅರಸನಾದ ಯೆಹೋಷಾಫಾಟನಿಗೆ ಜಯವನ್ನು ಅನುಗ್ರಹಿಸಿದನು (2 ಪೂರ್ವಕಾಲವೃತ್ತಾಂತ 20:23).[44]

ಪ್ರವಾದಿಯಾದ ದಾನಿಯೇಲನು "ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ"ರುವನು ಎಂದು ಹೇಳಿದನು (ದಾನಿಯೇಲ 4:17). ಆ ಸತ್ಯವು ಪ್ರಕಟನೆ ಪುಸ್ತಕದಲ್ಲಿ ಪದೇ ಪದೇ ಎತ್ತಿ ತೋರಿಸಲ್ಪಟ್ಟಿರುತ್ತದೆ - ಆದರೆ ಅದನ್ನು 17ನೇ ವಚನವು ಹೇಳುವಷ್ಟು ಸ್ಪಷ್ಟವಾಗಿ ಬೇರೆ ಯಾವ ವಾಕ್ಯಭಾಗವೂ ತಿಳಿಸುವದಿಲ್ಲ.

**ವಚನ 18. ನೀನು ಕಂಡ ಆ ಸ್ತ್ರೀಯು ಭೂರಾಜರ ಮೇಲೆ ಅಧಿಕಾರ ಹೊಂದಿರುವ ಮಹಾನಗರಿಯೇ.** (ವ. 5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ.)

## ಅನ್ವಯಿಸುವಿಕೆ

### ಮೋಹಕತೆಗೊಳಪಡಿಸುವ ದುಷ್ಟತನ (ಅಧ್ಯಾಯ 17)

17ನೇ ಅಧ್ಯಾಯದ ಕ್ಲಿಷ್ಟಕರ ಸಂಗತಿಗಳ ಮೇಲೆ ಮುಖ್ಯ ಗಮನವನ್ನು ಕೊಡುವದರ ಬದಲಾಗಿ, ಯಾವದು ಸ್ಪಷ್ಟ ಹಾಗೂ ನಿಚ್ಚಳವಾಗಿ ಇರುತ್ತದೋ ಅದನ್ನು ಒತ್ತಿ ಹೇಳತಕ್ಕದ್ದು. 17ನೇ ಅಧ್ಯಾಯದಲ್ಲಿ ಕಲಿಸಲ್ಪಟ್ಟದ್ದಾಗಿ ಸ್ಪಷ್ಟವಾಗಿರುವ ಪಾಠಗಳೊಳಗೆ ಇವುಗಳು ಸೇರಿರುತ್ತವೆ: (1) ಕೆಟ್ಟದ್ದು ಮನಃಸೆಳೆಯುಂತೆ ಕಾಣಿಸಬಹುದು, ಆದರೆ ಅದು ವಿನಾಶ ತರುತ್ತದೆ. (2) ಕೆಟ್ಟದ್ದು ಸಮ್ಮೋಹಕವಾಗಿ ಕಾಣಿಸಬಹುದು, ಆದರೆ ಅದಕ್ಕೆ ಎಡೆಗೊಡದಿರುವದಕ್ಕೆ ಸಾಧ್ಯವಿದೆ. (3) ಕೆಟ್ಟದ್ದು ಅನೇಕ ಸಾರಿ ಅಪರಾಜಿತವಾಗಿ ಕಾಣಿಸುತ್ತದೆ, ಆದರೆ ಅಂತಿಮವಾಗಿ ಅದು ಪತನಗೊಳ್ಳುವದು.

ಈ ಪಾಠಗಳಲ್ಲಿ ಒಂದೊಂದನ್ನು ಕುರಿತು ಆಲೋಚಿಸೋಣ:

1. *ಕೆಟ್ಟದ್ದು ಮನಃಸೆಳೆಯುವಂತೆ ಕಾಣಿಸಬಹುದು, ಆದರೆ ಅದು ವಿನಾಶ ತರುತ್ತದೆ.* ಮೋಹಕ್ಕೆ ಸಿಲುಕದಂತೆ ತಪ್ಪಿಸಿಕೊಳ್ಳಲು, ಶೋಧನೆಯು ಮೋಡಿಗೆ ಒಳಪಡಿಸುವಂಥದ್ದು,

ಪಾಪವು ಆನಂದಕರವಾಗಿರಬಲ್ಲದು, ಮತ್ತು ನಿಷೇಧಿಸಲ್ಪಟ್ಟಿರುವಂಥದ್ದು ಆಕರ್ಷಕವಾಗಿರಬಲ್ಲದು ಎಂಬುದನ್ನು ಮೊದಲು ನಾವು ಅರ್ಥಮಾಡಿಕೊಳ್ಳತಕ್ಕದ್ದು. 17:6ರಲ್ಲಿ "ಅತ್ಯಾಶ್ಚರ್ಯಪಟ್ಟೆನು" (NASB) ಎಂಬುದನ್ನು ಅನುವಾದಿಸಿರುವ ಪದವು 13:3ರಲ್ಲಿ "ಆಶ್ಚರ್ಯಪಟ್ಟ" ಜನರನ್ನು ಬಣ್ಣಿಸುವದಕ್ಕೆ ಬಳಸಲ್ಪಟ್ಟಿದೆ. ಅಪೊಸ್ತಲನು ಭೋಗಲಾಲಸೆಯುಳ್ಳ ಬಾಬೆಲನ್ನು ನೋಡಿದಾಗ "ಸಂಪೂರ್ಣ ಆಶ್ಚರ್ಯಪಟ್ಟವನು" (17:6; NLT) ಆಗಿದ್ದಲ್ಲಿ, ನಾವು ಬೆರಗುಗೊಳ್ಳುವದನ್ನು ಎದುರು ನೋಡತಕ್ಕದ್ದು. ಆಕೆಯು "ಕದ್ದ ನೀರು ಸಿಹಿಯಾಗಿದೆ, ಗುಟ್ಟಾಗಿ ತಿನ್ನುವ ತಿಂಡಿಯು ರುಚಿಯಾಗಿದೆ" (ಜ್ಞಾನೋಕ್ತಿ 9:17) ಎಂದು ಗೊಣಗುವಾಗ, ನಾವು ಸಂಕೋಚಪಡುವ ಧೈರ್ಯವನ್ನು ಮಾಡಕೂಡದು. ಯೋಸೇಫನು ಬಹಳ ಕಾಲದ ಹಿಂದೆ ಮಾಡಿದ ರೀತಿಯಲ್ಲಿಯೇ (ಆದಿಕಾಂಡ 39:12), ನಾವು "ಓಡಿ ಹೋಗ"ತಕ್ಕದ್ದು (2 ತಿಮೊಥೆ 2:22). ಮೋಹಕ್ಕೊಳಪಡಿಸುವದವರಿಂದ ತಪ್ಪಿಸಿಕೊಳ್ಳಲು, ನಾವು ಮೇಲ್ಭಾಗದ ಕೆಳಗಡೆ, ಹೊಳಪಿನ ಕೆಳಗಿರುವ ವಾಸ್ತವಿಕತೆಯನ್ನು ನೋಡುವಂಥ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.

2. *ಕೆಟ್ಟದ್ದು ಸಮ್ಮೋಹಕವಾಗಿ ಕಾಣಿಸಬಹುದು, ಆದರೆ ಅದಕ್ಕೆ ಎಡೆಗೊಡ ದಿರುವದಕ್ಕೆ ಸಾಧ್ಯವಿದೆ.* ಪುನಃ, ಜಾರಸ್ತ್ರೀಯು ರೋಮನ್ ಸಾಮ್ರಾಜ್ಯಕ್ಕಿಂತಲೂ ಅಧಿಕವಾದದ್ದನ್ನು ಪ್ರತಿನಿಧಿಸುತ್ತಾಳೆ ಎಂದು ಹೇಳುತ್ತೇವೆ; ಆಕೆಯು ನಮಗೆ ಎದುರಾಗುವ ಯಾವದೇ ಶೋಧನೆಯನ್ನು ಪ್ರತಿನಿಧಿಸುವವಳು. ಈ ಶೋಧನೆಗಳ ಮೋಹಕ್ಕೊಳಗಾಗುವದರಿಂದ ತಪ್ಪಿಸಿಕೊಳ್ಳಬೇಕಾದರೆ, ನಾವು ಅವುಗಳನ್ನು ನಿಜವಾಗಿಯೂ ಇರುವಂಥ ರೀತಿಯಲ್ಲಿಯೇ ಕಾಣತಕ್ಕದ್ದು. ಜಾರಸ್ತ್ರೀಯು ನಿಷೇಧಿಸಲ್ಪಟ್ಟಿರುವ ಆನಂದಗಳನ್ನು ವಾಗ್ದಾನ ಮಾಡುತ್ತಾಳೆ, ಆದರೆ "ಅವಳ ಹೆಜ್ಜೆಗಳು ಪಾತಾಳದ ದಾರಿಯನ್ನು ಹಿಡಿಯುವವು" (ಜ್ಞಾನೋಕ್ತಿ 5:5). ವಿವೇಚಿಸುವ ಕಣ್ಣು ಮೋಹಕ ಲಾವಣ್ಯ ಹಾಗೂ ಒಳ್ಳೇತನಗಳು, ಕ್ಷಣಿಕ ಹಾಗೂ ಶಾಶ್ವತವಾದ್ದರ ನಡುವಿನ ವ್ಯತ್ಯಾಸವನ್ನು ಗುರುತಿಸುವದಕ್ಕೆ ಕಲಿತುಕೊಳ್ಳುವದು. ಇದು ಸ್ಪಷ್ಟವಾಗಿ ಬಿಟ್ಟರೆ, ಶೋಧನೆಗಳು ಆಕರ್ಷಕವಾಗಿ ಕಾಣಿಸುವದಿಲ್ಲ, ಆದರೆ ಹೇವರಿಕೆ ಹುಟ್ಟಿಸುವಂಥವುಗಳಾಗುತ್ತವೆ.

3. *ಕೆಟ್ಟದ್ದು ಅನೇಕ ಸಾರಿ ಅಪರಾಜಿತವಾಗಿ ಕಾಣಿಸುತ್ತದೆ, ಆದರೆ ಅಂತಿಮವಾಗಿ ಅದು ಪತನಗೊಳ್ಳುವದು.* ಮೂರನೆಯ ಪಾಠವು ಈ ವಾಕ್ಯಭಾಗದ ಪ್ರಮುಖ ಸಂದೇಶವಾಗಿರುತ್ತದೆ. ಚರ್ಚೆಯಾಂಶದ ವಾಕ್ಯಕ್ಕೆ ಹಿಂದಿರುಗಿರಿ: "ಮಹಾ ಜಾರಸ್ತ್ರೀಗೆ ಬರುವ ದಂಡನೆಯನ್ನು ನಿನಗೆ ತೋರಿಸುತ್ತೇನೆ" (ವ. 1). ಈ ಅಧ್ಯಾಯವು ಜಾರಸ್ತ್ರೀ ಹಾಗೂ ಮೃಗ ಇಬ್ಬರಿಗೂ ಆಗುವ ನ್ಯಾಯತೀರ್ಪನ್ನು ಒತ್ತಿ ಹೇಳುತ್ತದೆ. ನಾವು 17ನೇ ಅಧ್ಯಾಯದಲ್ಲಿರುವ ಎಲ್ಲದರ ಬಗ್ಗೆಯೂ ಖಚಿತವಾಗಿರದೆ ಹೋಗಬಹುದು, ಆದರೆ ನಾವು ಇದರ ಕುರಿತು ಮಾತ್ರ ಭರವಸೆಯಿಂದಿರಬಹುದಾಗಿದೆ: ಅಂತ್ಯದಲ್ಲಿ, ದೇವರು ಕೆಟ್ಟತನವನ್ನು ದಂಡಿಸುವನು.

ಇಂದು ಜೀವಿಸುತ್ತಿರುವ ಕ್ರೈಸ್ತರಿಗಾದರೋ, ದರ್ಶನವು "ಪಾಪಭೋಗಗಳು" "ಸ್ವಲ್ಪ ಕಾಲ" ಮಾತ್ರವೇ ಎಂಬುದನ್ನು (ಇಬ್ರಿಯ 11:25) ಮತ್ತು, ಅಂತ್ಯದಲ್ಲಿ ಮರಣವನ್ನುಂಟು ಮಾಡುತ್ತದೆ (ರೋಮಾ 6:23) ಎಂಬುದನ್ನು ಘೋಷಿಸುತ್ತದೆ. ಹೀಗಿರುವದರಿಂದ ಅಪೊಸ್ತಲನಾದ ಯೋಹಾನನು ದೇವರ ಪ್ರತಿಯೊಬ್ಬ ದೇವರ ಮಗುವಿಗೆ ಹೀಗೆ ಬೇಡಿಕೊಳ್ಳುತ್ತಾನೆ,

> ಲೋಕವನ್ನಾಗಲಿ ಲೋಕದಲ್ಲಿರುವವುಗಳನ್ನಾಗಲಿ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ. ಲೋಕದಲ್ಲಿರುವ ಶರೀರದಾಶೆ ಕಣ್ಣಿನಾಶೆ ಬದುಕುಬಾಳಿನ ಡಂಬ ಈ ಮೊದಲಾದವುಗಳೆಲ್ಲವು ತಂದೆಯಿಂದ

ಹುಟ್ಟದೆ ಲೋಕದಿಂದ ಹುಟ್ಟಿದವುಗಳಾಗಿವೆ. ಲೋಕವೂ ಅದರ ಆಶೆಯೂ *ಗತಿಸಿ ಹೋಗುತ್ತವೆ*; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು (1 ಯೋಹಾನ 2:15-17; ಒತ್ತಿ ಹೇಳಿದ್ದು ನನ್ನದು).

## ಜಾರಸ್ತ್ರೀ vs ಮದಲಗಿತ್ತಿ (ಅಧ್ಯಾಯ 17)

17ನೇ ಅಧ್ಯಾಯದ ಜಾರಸ್ತ್ರೀಯನ್ನು 19 ಮತ್ತು 21ನೇ ಅಧ್ಯಾಯಗಳಲ್ಲಿನ ಮದಲಗಿತ್ತಿಯೊಂದಿಗೆ ವಿರುದ್ಧ ಹೋಲಿಕೆ ಮಾಡಲ್ಪಟ್ಟಿದ್ದಾಳೆ: ಜಾರಸ್ತ್ರೀಯು ಐಶ್ವರ್ಯವನ್ನು ಧರಿಸಿಕೊಂಡಿದ್ದಾಳೆ; ಮದಲಗಿತ್ತಿಯು ನೀತಿಯನ್ನು ಧರಿಸಿಕೊಂಡಿದ್ದಾಳೆ. ಜಾರಸ್ತ್ರೀಯು ಕಾಮಾಭಿಲಾಷೆಯಿಂದ ಪ್ರೇರಿತವಾದವಳು; ಮದಲಿಗಿತ್ತಿಯು ಪ್ರೀತಿಯಿಂದ ಪ್ರೇರಿಸಲ್ಪಡುತ್ತಾಳೆ. ಜಾರಸ್ತ್ರೀಯು ಕಾಮವನ್ನು ಒಪ್ಪಂದ ಆಧಾರದಲ್ಲಿ ವಿತರಿಸುತ್ತಾಳೆ; ಮದಲಗಿತ್ತಿಯು ಸಮರ್ಪಣೆಯ ನಿಮಿತ್ತವಾಗಿ ಪ್ರೀತಿಯನ್ನು ಸುರಿಸುವಳು. ಜಾರಸ್ತ್ರೀಯು ಸ್ವಾರ್ಥ-ಚಿಂತಕಳು; ಮದಲಗಿತ್ತಿಯು ತನ್ನ ಗಂಡನ (ಯೇಸು) ಕುರಿತು ಕಳಕಳಿಯುಳ್ಳವಳು. ಇನ್ನು ಕೆಲವು ವಿರೋಧ ಹೋಲಿಕೆಗಳನ್ನು ಮಾಡಬಹುದು: ಜಾರಸ್ತ್ರೀಯು ಮುದ್ದು ಮಾಡಲ್ಪಡುತ್ತಿದ್ದರೆ, ಮದಲಗಿತ್ತಿಗೆ ಹಿಂಸೆ ಮಾಡಲ್ಪಡುತ್ತಿತ್ತು. ಇಬ್ಬರ ಕುರಿತಾಗಿಯೂ ಅವರು ಎರಡು ಬಹಳ ಭಿನ್ನವಾದ *ನಗರಗಳು* ಎಂಬುದಾಗಿ ಮಾತಾಡಲ್ಪಟ್ಟಿದ್ದಾರೆ. ಒಬ್ಬಳು "ಹೊಸ ಬಾಬೆಲ್" ಆಗಿದ್ದರೆ ಮತ್ತೊಬ್ಬಳು "ಹೊಸ ಯೆರೂಸಲೇಮ್" (21:2). ಮದಲಗಿತ್ತಿಯು ಸಭೆಯನ್ನು ಪ್ರತಿನಿಧಿಸುವವಳಾಗಿದ್ದಳು - ನಿಖರವಾಗಿ, ನಂಬಿಗಸ್ತ ಸಭೆಯನ್ನು ಪ್ರತಿನಿಧಿಸುವವಳು (19:7-19ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಜಾರಸ್ತ್ರೀ ಹಾಗೂ ಮದಲಗಿತ್ತಿಯರ ಗುಣಸ್ವಭಾವ, ಸ್ಥಾನ ಹಾಗೂ ಅಂತ್ಯಸ್ಥಿತಿಗಳಲ್ಲಿ ವ್ಯತ್ಯಾಸಗಳಿರುತ್ತವೆ.

## ಬಾಬೇಲಿನ ಆಮೀಷ (17:1-6)

17:1-6ರ ಮೇಲಿನ ಒಂದು ಪಾಠಕ್ಕಾಗಿ ಬಳಸಲ್ಪಡಬಹುದಾದ ಕೆಲವೊಂದು ಶಿರ್ಷಿಕೆಗಳು ಇಲ್ಲಿವೆ: "ಮಹಾ ಬಾಬೆಲ್ ನಗರಿಯು ಬಿದ್ದು ಹೋದಳು!"; ಶೋಧನೆಯ ಮೂರ್ತೀಕರಣ"; ಅಥವಾ "ಕೆಟ್ಟತನದ ಮುಖವಾಡ." ಇನ್ನೊಂದು ಸಾಧ್ಯತೆಯು ಏನೆಂದರೆ "ಮಹಾ ಜಾರಸ್ತ್ರೀಯ ಆಳಿಕೆ ಮತ್ತು ಅಳಿಯುವಿಕೆ." ನಿಮಗೆ ವಿಚಿತ್ರವಾದ ಶಿರ್ಷಿಕೆಗಳು ಇಷ್ಟವಾಗುವದಾದರೆ, ಆ ರೀತಿಯ ಒಂದು ಶಿರ್ಷಿಕೆ ಇಲ್ಲಿದೆ: "ಪ್ರೀತಿಯನ್ನು ಬರೀ ತಪ್ಪಾದ ಸ್ಥಳಗಳಲ್ಲಿ ಹುಡುಕಾಡುವದು."

## ಮಹಾ ಜಾರಸ್ತ್ರೀ (17:1-6)

ಮಹಾ ಜಾರಸ್ತ್ರೀಯ ಮೋಹಕ್ಕೊಳಗಾಗುವದರಿಂದ ದೂರವಿರುವದಕ್ಕೆ ನಾಲ್ಕು ಮಾರ್ಗಸೂಚಿಗಳನ್ನು ಗಮನಕ್ಕೆ ತೆಗೆದುಕೊಳ್ಳುವದು ಪ್ರಾಮುಖ್ಯವಾಗಿದೆ: (1) ಪಾಪದಭೋಗವನ್ನು ಕಡಿಮೆಯೆಂದು ಎಣಿಸದಿರಿ; ಅವುಗಳ ಪ್ರಲೋಭನೆಯನ್ನುಂಟು ಮಾಡುವಂಥವುಗಳು. (2) ಪಾಪದ ನಿಜವಾದ ಸ್ವಭಾವವನ್ನು ನಿರ್ಲಕ್ಷ್ಯ ಮಾಡದಿರಿ; ಅದು ಕೀಳುಮಟ್ಟಕ್ಕೆ ಇಳಿಸುವಂಥದ್ದು. (3) ಈ ಲೋಕವನ್ನು ಪ್ರೀತಿಸಬೇಡಿರಿ; ಅದು ಗತಿಸಿ ಹೋಗುವಂಥದ್ದು. (4) ನಿಮ್ಮ ದೃಷ್ಟಿಯನ್ನು ಯೇಸುವಿನ ಮೇಲೆ ಇಡಿರಿ, ಹೀಗಾದರೆ ನೀವು ಲೋಕದಿಂದ ವಿಸ್ಮಯಕ್ಕೊಳಗಾಗುವದಿಲ್ಲ. ಪೌಲನಿಗೆ ಶರೀರಾಧೀನಸ್ವಭಾವದ ಬಲಹೀನತೆಯ ಅರಿವು ಇತ್ತು (ರೋಮಾ 7:14, 15). ಆತನು ಎಡೆಬಿಡದೆ ತನ್ನ ದೇಹವನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕಾಗಿತ್ತು - ಅದನ್ನು ಅಧೀನತೆಯಲ್ಲಿಟ್ಟುಕೊಳ್ಳುವದು - ಹೀಗೆ,

ಆತನು ಬೇರೆಯವರಿಗೆ ಉಪದೇಶ ಮಾಡಿದ ಮೇಲೆ ತಾನೇ ಬಿರುದನ್ನು ಕಳೆದುಕೊಳ್ಳುವವನಾಗಬಾರದು ಎಂಬುದು ಆತನ ಉದ್ದೇಶವಾಗಿತ್ತು (1 ಕೊರಿಂಥ 9:27). ಪೌಲನು ಶರೀರಾಧೀನಸ್ವಭಾವದ ವಿರುದ್ಧ ಹೋರಾಡುವದು ಅಗತ್ಯವಾಗಿದ್ದಲ್ಲಿ, ನಮಗೆ ಇನ್ನೆಷ್ಟು ಅಧಿಕವಾಗಿ ಅಗತ್ಯವಿರುತ್ತದೆ!

ಮಧ್ಯಯುಗಗಳಲ್ಲಿ, ಸ್ಪೇನಿನ ವಿಚಾರಣಾಧಿಕಾರಿಗಳು "ಕನ್ಯೆ" ಎಂದು ಕರೆಯಲ್ಪಡುವ ಒಂದು ಹಿಂಸೆ ಪಡಿಸುವ ಸಾಧನವನ್ನು ಬಳಸುತ್ತಿದ್ದರು. ಅದು ಮಾದಕವಾದ ಉಡುಪುಗಳನ್ನು ತೊಟ್ಟಿದ್ದ ಒಬ್ಬ ಸುಂದರವಾದ ಸ್ತ್ರೀಯ ರೂಪದಲ್ಲಿರುತ್ತಿತ್ತು. ಒಂದು ಸಂಗಕ್ಕೆ ಕರೆಯುವ ಮುಗುಳ್ನಗೆಯು ಆಕೆಯ ಮುಖದಲ್ಲಿರುತ್ತಿತ್ತು, ಮತ್ತು ಆಕೆಯ ಬಾಹುಗಳು ಅಗಲವಾಗಿ ಚಾಚಲ್ಪಟ್ಟಿರುತ್ತಿದ್ದವು. ನತದೃಷ್ಟನನ್ನು "ಕನ್ಯೆಯನ್ನು ಚುಂಬಿಸುವಂತೆ" ಆಕೆಯ ಬಾಹುಗಳಲ್ಲಿ ತಳ್ಳಲಾಗುತ್ತಿತ್ತು. ಆಗ ಆಕೆಯ ಕೈಗಳು ತನ್ನ ಬಾಹುಗಳಲ್ಲಿ ಗಟ್ಟಿಯಾಗಿ ಮಾರಣಾಂತಿಕ ಅಪ್ಪುಗೆಯಲ್ಲಿ ಹಿಡಿದುಕೊಳ್ಳುತ್ತಿದ್ದವು, ಮತ್ತು ಆತನನ್ನು ಮರೆಯಾಗಿರುತ್ತಿದ್ದ ನೂರಾರು ಕತ್ತಿಗಳು ಹೊಕ್ಕು ಹೊರ ಬರುತ್ತಿದ್ದವು.[45] ಅದೇ ರೀತಿಯಲ್ಲಿಯೇ, ಬಾಬೆಲೆಂಬವಳು ಜನರನ್ನು ತನ್ನ ನಿಷೇಧಿಸಲ್ಪಟ್ಟ ಸುಖಗಳನ್ನು ಆನಂದಿಸುವಂತೆ ಆಹ್ವಾನಿಸುವವಳಾಗಿ ಮುಗುಳ್ನಗೆಯ ಮುಖವನ್ನಿಟ್ಟುಕೊಂಡಿರುತ್ತಾಳೆ. ಹೇಗೂ, ಅಂತ್ಯದಲ್ಲಿ ಅವರನ್ನು ಸಾವಿರಾರು ದುಃಖಗಳಿಂದ ಇರಿಯುತ್ತಾಳೆ ಹಾಗೂ ಅವರ ಆತ್ಮಗಳನ್ನು ನರಕಕ್ಕೆ ಕಳುಹಿಸುತ್ತಾಳೆ (ರೋಮಾ 6:23). ಆಕೆಯು ಮೂಕಸನ್ನೆಯನ್ನು ಮಾಡುವಾಗ, *ಓಡಿ ಹೋಗಿರಿ!* (ನೋಡಿರಿ 1 ಕೊರಿಂಥ 6:18; 10:14; 1 ತಿಮೊಥೆ 6:11; 2 ತಿಮೊಥೆ 2:22.)

## ವ್ಯಭಿಚಾರ (17:5)

ವ್ಯಭಿಚಾರವನ್ನು ಒಂದು ಒಪ್ಪಬಲ್ಲ ಬೆಳಕು ಎಂಬುದಾಗಿ - ನಾಟಕಗಳು, ಪುಸ್ತಕಗಳು, ಸಿನಿಮಾಗಳು, ಮತ್ತು ಟಿವಿಯ ಕಾರ್ಯಕ್ರಮಗಳ ಮೂಲಕ - ಮುಂದಿಡುವದಕ್ಕೆ ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಪ್ರಯತ್ನವನ್ನು ಮಾಡಲಾಗಿರುತ್ತದೆ. ಹಾಗಿದ್ದರೂ, ಬೈಬಲಿನ ನಿಲುವು ಯಾವಾಗಲೂ ಇದ್ದ ರೀತಿಯಲ್ಲಿಯೇ ಈಗಲೂ ಇರುತ್ತದೆ: ವ್ಯಭಿಚಾರವು ಒಂದು ಪಾಪ - ಪಶ್ಚಾತ್ತಾಪ ಪಟ್ಟು ಅದರಿಂದ ವಿಮುಖವಾಗದ ಆತ್ಮವನ್ನು ನಾಶನಕ್ಕೆ ಈಡು ಮಾಡುವಂಥ ಪಾಪ. ಶಾಸ್ತ್ರಗಳಲ್ಲಿ, ಜಾರಸ್ತ್ರೀಯು ನಿರಂತರವಾಗಿ ನಾಚಿಕೆಗೇಡಿತನ ಅವಿಧೇಯತೆಗೆ ಉದಾಹರಣೆಯಾಗಿ ಬಳಸಲ್ಪಟ್ಟಿದೆ (ನೋಡಿರಿ ಜ್ಞಾನೋಕ್ತಿ 5:3-5; 23:27, 28; ಯೆರೆಮೀಯ 5:7, 9; ಹೋಶೇಯ 3:3; 1 ಕೊರಿಂಥ 6:15, 16). ವ್ಯಭಿಚಾರಿಣಿಯ ಪಾಪವು ಲೈಂಗಿಕ ಪಾಪಗಳಿಗೆ ಬರುವ ಸಾಮಾನ್ಯವಾದ ದಂಡನೆಯನ್ನು (ನೋಡಿರಿ ಗಲಾತ್ಯ 5:19) ಒಳಗೊಂಡಿರುತ್ತದೆ. ವ್ಯಭಿಚಾರದ ಪಾಪದ ವಿಷಯವಾಗಿ, ಎರಡು ಸಂಗತಿಗಳನ್ನು ಒತ್ತಿ ಹೇಳಬೇಕಾಗುತ್ತದೆ. ಮೊದಲನೆಯದು, ಕೆಲವರು ನಂಬುವ ಪ್ರಕಾರ, ಅದು ಪಾಪಗಳಲ್ಲಿಯೇ ಅತ್ಯಂಥ ದೊಡ್ಡದು ಎಂದಾಗಿರುವ ಅವಶ್ಯಕತೆಯಿಲ್ಲ, ಆದರೆ ಇದು ಆತ್ಮಕ್ಕೆ ನಿತ್ಯನಾಶನಕ್ಕೆ ಗುರಿ ಮಾಡಬಲ್ಲ ಒಂದು ಪಾಪವಾ*ಗಿದೆ*. ಎರಡನೆಯದಾಗಿ, ಒಬ್ಬ ವೇಶ್ಯೆಯು ತನ್ನ ಪಾಪಕ್ಕಾಗಿ ಪಶ್ಚಾತ್ತಾಪ ಪಡುವದಾದರೆ, ದೇವರ ಕಡೆಗೆ ತಿರುಗಿಕೊಂಡು ತನ್ನ ಜೀವಿತವನ್ನು ಬದಲಾಯಿಸಿಕೊಳ್ಳುವದಾದರೆ, ಆಕೆಯು ಕ್ಷಮಾಪಣೆಯನ್ನು ಹೊಂದಬಲ್ಲಳು (1 ಕೊರಿಂಥ 6:9-11; ನೋಡಿರಿ ಇಬ್ರಿಯ 11:31; ಯಾಕೋಬ 2:25).

## ದೃಢನಿಶ್ಚಯ (17:14-17)

ನಾವು ಜಯದ ಕುರಿತು ಏಕೆ ದೃಢನಿಶ್ಚಯದಿಂದ ಇರಬಲ್ಲೆವು? ಪ್ರಕಟನೆ 17:14-17 ಕನಿಷ್ಠ ಐದು ಕಾರಣಗಳನ್ನು ಸೂಚ್ಯಾರ್ಥವಾಗಿ ತಿಳಿಸುತ್ತದೆ: (1) ಏಕೆಂದರೆ ಯೇಸುವು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದನು; (2) ಏಕೆಂದರೆ, ಅಂತಿಮವಾಗಿ, ಪಾಪವು ಸ್ವ-ವಿನಾಶಕಾರಿ; (3) ಏಕೆಂದರೆ ದೇವರು ಸಂಪೂರ್ಣವಾಗಿ ನಿಯಂತ್ರಣ ಹೊಂದಿದ್ದಾನೆ; (4) ಏಕೆಂದರೆ ಯೇಸುವು ಸರ್ವರ ಕರ್ತನಾಗಿದ್ದಾನೆ. ಈ ಮೊದಲ ನಾಲ್ಕು ಕಾರಣಗಳು ಅಪರಿವರ್ತನೀಯ ಹಾಗೂ ಬದಲಾಗರಾದವುಗಳು. ಹೇಗೂ, ಐದನೆಯ ಕಾರಣವು ನಮಗೆ ಸಂಬಂಧಪಟ್ಟಂತೆ ನಿರ್ಣಾಯಕವಾಗಿರುವಂಥದ್ದು: (5) ಏಕೆಂದರೆ ಕರ್ತನು ತನ್ನ ಯೋಜನೆಯಲ್ಲಿ ನಮ್ಮನ್ನು ಸೇರ್ಪಡೆಗೊಳಿಸಿಕೊಂಡಿರುತ್ತಾನೆ. ಈ ಕಡೇ ಕಾರಣವು ಒಂದು ಮಾರ್ಪಡಿಸಬಹುದಾದ ಸಂಗತಿಯಾಗಿದೆ: ಅದು ಕೇವಲ "ದೇವರು ಕರೆದವರೂ ದೇವರಾದುಕೊಂಡವರೂ ನಂಬಿಗಸ್ತರೂ ಆಗಿರುವವರಿಗೆ" ಮಾತ್ರವೇ ಆಗಿದೆ.

## ಕುರಿಯಾದಾತನ ಜಯ (17:14)

14ನೇ ವಚನವು ಗ್ರಂಥಪಾಠಾಧಾರಿತ "ಕುರಿಯಾದಾತನ ಮೂಲಕ ಜಯ" ಎಂಬುದರ ಮೇಲಿನ ಪ್ರಸಂಗಕ್ಕೆ ಒಂದು ಉತ್ತಮ ತಳಹದಿಯಾಗಬಲ್ಲದು, ಅದರಲ್ಲಿ "ಕರೆಯಲ್ಪಟ್ಟುವರೂ ಆದುಕೊಳ್ಳಲ್ಪಟ್ಟವರೂ ನಂಬಿಗಸ್ತರೂ" ಎಂಬ ಪದಗಳ ಮೇಲೆ ವಿಶೇಷ ಒತ್ತು ಕೊಡಲ್ಪಡಬೇಕಾಗಿರುತ್ತದೆ. ನೀವು ಬರೀ "ಕರೆಯಲ್ಪಟ್ಟವರು, ಆದುಕೊಳ್ಳಲ್ಪಟ್ಟವರು, ಮತ್ತು ನಂಬಿಗಸ್ತರು" ಎಂಬುದರ ಮೇಲಷ್ಟೇ ಪ್ರಸಂಗಿಸುವದಕ್ಕೆ ಬಯಸಬಹುದು. ಪ್ರತ್ಯೇಕವಾಗಿ ಈ ಮೂರು ಪದಗಳು ಹೊಸ ಒಡಂಬಡಿಕೆಯಲ್ಲಿ ದೇವರ ಜನರನ್ನು ಸೂಚಿಸುವದಕ್ಕೆ ಲೆಕ್ಕವಿಲ್ಲದಷ್ಟು ಸಾರಿ ಬಳಸಲ್ಪಟ್ಟಿರುತ್ತವೆ.

## ಕ್ರಿಸ್ತನು ಮತ್ತು ಆತನ ರಾಜ್ಯ (17:14)

ಪ್ರಕಟನೆ 17:14ನೇ ವಚನವು ಕ್ರಿಸ್ತನನ್ನು "ಕರ್ತರ ಕರ್ತನೂ ರಾಜಾಧಿರಾಜನೂ" ಆಗಿರುವ ಜಯಶಾಲಿಯಾದ ಕುರಿಯಾದಾತನಾಗಿ ಚಿತ್ರಿಸುತ್ತದೆ. ಕ್ರಿಸ್ತನ ಆಳ್ವಿಕೆಯ ವಿಷಯವಾಗಿ, Napoleonನು ಹೀಗೆ ಹೇಳಿದನು,

> ನೀವು ಸಾಮ್ರಾಜ್ಯಗಳ ಹಾಗೂ ಶಕ್ತಿಯ ಕುರಿತು ಮಾತಾಡುವಿರಿ. ಸರಿ, ಮಹಾ ಅಲೆಗ್ಸಾಂದ್ರ, ಜ್ಯೂಲಿಯಸ್ ಕೈಸರ, ಚಾರ್ಲೆಮಾಗ್ನೇ ಮತ್ತು ನಾನು ಎಲ್ಲರೂ ಸಾಮ್ರಾಜ್ಯಗಳನ್ನು ಸ್ಥಾಪಿಸಿದವರು, ಆದರೆ ನಾವು ಅವುಗಳನ್ನು ಯಾವುದರ ಮೇಲೆ ಸ್ಥಾಪಿಸಿದೆವು? ಶಕ್ತಿಯ ಮೇಲೆ. ಕ್ರಿಸ್ತನು ತನ್ನ ಸಾಮ್ರಾಜ್ಯವನ್ನು ಪ್ರೀತಿಯ ಮೇಲೆ ಸ್ಥಾಪಿಸಿದನು, ಮತ್ತು ಈ ಕ್ಷಣದಲ್ಲಿ ಆತನಿಗೋಸ್ಕರ ಮರಣಿಸುವದಕ್ಕಾಗಿ ಲಕ್ಷಾಂತರ ಜನರು ಸಿದ್ಧವಾಗಿರುತ್ತಾರೆ ... ನನಗೆ ಯಾವದೇ ಸೈನ್ಯ, ಧ್ವಜವಾಗಲಿ ಅಥವಾ ಟಗರುದಿಮ್ಮಿಯಾಗಲಿ ಕಾಣಿಸುತ್ತಿಲ್ಲ; ಆದಾಗ್ಯೂ ಅಲ್ಲೊಂದು ನಿಗೂಢವಾದ ಶಕ್ತಿಯು ಇರುತ್ತದೆ, ಕ್ರೈಸ್ತತ್ವದ ಪರವಾಗಿ ಕೆಲಸ ಮಾಡುತ್ತಿದೆ - ಮನುಷ್ಯರು ಅಲ್ಲಿ ರಹಸ್ಯವಾಗಿ ಪೋಷಿಸಲ್ಪಡುತ್ತಾರೆ ಮತ್ತು ಆ ಮೂಲಕ ಅದೃಶ್ಯವಾದ ಶ್ರೇಷ್ಠತೆಯೊಂದರಲ್ಲಿ ಒಂದು ಸಾಮಾನ್ಯವಾಗಿರುವ ನಂಬಿಕೆಯಿಡಲ್ಪಟ್ಟಿರುತ್ತದೆ. ನಾನು ನನ್ನ ಕಾಲಕ್ಕೆ ಮುಂಚೆಯೇ ಮರಣಿಸುವೆನು, ಮತ್ತು ನನ್ನ ದೇಹವನ್ನು ಹುಳುಗಳಿಗೆ ಆಹಾರವಾಗಿ ಭೂಮಿಯಲ್ಲಿ ಹೂಣಲ್ಪಡುವದು. ಮಹಾ ನೆಪೋಲಿಯನ್ ಎಂದು ಕರೆಯಲ್ಪಡುವವನ ಅಂತ್ಯಾವಸ್ಥೆಯು ಅಂತಹದ್ದಾಗಿದೆ. ಆದರೆ ಕ್ರಿಸ್ತನನ್ನು ನೋಡಿರಿ, ಪ್ರತಿಯೊಂದು ದೇಶದಲ್ಲಿಯೂ ಘನತೆಗೂ ಪ್ರೀತಿಗೂ ಪಾತ್ರನಾಗಿರುವವನು. ಆತನ ರಾಜ್ಯವನ್ನು ನೋಡಿರಿ,

ಮಿಕ್ಕ ಎಲ್ಲಾ ರಾಜ್ಯಗಳ ಮೇಲೆಯೂ ಉನ್ನತಕ್ಕೇರುತ್ತಿದೆ. ಆತನ ಜೀವಿತವು ಒಬ್ಬ ಮನುಷ್ಯನ ಜೀವಿತವಾಗಿರಲಿಲ್ಲ; ಆತನ ಮರಣವು ಒಬ್ಬ ಮನುಷ್ಯನ ಮರಣವಲ್ಲ ಆದರೆ ದೇವರದ್ದಾಗಿತ್ತು.[46]

---

## ಅಡಿಟಿಪ್ಪಣಿಗಳು

[1]William Barclay, *The Revelation of John,* vol. 2, rev. ed., The Daily Study Bible Series (Philadelphia: Westminster Press, 1976), 134. [2]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 349. [3]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 220. [4]Edward A. McDowell, *The Meaning and Message of the Book of Revelation* (Nashville: Broadman Press, 1951), 169. [5]J. W. Roberts, *The Revelation to John (The Apocalypse)*, The Living Word Commentary, ed. Everett Ferguson (Austin, Tex.: Sweet Publishing Co., 1974), 136. [6]Merrill C. Tenney, *The Book of Revelation*, Proclaiming the New Testament (Grand Rapids, Mich.: Baker Book House, 1963), 92. [7]Robert H. Mounce, *The Book of Revelation,* The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 273. [8]James M. Efird, *Revelation for Today* (Nashville: Abingdon Press, 1989), 103. [9]Swete, 220. [10]Hailey, 350.

[11]Bruce M. Metzger, *Breaking the Code: Understanding the Book of Revelation* (Nashville: Abingdon Press, 1993), 85. [12]Frank Pack, *Revelation,* Part 2 (Austin, Tex.: R. B. Sweet Co., 1965), 16. [13]Clarence E. Macartney, *Macartney's Illustrations* (Nashville: Abingdon Press, 1965), 413–14. [14]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 159. [15]ಈ ವಾಕ್ಯವು Daniel Russell, *Preaching the Apocalypse* (New York: Abingdon Press, 1935), 197ದಿಂದ ಆಯ್ದುಕೊಳ್ಳಲ್ಪಟ್ಟಿದೆ. [16]Tacitus *Annals* 15.44. Cornelius Tacitusನು (c. ಕ್ರಿ.ಶ. 56-115) ಒಬ್ಬ ರೋಮನ್ ಪರಿಷತ್ತಿನ ಸದಸ್ಯನಾಗಿದ್ದನು ಮತ್ತು ಅತ್ಯಂಥ ಶ್ರೇಷ್ಠ ರೋಮನ್ ಇತಿಹಾಸಕಾರರಲ್ಲಿ ಒಬ್ಬನಾಗಿದ್ದನು. ಈತನು Domitianನ ನಿರಂಕುಶವಾದಿ ಆಡಳಿತದ ವೇಳೆ ಜೀವಿಸಿದವನು. [17]Mounce, 310. See Juvenal *Satires* 6.114–32. [18]Quoted in Barclay, 145. Lucius Annaeus Senecaನು (c. 4 ಕ್ರಿ.ಪೂ.-ಕ್ರಿ.ಶ. 65) ಗ್ರೀಕ್ ಸ್ತೋಯಿಕರ ಸಂಪ್ರದಾಯದಲ್ಲಿ ಪ್ರಸಿದ್ಧ ತತ್ವಜ್ಞಾನಿಯಾಗಿದ್ದನು. ನಿರೋ ಚಕ್ರವರ್ತಿಯು ಆತನನ್ನು ಆತ್ಮಹತ್ಯೆ ಮಾಡಿಕೊಳ್ಳುವಂತೆ ಒತ್ತಾಯಿಸಿದನು. [19]Mounce, 307. (ಒತ್ತಿ ಹೇಳಿದ್ದು ನನ್ನದು.) [20]ಕಡೇ ನಾಲ್ಕು ವಾಕ್ಯಗಳು Hailey, 343ದಿಂದ ಆಯ್ದುಕೊಳ್ಳಲ್ಪಟ್ಟಿವೆ.

[21]Swete, 217. [22]Hailey, 350. [23]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 168. [24]Efird, 103. [25]Hailey, 350. [26]Mounce, 314. [27]Henry Alford, *Alford's Greek Testament: An Exegetical and Critical Commentary*, vol. 4 (London: Rivingtons, 1868; reprint, Grand Rapids, Mich.: Guardian Press, 1976), 710. [28]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 228. [29]Roberts, 141. [30]Wilcock, 164.

[31]Mounce, 315. [32]Roberts, 143. [33]Mounce, 317. [34]Leon Morris, *Revelation,* rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 204. [35]Mounce, 315. [36]Morris, 205. [37]F. W. Farrar, *History's Witness to Christ*, quoted in Jim McGuiggan, *The Book of Revelation*, Looking Into The Bible Series (Lubbock, Tex.: International Biblical Resources, 1976), 27–28. [38]Morris, 206. [39]Ray Summers, *Worthy Is the Lamb* (Nashville: Broadman Press, 1951), 90. [40]Martin H. Franzmann, *The Revelation to John* (St. Louis: Concordia Publishing House, 1976), 119.

[41]Hailey, 355. [42]Swete, 225. [43]Philip E. Hughes, *The Book of the Revelation: A Commentary* (Grand Rapids, Mich.: Wm. B. Eerdmans Publishing Co., 1990), 188. [44]Hailey, 356. [45]ಈ ದೃಷ್ಟಾಂತವು David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 186ದಿಂದ ಆಯ್ದುಕೊಳ್ಳಲ್ಪಟ್ಟಿದೆ. [46]Burgess, 36ದಲ್ಲಿ ಉಲ್ಲೇಖಿಸಲ್ಪಟ್ಟಿದೆ.